# ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 21 ಸಂಚಿಕೆ 29

ಜುಲೈ 13-19, 1998 ರೂ. 2.00


# ಸ್ವಯಂಕೃತಾಪರಾಧಗಳಿಂದಲೇ ಬಿ.ಜೆ.ಪಿ. ಸರ್ಕಾರದ ಅಸ್ಥಿರತೆ

**ಎಲ್ಲೆಡೆಗಳಿಂದ ಸಮಸ್ಯೆಗಳ ಬಲೆಯೊಳಗೆ ಸಿಲುಕಿದ್ದು ಅದರಿಂದ ಹೊರಬರಲು ಸಾಧ್ಯವಾಗದ ಸರಕಾರದ ನೇತೃತ್ವ ವಹಿಸಿಕೊಂಡಿರುವ ಬಿ.ಜೆ.ಪಿ.ಯ ಮುಖಂಡರು ಈಗ ತಮ್ಮ ಸರಕಾರವನ್ನು ಅಸ್ಥಿರಗೊಳಿಸಲಾಗುತ್ತಿದೆ ಎಂದು ಎಡಪಕ್ಷಗಳನ್ನು, ಕಾಂಗ್ರೆಸ್‌ನ್ನು ಆಪಾದಿಸಲಾರಂಭಿಸಿದ್ದಾರೆ. ಇದೊಂದು ಯಾರೂ ನಂಬಲಾರದ ಟೊಳ್ಳು ಮಾತು. ಈ ಸರಕಾರವನ್ನು ಅಸ್ಥಿರಗೊಳಿಸುವ ಅತಿ ದೊಡ್ಡ ಸಂಗತಿಯೆಂದರೆ ಸರಕಾರದ ಸ್ವಂತ ವಿಫಲತೆ ಹಾಗೂ ಅದರ ಸಮಯ ಸಾಧಕ ಮಿತ್ರಪಕ್ಷಗಳು ಎಂದು ಸಿ.ಪಿ.ಐ.(ಎಂ)ನ ಪೊಲಿಟ್ ಬ್ಯೂರೋ ಸದಸ್ಯರಾದ ಪ್ರಕಾಶ್ ಕಾರಟ್ ಹೇಳಿದ್ದಾರೆ.**

ವಾಜಪೇಯಿ ಸರಕಾರ ಸಮಸ್ಯೆಗಳ ಸಾಗರದಲ್ಲಿ ಮುಳುಗೇಳುತ್ತಿದೆ ಎಂದು ಕಳೆದ ಕೆಲವು ದಿನಗಳ ಘಟನೆಗಳಿಂದ ಸ್ಪಷ್ಟ. ಈ ಸಮಸ್ಯೆಗಳಲ್ಲಿ ಹೆಚ್ಚಿನವು ಅದೇ ತಂದುಕೊಂಡದ್ದು. ಕೆಲವು ಅವರ ಹತೋಟಿಗೆ ಮೀರಿದ ಸಂಗತಿಗಳಿಂದ ಆದದ್ದು. ಅವನ್ನು ಹೇಗೆ ಎದುರಿಸುವುದೆಂದು ದಾರಿಕಾಣದೆ ಸರಕಾರ ಒದ್ದಾಡುತ್ತಿದೆ ಎಂದು ಅವರು ಈ ಬಗ್ಗೆ ಬರೆದ ಲೇಖನವೊಂದರಲ್ಲಿ ಹೇಳಿದ್ದಾರೆ.

ಸರಕಾರಿ ಚಟುವಟಿಕೆಯ ಪ್ರತಿಯೊಂದು ರಂಗದಲ್ಲೂ - ವಿದೇಶಾಂಗ ನೀತಿ, ಆರ್ಥಿಕ ವ್ಯವಹಾರಗಳು, ಕೇಂದ್ರ ರಾಜ್ಯ ಸಂಬಂಧಗಳು, ಸಂಸದೀಯ ವ್ಯವಹಾರ, ಸಮ್ಮಿಶ್ರ ಸರಕಾರದ ನಿರ್ವಹಣೆ ಇವೆಲ್ಲದರಲ್ಲೂ - ಈ ಸರಕಾರದ ದಾಖಲೆ ಶೋಚನೀಯ.

ಜುಲೈ 3 ರಂದು ಸಂಸತ್ತಿನ ಬಜೆಟ್ ಅಧಿವೇಶನ ಮತ್ತೆ ಆರಂಭವಾಗುವ ವೇಳೆಗೆ ಮತ್ತೆ ಜಯಲಲಿತಾರವರ ಒತ್ತಡಗಳಿಂದ ಸರಕಾರ ತತ್ತರಿಸಲಾರಂಭಿಸಿತು. ಈ ಬಾರಿ ಅವರು ಯಾವ ಬಿ.ಜೆ.ಪಿ. ಮುಖಂಡರ ರಾಯಭಾರತ್ವವನ್ನೂ ಒಪ್ಪಲಿಲ್ಲ. ಕೊನೆಗೆ ಜಾರ್ಜ್ ಫರ್ನಾಂಡೀಸ್‌ರೇ ಹೋಗಿ ತಾತ್ಕಾಲಿಕ ರಾಜಿ ಮಾಡಬೇಕಾಯಿತು. ಇದೇ ಫರ್ನಾಂಡೀಸ್‌ರು ಚುನಾವಣೆಯ ಮೊದಲು ಬಿ.ಜೆ.ಪಿ. ಜಯಲಲಿತಾರೊಡನೆ ಚುನಾವಣಾ ಮೈತ್ರಿ ಹೊಂದಲು ನಿರ್ಧರಿಸಿದಾಗ ಅದನ್ನು ಒಪ್ಪಲಿಲ್ಲ ಎಂದು ನೆನಪಿಸಿಕೊಳ್ಳಬಹುದು. ಇಷ್ಟೇ ಅಲ್ಲ ಬಿ.ಜೆ.ಪಿ.ಯ ಇನ್ನೊಂದು ಪ್ರಾದೇಶಿಕ ಮಿತ್ರ ಪಕ್ಷ ಬಿಜು ಜನತಾದಳದೊಳಗೆ ಬಹಿರಂಗ ಬಂಡಾಯವೇ ನಡೆಯಿತು. ಈಗ ಒಂದು ಸ್ಥಿರ ಸರಕಾರವನ್ನು ನಡೆಸುವ ಸಾಮರ್ಥ್ಯ ತಮಗಿದೆಯೆಂಬ ಬಿ.ಜೆ.ಪಿ. ಮುಖಂಡರ ಮಾತುಗಳನ್ನು ಯಾರೂ ನಂಬುವ ಪರಿಸ್ಥಿತಿಯಿಲ್ಲ.

### ‘ಸ್ಪಷ್ಟೀಕರಣ..... ಸ್ಪಷ್ಟೀಕರಣ’

ಈ ‘ಸಮರ್ಥ’ ಪ್ರಧಾನ ಮಂತ್ರಿಗಳಿಗೆ ತನ್ನ ಮಂತ್ರಿಗಳ, ತನ್ನ ಪಕ್ಷದವರ ಬಚ್ಚಿಟ್ಟ ಅಜೆಂಡಾಗಳ ಬಗ್ಗೆ ಸ್ಪಷ್ಟೀಕರಣ ನೀಡುವುದೇ ಮುಖ್ಯ ಕೆಲಸವಾಗಿಬಿಟ್ಟಂತಿದೆ. ಜುಲೈ 9ರಂದು ಸಂಸತ್ತಿನಲ್ಲಿ ಬಿ.ಜೆ.ಪಿ. ನೇತೃತ್ವದ ಸರಕಾರ ಮೀಸಲಾತಿಯ ಮರುವಿಮರ್ಶೆ ಮಾಡುವುದಿಲ್ಲ ಎಂದು ತನ್ನ ಮಿತ್ರ ಪಕ್ಷಗಳಿಗೇ ಸ್ಪಷ್ಟೀಕರಣ ನೀಡಬೇಕಾಯಿತು. ತಮ್ಮ ಸಂಪುಟದ ಮಂತ್ರಿ ರಾಮ್ ಜೇಠ್ಮಲಾನಿಯವರು ಸ್ವಾತಂತ್ರ್ಯದ 50 ವರ್ಷಗಳ ನಂತರ ಮೀಸಲಾತಿಯ ಮರುವಿಮರ್ಶೆಯಾಗಬೇಕಾಗಿದೆ ಎಂದು ಮಾಡಿದ ಟಿಪ್ಪಣಿಗೆ ಸಂಸತ್ತಿನಲ್ಲಿ ಪ್ರತಿಪಕ್ಷ ಮಾತ್ರವಲ್ಲ, ಆಳುವ ಕೂಟದ ಬಿ.ಜೆ.ಪಿ.ಯೇತರ ಪಕ್ಷಗಳೂ ತೀವ್ರ ಆಕ್ಷೇಪವೆತ್ತಿದಾಗ ಅವರಿಂದ ಸ್ಪಷ್ಟೀಕರಣ ಕೇಳಲಾಗುವುದು ಎಂದು ವಾಜಪೇಯಿಯವರು ಹೇಳಬೇಕಾಗಿ ಬಂತು.

ಕೆಲವು ದಿನಗಳ ಹಿಂದೆ ದಿಲ್ಲಿಯ ಬಿ.ಜೆ.ಪಿ. ಸರಕಾರ ಚರ್ಚ್‌ಗಳಲ್ಲಿ ವೈನ್ ನೀಡುವುದರಿಂದ ಅವು ‘ಪೂಜಾಸ್ಥಳ’ದ ನಿರ್ವಚನಗೆ ಬರುವುದಿಲ್ಲ ಎಂದು ಕ್ರಮ ಕೈಗೊಳ್ಳಲು ಮುಂದಾದಾಗಲೂ ಸಹಜವಾಗಿಯೇ ಎಲ್ಲೆಡೆಯಿಂದ ಪ್ರತಿಭಟನೆಗಳು ಬಂದವು. ವಾಜಪೇಯಿಯವರು ಸಂಸತ್ತಿನಲ್ಲಿ ಅದು ಸರಿಯಾದ ಕ್ರಮ ಅಲ್ಲ ಎಂದು ಸ್ಪಷ್ಟೀಕರಣ ನೀಡಬೇಕಾಯಿತು. ವಿಹೆಚ್‌ಪಿಗಳ ಗುಪ್ತ ದೇವಸ್ಥಾನ ರಚನೆ ಕುರಿತಂತೆ ಪ್ರತಿಭಟನೆಯೆದ್ದಾಗಲೂ ಒಂದು ಸ್ಪಷ್ಟೀಕರಣ. ಈ ಸಂಸದೀಯ ಅಧಿವೇಶನದ ಮೊದಲ ದಿನವೇ ಮಹಿಳಾ ಮಿಸಲಾತಿ ಮಸೂದೆಯನ್ನು ಮಂಡಿಸುವ ಆಶ್ವಾಸನೆಯನ್ನು ಈಡೇರಿಸುವುದಿಲ್ಲ ಎಂದು ಸಂಸದೀಯ ವ್ಯವಹಾರಗಳ ಮಂತ್ರಿಗಳಿಂದ ತಿಳಿದಾಗ ಮಹಿಳಾ ಸಂಸತ್ ಸದಸ್ಯರಿಂದ ಬಲವಾದ ಪ್ರತಿಭಟನೆಗಳು ಬಂದವು. ಪ್ರಧಾನ ಮಂತ್ರಿಗಳು ಈ ಅಧಿವೇಶನದಲ್ಲಿ ಅದನ್ನುತರಲಾಗುವುದು ಎಂದು ಇನ್ನೊಂದು ಆಶ್ವಾಸನೆ ನೀಡಿದರು.

### ವೀರಾವೇಶದ ಮಾತುಗಳು ಎಲ್ಲಿ ಹೋದವು?

ಬಾಂಬ್ ಸ್ಫೋಟಿಸಿ ಪಾಶ್ಚಿಮಾತ್ಯರ ನಿರ್ಬಂಧಗಳನ್ನು ಧೈರ್ಯದಿಂದ ಎದುರಿಸುತ್ತೇವೆ ಎಂದೆಲ್ಲಾ ವೀರಾವೇಶದ ಮಾತುಗಳನ್ನಾಡಿದ ಸರಕಾರ ಜಸ್ವಂತ್ ಸಿಂಗ್‌ರನ್ನು ಅಮೇರಿಕಾದ ವಿದೇಶಾಂಗ ಉಪ ಕಾರ್ಯದರ್ಶಿ ಸ್ಟ್ರೋಬ್ ತಾಲ್‌ಬೋಟ್‌ರೊಡನೆ ಚೌಕಾಸಿಗೆ ಕಳಿಸಿದೆ. ಈ ಮಾತುಕತೆಗಳು ಗುಟ್ಟಾಗಿ ನಡೆದಿವೆಯಂತೆ. ಮಾತುಕತೆಯ ಮೊದಲು ಭಾರತ ಬೇಷರತ್ತಾಗಿ ಸಿ.ಟಿ.ಬಿ.ಟಿ.ಗೆ ಸಹಿ ಹಾಕುವ ಪ್ರಯತ್ನ ಮಾಡಲಾಗುತ್ತಿದೆ ಎಂಬ ಅಮೇರಿಕನ್ ವಿದೇಶಾಂಗ ಇಲಾಖೆಯ ಹೇಳಿಕೆಗೆ ಭಾರತದ ವಿದೇಶಾಂಗ ಸಚಿವಾಲಯ ವಿಧ್ಯುಕ್ತವಾಗಿ ಪ್ರತಿಕ್ರಿಯೆ ನೀಡಲಿಲ್ಲ. ಅಮೇರಿಕಾದೊಂದಿಗೆ ಒಂದು ವ್ಯವಹಾರ ‘ಕುದುರಿಸಲು’ ಪ್ರಯತ್ನಿಸಬಹುದು ಎಂದು ಮಾಧ್ಯಮಗಳಿಗೆ ಸರಕಾರ ಇಂಗಿತ ನೀಡಿದೆ. ಅದೇನೆಂದರೆ ಅಮೇರಿಕಾ ಕೆಲವು ಮಿತಿಗಳೊಂದಿಗೆ ಭಾರತ ಪರಮಾಣು ಶಸ್ತ್ರಾಸ್ತ್ರ ಹೊಂದುವುದನ್ನು ಒಪ್ಪಬೇಕು. ಅದಕ್ಕೆ ಪ್ರತಿಯಾಗಿ ಭಾರತ ಸಿಟಿಬಿಟಿಗೆ ಸಹಿ ಹಾಕಬಹುದು. ಜತೆಗೆ ಭಾರತಕ್ಕೆ ಕಳಿಸುವ ದ್ವಿಮುಖ ಉದ್ದೇಶ (ಮಿಲಿಟರಿ ಮತ್ತು ಶಾಂತಿಯುತ)ದ ಉನ್ನತ ತಂತ್ರಜ್ಞಾನದ ಮೇಲಿನ ನಿಷೇಧವನ್ನು ತೆಗೆಯಬಹುದು ಎಂಬುದು ಸರಕಾರದ ತರ್ಕ.

ಇದು ವಂಚನೆಯಲ್ಲದೆ ಮತ್ತೇನೂ ಅಲ್ಲ ಎನ್ನುತ್ತಾರೆ ಪ್ರಕಾಶ್ ಕಾರಟ್.

ಪುಟ 8 ಕ್ಕೆ

## ದೇಶಾದ್ಯಂತ ಅಂಚೆ ನೌಕರರ ಅನಿರ್ದಿಷ್ಟಾವಧಿ ಮುಷ್ಕರ

### ಸಾಮೂಹಿಕ ಸಂಘಟನೆಗಳ ಬೆಂಬಲ

ದೇಶಾದ್ಯಂತ ಜುಲೈ 9ರಿಂದ 6 ಲಕ್ಷ ಅಂಚೆ ನೌಕರರು ಅನಿರ್ದಿಷ್ಟ ಮುಷ್ಕರ ಆರಂಭಿಸಿದ್ದಾರೆ. ಇದರಿಂದ ಅಂಚೆ ವ್ಯವಸ್ಥೆ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ. ಎನ್.ಎಫ್.ಪಿ.ಇ. ಮತ್ತು ಎಫ್.ಎನ್.ಪಿ.ಒ. ಸಂಘಟನೆಗಳ ಕರೆಯ ಮೇರೆಗೆ ಈ ಮುಷ್ಕರ ನಡೆಯುತ್ತಿದೆ. ಆಳುವ ಪಕ್ಷದ ಮುಖಂಡರಿರುವ ಬಿಎಂಎಸ್‌ಗೆ ಸೇರಿದ ಒಂದು ಸಂಘಟನೆ ಈ ಕರೆಯನ್ನು ವಿರೋಧಿಸಿದರೂ ದೇಶದ ಎಲ್ಲೆಡೆ ಈ ಮುಷ್ಕರ ಯಶಸ್ವಿಯಾಗಿ ನಡೆದಿದೆ.

ಅಂಚೆ ಇಲಾಖೆಯಲ್ಲಿ ತಲತಲಾಂತರದಿಂದ ಬಂದಿರುವ ಗುಲಾಮಗಿರಿ ವ್ಯವಸ್ಥೆಯನ್ನು ಕೊನೆಗೊಳಿಸಬೇಕು ಎಂದು ಮತ್ತು ಇತರ ಹಣಕಾಸು ಬೇಡಿಕೆಗಳ ಈಡೇರಿಕೆಗಾಗಿ ಈ ಮುಷ್ಕರ ನಡೆಸಬೇಕಾಗಿದೆ ಎಂದು ಈ ಸಂಘಟನೆಗಳು ಹೇಳಿವೆ. ಸುಮಾರು 3 ಲಕ್ಷದಷ್ಟಿರುವ ‘ಇಲಾಖೇತರ ಸಿಬ್ಬಂದಿ’ ಎನ್ನಲಾಗುವ ನೌಕರರು ಹಲವು ಕಾಲದಿಂದ ಯಾವುದೇ ಸೌಲಭ್ಯಗಳಿಲ್ಲದೆ ಕೆಲಸ ಮಾಡುತ್ತಿದ್ದಾರೆ. ಸರಕಾರವೇ ನೇಮಿಸಿದ ನ್ಯಾಯಮೂರ್ತಿ ತಲ್ವಾರ್ ಸಮಿತಿ ಇವರನ್ನು ‘ಗ್ರಾಮೀಣ ಅಂಚೆ ನೌಕರ” ರೆಂದು ನಾಮಕರಣ ಮಾಡಿ ಈ ಶೋಷಣೆಯನ್ನು ತಪ್ಪಿಸುವ ಶಿಫಾರಸು ಮಾಡಿದರೂ ಸರಕಾರ ಅದನ್ನು ಜ್ಯಾರಿ ಮಾಡುತ್ತಿಲ್ಲ. ಇದನ್ನು ವಿರೋಧಿಸಿ ಕಳೆದ ನವಂಬರ್ 18ರಂದೇ ಅನಿರ್ದಿಷ್ಟ ಮುಷ್ಕರಕ್ಕೆ ನೌಕರರು ಸಿದ್ಧರಾಗಿದ್ದರು. ಆಗಿನ ಸಂಪರ್ಕ ಖಾತೆ ಮಂತ್ರಿಗಳ ಮನವಿ ಮೇರೆಗೆ ಅದನ್ನು ಮುಂದೂಡಲಾಯಿತು.

ಆಗಲೂ ಸರಕಾರ ಏನೂ ಮಾಡಲಿಲ್ಲ. ಜನವರಿ 5 ರಂದು ಒಂದು ದಿನದ ಮುಷ್ಕರಕ್ಕೆ ಜಂಟಿ ಕ್ರಿಯಾ ಸಮಿತಿ ಕರೆ ನೀಡಿತು. ಆಗಿನ ರಾಜಕೀಯ ಅಸ್ಥಿರತೆಯ ವಾತಾವರಣದಲ್ಲೂ ಅದು ಸಂಪೂರ್ಣ ಯಶಸ್ವಿಯಾಯಿತು. ಆದರೂ ಸರಕಾರದ ಅಮೆನಡಿಗೆ ಮಾತ್ರ ಬದಲಾಗಲಿಲ್ಲ. ಇದನ್ನು ಪ್ರತಿಭಟಿಸಿ ಈಗ ಈ ಅಂಚೆ ನೌಕರರು ಮುಷ್ಕರ ನಡೆಸುತ್ತಿದ್ದಾರೆ.

ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆಯ ಕರ್ನಾಟಕ ಶಾಖೆ ಅಂಚೆ ನೌಕರರ ಹೋರಾಟಕ್ಕೆ ತನ್ನ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದೆ.

## ಕರ್ನಾಟಕ ರಾಜ್ಯ ಮಂತ್ರಿಮಂಡಳ ಪುನರ್ರಚನೆ ನೆನೆಗುದಿಗೆ ರಾಜ್ಯ ಆಡಳಿತೆ ಚುರುಕುಗೊಳ್ಳುವುದೆಂದು?

**ಪಿ.ರಾಮಚಂದ್ರರಾವ್**

ಜೆ.ಎಚ್. ಪಟೇಲರು ಇದೀಗ ದಿಲ್ಲಿಯಿಂದ ಹಿಂತಿರುಗಿ ಬಂದವರು ತಮ್ಮ ಮಂತ್ರಿಮಂಡಳದ ವಿಸ್ತರಣೆಯ ಬಗ್ಗೆ ಮೌನ ತಾಳಿದ್ದಾರೆ. ಆದರೆ, ಜನತಾದಳದ ರಾಜ್ಯ ಅಧ್ಯಕ್ಷರಾದ ಬಿ.ಎಲ್. ಶಂಕರ್‌ರವರು “ಸದ್ಯಕ್ಕೆ ಮಂತ್ರಿಮಂಡಳ ವಿಸ್ತರಣೆ ಇಲ್ಲ” ಎಂದು ಹೇಳಿದ್ದಾರೆ... ಇದರಿಂದಾಗಿ, ರಾಜ್ಯದಲ್ಲಿ ಒಂದೆಡೆ ಆಶ್ಚರ್ಯ, ಇನ್ನೊಂದೆಡೆ ಅಸಮಾಧಾನ ಉಂಟಾಗಿದೆ. ಎಲ್ಲರ ಅಭಿಪ್ರಾಯದಲ್ಲಿ ಇದರಿಂದಾಗಿ ರಾಜ್ಯದ ಆಡಳಿತೆಯ ಮೇಲೆ ತೀವ್ರ ಪರಿಣಾಮವುಂಟಾಗುವುದು ಖಂಡಿತ ಎಂದಿದೆ.

ಜೆ.ಎಚ್. ಪಟೇಲರು ಎಲ್ಲರಿಗೆ ತಿಳಿದಂತೆ, ಏಕಾಏಕಿಯಾಗಿ ತಮ್ಮ ಮಂತ್ರಿಮಂಡಳಕ್ಕೆ ಹೊಸ ಆರು ಮಂದಿ ಮಂತ್ರಿಗಳನ್ನು ಸೇರ್ಪಡಿಸಿ ಮಂತ್ರಿ ಮಂಡಳವನ್ನು ಪುನರ್ರಚಿಸಿದರು. ಅಲ್ಲ, ವಿಸ್ತರಿಸಿದರು. ಮೊದಲೇ ಗಜಗಾತ್ರದ ಮಂತ್ರಿ ಮಂಡಳವು ಇನ್ನಷ್ಟು ಗಾತ್ರದಲ್ಲಿ ವಿಸ್ತಾರಗೊಂಡಿತು. ಹಲವು ತಿಂಗಳುಗಳ ಈ ‘ಸಾಧನೆ’, ಜನತಾದಳದ ಶಾಸಕರಲ್ಲಿ ತೃಪ್ತಿ ಉಂಟುಮಾಡುವ ಬದಲು, ಒಂದು ರೀತಿಯಲ್ಲಿ ಅತೃಪ್ತಿಯುಂಟಾಯಿತು ಮಾತ್ರವಲ್ಲ, ಅತೃಪ್ತಿ ಸ್ಫೋಟಗೊಂಡಿತು. ಉಪಮುಖ್ಯಮಂತ್ರಿ ಸಿದ್ಧರಾಮಯ್ಯನವರನ್ನೊಳಗೊಂಡು ಹಲವು ಮಂತ್ರಿಗಳೇ ರಾಜಿನಾಮೆ ಕೊಡುವ ಮಟ್ಟಕ್ಕೇ ಪರಿಸ್ಥಿತಿ ಬಿಗಡಾಯಿಸಿತು. ಇನ್ನೇನು ಮಂತ್ರಿಮಂಡಳವೇ ಕುಸಿಯಿತು ಎಂಬ ಮಟ್ಟಕ್ಕೆ ‘ಅಸಮಾಧಾನ’ ಬೆಳೆಯಿತು ಎನ್ನಬಹುದು.

ಕಾರಣಗಳೇನು? ಎಂದು ಜನರು, ಪತ್ರಕರ್ತರು ಕಂಡುಕೊಳ್ಳಲು ಹತ್ತಾರು ಪ್ರಯತ್ನಗಳನ್ನು ನಡೆಸುತ್ತಿದ್ದವು. ಆದರೆ, ನಿಜವಾದ ಕಾರಣಗಳು ಇನ್ನೂ ಹೊರಬೀಳಲಿಲ್ಲ.

ಆದರೆ, ಜನತಾದಳದೊಳಗೆ ತೀವ್ರ ಗುಂಪುಗಾರಿಕೆ ಪುನಃ ಎದ್ದು ಬಂದುದು ಮಾತ್ರ ಎಲ್ಲರೂ ಕಾಣವಂತಾಯಿತು. ಇದು ಕೇವಲ ಜನತಾದಳದ ಶಾಸಕರ ನಡುವಿನ ‘ವಿವಾದ’ವಾಗುಳಿಯುವ ಬದಲು, ವಿವಿಧ ಜಾತಿಗಳ ಶಾಸಕರು ಬೇರೆ ಬೇರೆ ಸ್ಥಳಗಳಲ್ಲಿ ಮುಖ್ಯವಾಗಿ ವಿವಿಧ ಮಂತ್ರಿಗಳ ಮನೆಯಲ್ಲಿ ಸೇರಿ ‘ಕೂಟ ಸಭೆ’ಗಳನ್ನು ಮಾಡುವ ಮಟ್ಟಕ್ಕೆ ಹೋಯಿತು. ಒಕ್ಕಲಿಗ ಶಾಕರೆಲ್ಲರೂ ಒಂದೆಡೆ ಸೇರುತ್ತಿದ್ದಾರೆ, ರೇವಣ್ಣ, ಬಚ್ಚೇಗೌಡ ಮೊದಲಾದವರು - ಹಿಂದಿನಿಂದ ದೇವೇಗೌಡರ ಆರ್ಶೀವಾದದಿಂದ - ಒಟ್ಟು ಸೇರಿ ಏನೋ ಜೆ.ಎಚ್. ಪಟೇಲ್‌ರ ವಿರುದ್ಧ ಪಿತೂರಿ ಮಾಡುತ್ತಿದ್ದಾರೆ ಎಂಬ ಸುದ್ದಿ ದಟ್ಟವಾಗಿ ಹರಡಿತು. ಅದೇ ವೇಳೆ, ಅದಕ್ಕೆ ಪ್ರತಿಯಾಗಿ ಲಿಂಗಾಯಿತ ಶಾಸಕರು ಎಲ್ಲರೂ ಜೆ.ಎಚ್. ಪಟೇಲರ ಹಿಂದೆ ಅಣಿನೆರೆಯುತ್ತಿದ್ದಾರೆ ಎಂಬು ಸುದ್ದಿ ಹರಡಿತು.

ಒಂದೆಡೆ ಜೆ.ಎಚ್. ಪಟೇಲರು ಒಕ್ಕಲಿಗ ಶಾಸಕರು ಕೆಲವೆಡೆ ಪ್ರತ್ಯೇಕವಾಗಿ ಸೇರುತ್ತಿರುವುದರ ಬಗ್ಗೆ ತಮ್ಮ “ತೀವ್ರ ಖೇದ”ವನ್ನು ವ್ಯಕ್ತಪಡಿಸಿದರೆ, ತಮ್ಮ ಮೇಲೆ ಆಪಾದನೆ ಮಾಡಿದ್ದರಿಂದ ತಾವು ರಾಜಿನಾಮೆ ಕೊಡುತ್ತೇವೆ ಎಂದು ಒಕ್ಕಲಿಗ ಮಂತ್ರಿಗಳು ‘ಹೂಂಕಾರ’ ಮಾಡಲು ಮುಂದಾದರು.

ಕೇವಲ ಶಂಕರ್ ಮತ್ತು ಜೆ.ಎಚ್. ಪಟೇಲರು ಇತರ ಮುಖ್ಯಸ್ಥರನ್ನು ಕೇಳದೆ ಆರು ಮಂತ್ರಿಗಳನ್ನು ಮಂತ್ರಿ ಮಂಡಳಕ್ಕೆ ಸೇರ್ಪಡೆ ಮಾಡಿ, ಇದ್ದ ಐಕ್ಯತೆಯನ್ನು ಮುರಿದಿದ್ದಾರೆ.. ಇದರ ಹಿಂದೆ ಏನೋ ಪಿತೂರಿ ನಡೆಯುತ್ತಿದೆ ಎಂಬ ಅಪಸ್ವರದ ಮಾತು ದಟ್ಟವಾಗಿ ಹಬ್ಬಿತು.

ಕೊನೆಗೆ ಐದು ಮುಖಂಡರು - ಜೆ.ಎಚ್. ಪಟೇಲ್, ಸಿದ್ಧರಾಮಯ್ಯ, ಶಂಕರ್, ದೇವೇಗೌಡರು ಮತ್ತು ಬೊಮ್ಮಾಯಿಯವರು ಸೇರಿ ಯಾವ ರೀತಿಯಲ್ಲಿ ಮಂತ್ರಿ ಮಂಡಳವನ್ನು ಪುನಃ ರಚಿಸುವುದು ಎಂದು ಒಮ್ಮತ ಅಭಿಪ್ರಾಯಕ್ಕೆ ಜನತಾದಳವು ಬಂದಿತು ಎಂದು ತಿಳಿದುಬಂತು. ಇವರು ದಿಲ್ಲಿಯಲ್ಲಿ - ಎಲ್ಲಾ ಶಾಸಕರಿಂದ ದೂರ ಹೋಗಿ ಈ ಬಗ್ಗೆ ಚರ್ಚಿಸಿ ಅಭಿಪ್ರಾಯಕ್ಕೆ ಬರುವುದು ಎಂದು ಸುದ್ದಿ ಬಂತು.

ಹಾಗೂ ಈ ಐದು ಮಂದಿ ಮುಂದಾಳುಗಳು ದಿಲ್ಲಿ ಪ್ರಯಾಣ ಗೈದರು.

ಆದರೆ, ಇನ್ನೇನು ಮಂತ್ರಿ ಮಂಡಳವು ಒಂದೆರಡು ದಿನಗಳಲ್ಲಿ ಪುನರ್ರಚಿಲ್ಪಟ್ಟು,

ಪುಟ 8 ಕ್ಕೆ

## ಒಳಪುಟಗಳಲ್ಲಿ

ಇತಿಹಾಸದ ಪುಟಗಳಿಂದ



# ರಾಬಿನ್ ದ್ವೀಪ ಕತ್ತಲು ಕವಿದ ವರ್ಷಗಳು

*ವರ್ಣಭೇದದ ವಿರುದ್ಧ, ಕರಿಯರ ವಿಮೋಚನೆಯ ಹೋರಾಟಕ್ಕಾಗಿ 27 ವರ್ಷಗಳಷ್ಟು ದೀರ್ಘಕಾಲ ರಾಬಿನ್ ದ್ವೀಪದಲ್ಲಿ 'ಜೀವಾವಧಿ ಶಿಕ್ಷೆ' ಅನುಭವಿಸಿದ ನೆಲ್ಸನ್ ಮಂಡೇಲಾರ ಅದಮ್ಯ ಚೇತನದ ಕಥೆ ಕೇಳುವುದೆಂದರೆ ರೋಮಾಂಚನ ಉಂಟು ಮಾಡುವಂತಹುದು, ಅದರಲ್ಲೂ ಅವರದೇ ಮಾತುಗಳಲ್ಲಿ. ಸ್ವಾತಂತ್ರ್ಯದತ್ತ ದೀರ್ಘ ಪಯಣ (Long Walk to Freedom) ನೆಲ್ಸನ್ ಮಂಡೇಲಾರ ಆತ್ಮ ಕಥನ. 'ರಾಬಿನ್ ದ್ವೀಪ - ಕತ್ತಲು ಕವಿದ ವರ್ಷಗಳು' ಆ ಆತ್ಮ ಕಥನದ ಪ್ರಕರಣ. ಇಲ್ಲಿ ಆಯ್ದ ಆ ಪ್ರಕರಣದ ಭಾಗ ರಾಬಿನ್ ದ್ವೀಪದಲ್ಲಿ ಅವರ ಕರಾಳ ಬದುಕು ಆರಂಭವಾದ ಬಗ್ಗೆ ಹೇಳುತ್ತದೆ..*

ಮಧ್ಯರಾತ್ರಿ ನಿದ್ದೆ ಬಂದಿರಲಿಲ್ಲ. ನಾನು ಸೂರಿನತ್ತ ನೋಡುತ್ತಾ ಮಲಗಿದ್ದೆ. ನನ್ನ ಮೇಲೆ ನಡೆಸಿದ ಮೊಕದ್ದಮೆಯ ಚಿತ್ರಗಳು ನನ್ನ ತಲೆಯಲ್ಲಿ ತಿರುಗುತ್ತಿದ್ದವು. ಜಗುಲಿಯಲ್ಲಿ ಯಾರೋ ಬರುತ್ತಿರುವ ಹೆಜ್ಜೆಯ ಸದ್ದು. ನನ್ನ ಸೆಲ್ ಉಳಿದವರನ್ನು ಇಟ್ಟ ಸೆಲ್‌ಗಳಿಗಿಂತ ದೂರ ಪ್ರತ್ಯೇಕವಾಗಿತ್ತು. ನನ್ನ ಸೆಲ್‌ನ ಬಾಗಿಲು ಬಡಿದ ಶಬ್ದ. ಸರಳುಗಳ ಮೂಲಕ ಕರ್ನಲ್ ಅವ್‌ಕ್ಯಾಂಪ್‌ನ ಮುಖ ಕಾಣಿಸಿತು. "ಮಂಡೇಲಾ ಎಚ್ಚರವಾಗಿದ್ದಿಯಾ" ಎಂದು ಮೆಲು ಧ್ವನಿಯಲ್ಲಿ ಕೇಳಿದ. ಹೌದೆಂದೆ. "ನೀನು ಪುಣ್ಯವಂತ. ನಾವು ಸ್ವಾತಂತ್ರ್ಯ ದೊರೆಯುವ ಕಡೆ ನಿನ್ನನ್ನು ಒಯ್ಯುತ್ತಿದ್ದೇವೆ. ನೀನು ಓಡಾಡಬಲ್ಲೆ ಅಲ್ಲಿ. ನೀನು ಆಕಾಶ ಮತ್ತು ಸಮುದ್ರ ನೋಡಬಲ್ಲೆ. ಬರಿಯ ಬೂದು ಗೋಡೆಗಳನ್ನು ಮಾತ್ರವಲ್ಲ" ಎಂದ.

ಆತನ ದನಿಯಲ್ಲಿ ವ್ಯಂಗ್ಯವಿರಲಿಲ್ಲ. ಆದರೆ ನನಗೆ ಗೊತ್ತಿತ್ತು, ಆತ ಹೇಳುವ ಜಾಗ ನಾನು ಬಯಸುತ್ತಿದ್ದ ಸ್ವಾತಂತ್ರ್ಯ ಕೊಡಲಾರದೆಂದು. "ನೀನು ಗಲಾಟೆ ಮಾಡದಿದ್ದರೆ, ಅಲ್ಲಿ ನಿನಗೆ ಬೇಕಾದ್ದೆಲ್ಲ ಸಿಗುತ್ತೆ" ಎಂದ ಚುಟುಕಾಗಿ ಮಾರ್ಮಿಕವಾಗಿ.

ಆ ಮೇಲೆ ಅವ್‌ಕ್ಯಾಂಪ್ ಉಳಿದೆಲ್ಲರನ್ನೂ ಎಬ್ಬಿಸಿದ. ಎಲ್ಲರೂ ಒಂಟಿ ಸೆಲ್‌ಗಳಲ್ಲಿ ಇದ್ದರು. ತಮ್ಮ ವಸ್ತುಗಳನ್ನು ಕಟ್ಟುವಂತೆ ಆಜ್ಞೆಯಾಗಿತ್ತು. ಹದಿನೈದು ನಿಮಿಷಗಳ ನಂತರ ನಾವೆಲ್ಲ ಪ್ರಿಟೋರಿಯಾ ಜೈಲಿನ ಕಬ್ಬಿಣದ ಕೋಟೆಯಿಂದ ಹೊರ ನಡೆಯುತ್ತಿದ್ದೆವು. ನಾವು ಹೊರಬರುತ್ತಿದ್ದಂತೆ, ತೆರೆಯುವಾಗ ಮುಚ್ಚುವಾಗ ಕರ್ಕಶವಾಗಿ ಕಿರುಗುಟ್ಟುವ ಕಬ್ಬಿಣದ ಬಾಗಿಲುಗಳ ಮಾರ್ದನಿ ಕಿವಿಗೆ ಹೊಡೆಯುತ್ತಿತ್ತು.

ಹೊರ ಬಂದ ಮೇಲೆ ನಾವು ಏಳು ಜನರಿಗೆ- ವಾಲ್ಟರ್, ರೇಮಂಡ್ ಗೂವನ್, ಕ್ಯಾಥಿ, ಆಂಡ್ರ್ಯೂ, ಎಲಿಯಸ್ ಮತ್ತು ನಾನು-ಕೋಳ ತೊಡಿಸಿ ಪೋಲಿಸ್ ವ್ಯಾನ್‌ಗೆ ತುರುಕಿದರು. ಮಧ್ಯರಾತ್ರಿ ಕಳೆದು ಬಹಳ ಹೊತ್ತಾಗಿತ್ತು. ಆದರೆ ನಮಗೆ ಯಾರಿಗೂ ಆಯಾಸವಾಗಿರಲಿಲ್ಲ. ದುಗುಡದ ವಾತಾವರಣ ಇರಲಿಲ್ಲ. ವ್ಯಾನಿನ ಧೂಳು ತುಂಬಿದ ನೆಲದ ಮೇಲೆ, ಹಾಡುತ್ತ ಮಾತನಾಡುತ್ತಾ ಕುಳಿತಿದ್ದೆವು. ನಮ್ಮ ಮೊಕದ್ದಮೆಯ ಕೊನೆಯ ಕ್ಷಣಗಳನ್ನು ಮೆಲುಕು ಹಾಕುತ್ತಾ. ವಾರ್ಡನ್‌ಗಳು ನಮಗೆ ಬ್ರೆಡ್ಡು ಮತ್ತು ತಂಪು ಪಾನೀಯ ಕೊಟ್ಟಿದ್ದರು. ಲೆಫ್ಟಿನೆಂಟ್ ವಾನ್‌ಲಕ್ ನಮ್ಮ ಜತೆ ವ್ಯಾನಿನಲ್ಲಿದ್ದ. ಆತ ಖುಷಿಯಲ್ಲಿರುವಾತ. ನಮ್ಮ ಹಾಡು, ಮಾತುಗಳ ನಡುವಿನ ಮೌನ ಮುರಿದು ಅಯಾಚಿತವಾಗಿ ಹೇಳಿದ "ನೀವೆಲ್ಲಾ ಜೈಲಿನಲ್ಲಿ ಬಾಳ ದಿನ ಇರಲಿಕ್ಕಿಲ್ಲ. ನಿಮ್ಮ ಬಿಡುಗಡೆಗೆ ಒತ್ತಾಯ ಭಾರಿ ಜೋರಾಗಿದೆ. ಒಂದೆರಡು ವರ್ಷದಲ್ಲಿ ಹೊರಗೆ ಬರ್ತೀರಾ-ದೇಶದ ಹೀರೋಗಳಾಗಿ ಜನ ನಿಮಗೆ ಹರ್ಷಧ್ವನಿ ಗೈಯುತ್ತಾರೆ. ಎಲ್ಲರೂ ನಿಮ್ಮ ಮಿತ್ರರಾಗಬಯಸುತ್ತಾರೆ. ಹೆಂಗಸರು ನಿಮ್ಮನ್ನು ಬಯಸುತ್ತಾರೆ. ಆ! ನೀವು ಅದನ್ನು ಸಾಧಿಸಿ ಬಿಟ್ಟಿದ್ದೀರಾ!" ನಾವು ಏನೂ ಹೇಳದೆ ಆತನ ಮಾತು ಕೇಳುತ್ತಿದ್ದೆವು. ಆದರೆ ನಾನು ಒಪ್ಪಿಕೊಳ್ಳಬೇಕು- ಆತನ ಮಾತು ನನಗೆ ಖುಷಿಕೊಟ್ಟಿತ್ತು. ಆದರೆ ದುರದೃಷ್ಟವಶಾತ್ ಆತನ ಭವಿಷ್ಯವಾಣಿ ಮೂವತ್ತು ವರ್ಷಗಳಷ್ಟು ವಿಳಂಬವಾಯಿತು.

ನಾವು ಸದ್ದಿಲ್ಲದೆ, ಗುಟ್ಟಾಗಿ ಮಧ್ಯರಾತ್ರಿಯಲ್ಲಿ ಪೋಲಿಸರ ಸರ್ಪಗಾವಲಿನಲ್ಲಿ ಹೊರಟಿದ್ದೆವು. ಅರ್ಧಗಂಟೆಯಲ್ಲಿ ನಗರದ ಹೊರಗಿರುವ ಮಿಲಿಟರಿ ವಿಮಾನನಿಲ್ದಾಣಕ್ಕೆ ತಲುಪಿದ್ದೆವು. ನಮ್ಮನ್ನು ಒಂದು ಡಕೋಟಾ ವಿಮಾನಕ್ಕೆ ತುರುಕಿದರು. ದೊಡ್ಡ ಮಿಲಿಟರಿ ಸಾಗಾಣಿಕೆ ವಿಮಾನವಾದ ಈ ಡಕೋಟಾ ಒಳ್ಳೆಯ ದಿನಗಳನ್ನು ಕಂಡಂತಿತ್ತು. ವಿಮಾನದಲ್ಲಿ ನಾವು ನಡುಗುತ್ತಾ ಕೂತಿದ್ದೆವು. ಸಾಗಾಣಿಕೆ ವಿಮಾನವಾದ್ದರಿಂದ ಅದರಲ್ಲಿ ಬೆಚ್ಚಗಿಡುವ ವ್ಯವಸ್ಥೆ ಇರಲಿಲ್ಲ. ನಮ್ಮಲ್ಲಿ ಕೆಲವರು ವಿಮಾನದಲ್ಲಿ ಎಂದೂ ಹತ್ತದವರು ಇದ್ದರು. ಅವರಿಗೆ ನಾವು ಹೋಗುವ ಜಾಗಕ್ಕಿಂತ ಪ್ರಯಾಣದ ಬಗೆಗೆ ಆತಂಕವಿದ್ದಂತಿತ್ತು. ಎತ್ತರದ ಗೋಡೆಗಳ ಹಿಂದೆ ಸೆಲ್‌ನಲ್ಲಿ ಕೂಡಿ ಹಾಕುವುದಕ್ಕಿಂತ, ಹದಿನೈದು ಸಾವಿರ ಅಡಿ ಎತ್ತರದಲ್ಲಿ ಎತ್ತಿ ಕುಕ್ಕುವುದು ಹೆಚ್ಚು ಅಪಾಯಕಾರಿಯಾಗಿ ಕಾಣಿಸುತ್ತಿತ್ತು.

ಒಂದು ಗಂಟೆ ವಿಮಾನದಲ್ಲಿ ಕಾಲ ಕಳೆದ ಮೇಲೆ, ಕೆಳಗೆ ನಸುಕು ಹರಿದಂತಿತ್ತು. ವಿಮಾನದಲ್ಲಿ ಕೆಳಗೆ ಗಾಜಿನ ಕಿಟಕಿಗಳಿದ್ದವು. ಈಗ ನಸುಕಿನ ಮಂದ ಬೆಳಕಿನಲ್ಲಿ ನೆಲ ಕಾಣಹತ್ತಿತ್ತು. ನಾವು ಓರೇಂಜ್ ಫ್ರೀ ಸ್ಟೇಟ್‌ನ ಬಯಲು ಪ್ರದೇಶ ಹಾಗೂ ಹಸಿರಾದ ಕೇಪ್ ಉಪ ಖಂಡ ದಾಟಿ ದಕ್ಷಿಣ ಪೂರ್ವಕ್ಕೆ ಹೋಗುತ್ತಿದ್ದೆವು. ನಾನೂ ಕೆಳಗಿನ ದೃಶ್ಯ ಗಮನವಿಟ್ಟು ನೋಡತೊಡಗಿದೆ. ಪ್ರವಾಸಿಗನ ದೃಷ್ಟಿಯಿಂದಲ್ಲ. ಗೆರಿಲ್ಲಾ ಸೈನ್ಯ ಅಡಗಲು ಯಾವ ಪ್ರದೇಶಗಳು ಸೂಕ್ತ ಎಂಬ ಹೋರಾಟಗಾರನ ದೃಷ್ಟಿಯಿಂದ.

ಎಂ.ಕೆ. (ANCಯ ಮಿಲಿಟರಿ ವಿಭಾಗ) ರಚಿಸಿದಾಗಿಂದ, ದಕ್ಷಿಣ ಆಫ್ರಿಕಾದ ಗ್ರಾಮೀಣ ಪ್ರದೇಶ ಗೆರಿಲ್ಲಾ ಸೈನ್ಯಕ್ಕೆ ನೆಲೆ ಆಗಬಹುದೇ ಎಂಬ ಬಗ್ಗೆ ವಾಗ್ವಾದ ನಡೆದಿತ್ತು. ಹೈಕಮಾಂಡಿನ ಹೆಚ್ಚಿನವರು ಗ್ರಾಮೀಣ ಪ್ರದೇಶ ನೆಲೆ ಆಗಲಾರದು ಎಂಬ ಅಭಿಪ್ರಾಯ ಹೊಂದಿದ್ದರು. ಕೇಪ್‌ನಲ್ಲಿರುವ ಮಟ್ರೂಸ್ ಬರ್ಗ್ ಎಂಬ ಪರ್ವತ ಕಾಡು ಪ್ರದೇಶದ ಮೇಲೆ ಹೋಗುವಾಗ ನಾನು ನನ್ನ ಸಹಚರರಿಗೆ ಕೂಗಿ ಹೇಳಿದೆ. ಇಲ್ಲಿ ನಾವು ನೆಲೆಗಳನ್ನು ಹೊಂದಿ ಹೋರಾಡಬಹುದು ಅಂತ. ಎಲ್ಲರೂ ಉತ್ಸಾಹದಿಂದ ನೋಡುತ್ತಿದ್ದರು. ಆ ಪ್ರದೇಶ ಗೆರಿಲ್ಲಾ ಸೈನ್ಯದ ನೆಲೆಯಾಗಲು ಪ್ರಶಸ್ತ ಜಾಗವಾಗಿತ್ತು.

ಕೆಲವೇ ನಿಮಿಷಗಳಲ್ಲಿ ಕೇಪ್ ನಗರದ ಹೊರವಲಯದ ಮೇಲೆ ನಾವು ಹಾರುತ್ತಿದ್ದೆವು. ಕೇಪ್ ನಗರದ ಬೆಂಕಿಪೆಟ್ಟಿಗೆಯಂತಹ ಮನೆಗಳು, ಫ್ಲಾಟ್‌ಗಳು, ನಗರ ಕೇಂದ್ರದ ಥಳುಕಿನ ಗೋಪುರಗಳು, ಬೆಟ್ಟದ ಶಿಖರ-ಎಲ್ಲಾ ಕಾಣಿಸುತ್ತಿತ್ತು. ಮತ್ತೆ ಸ್ವಲ್ಪ ಹೊತ್ತಿನಲ್ಲೇ ಕಡು ನೀಲಿ ಬಣ್ಣದ ಅಟ್ಲಾಂಟಿಕ್ ಸಾಗರದಲ್ಲಿ ರಾಬಿನ್ ದ್ವೀಪದ ಗಡಿಗಳು ಕಾಣಿಸತೊಡಗಿದವು.

(ಮುಂದುವರಿಯುವುದು)

# ಕರ್ನಾಟಕದೊಳಗೆ ತೂರಿಬಂದ ಏಶಿಯನ್ ಬಿಕ್ಕಟ್ಟು




ಜೆ.ಎಸ್.ಮಣಿ

ಆಗ್ನೇಯ ಏಶಿಯಾದ ಕರೆನ್ಸಿ ಬಿಕ್ಕಟ್ಟು ಭಾರತವನ್ನು ಯಾವುದೇ ರೀತಿಯಲ್ಲಿ ತಟ್ಟದು, ನಮ್ಮ ಆರ್ಥಿಕ ಮೂಲಾಂಶಗಳು ಬಹಳ ಸುಭದ್ರವಾಗಿವೆ, ಆದ್ದರಿಂದಲೇ ಈ ಬಿಕ್ಕಟ್ಟು ನಮಗೆ ಬಿಸಿ ಮುಟ್ಟಿಸದು ಎಂದು ನಮ್ಮ ಉದಾರೀಕರಣವಾದಿಗಳು ಹೇಳಿಕೊಂಡು ಬಂದಿದ್ದಾರೆ. ಸರ್ಕಾರಗಳು ಇದನ್ನು ಎಲ್ಲರೂ ನಂಬುವಂತೆ ಮಾಡಲು ಪದೇ ಪದೇ ಹೇಳಿಕೆ ನೀಡಿವೆ.

ಆದರೆ ಏಶಿಯನ್ ಬಿಕ್ಕಟ್ಟಿನ ಎಳೆಗಳು ಭಾರತದೊಳಕ್ಕೆ ತೂರಿ ಬಂದಿರುವುದನ್ನು ಯಾರೂ ಮುಚ್ಚಿಡಲು ಸಾಧ್ಯವಿಲ್ಲವಲ್ಲ. ಇಲ್ಲೇ ನಮ್ಮ ಕರ್ನಾಟಕದ ಜನರ ಬದುಕಿನೊಳಗೆ ನೋವಿನ ಚಳಕು ಹರಿಸುತ್ತಿದೆ ಈ ಬಿಕ್ಕಟ್ಟು. ಮುಖ್ಯವಾಗಿ ಈ ಬಿಕ್ಕಟ್ಟಿನ ಎಳೆಗಳು ಕಾಣಿಸಿಕೊಂಡಿರುವುದು ಕರ್ನಾಟಕದ ಜವಳಿ ಉದ್ದಿಮೆಯಲ್ಲಿ. ಕರ್ನಾಟಕದ ಜವಳಿ ಕಾರ್ಖಾನೆಯು ತೀವ್ರ ಹಿಂಜರಿತ ಅನುಭವಿಸುತ್ತಿವೆ. ರಫ್ತಿನ ಮಾರುಕಟ್ಟೆಯಲ್ಲಿ ಸರಕಿನ ನೆರೆ ಬಂದಿರುವುದರಿಂದ ನಮ್ಮ ಈ ಉದ್ದಿಮೆಗಳ ಸರಕುಗಳನ್ನು ಮೂರು ಕಾಸಿಗೂ ಕೊಳ್ಳುವವರಿಲ್ಲವಾಗಿದೆ.

ಉದ್ದಿಮೆಯ ವಕ್ತಾರರ ಪ್ರಕಾರ ರಫ್ತು ಶೇ 50 ರಷ್ಟು ಕುಸಿದಿದೆಯಂತೆ. ಸರಕು ಬಿಕರಿಯಾಗದೆ ರಾಶಿ ರಾಶಿಯಾಗಿ ಬೀಳುತ್ತಿದೆ. ಈಗಾಗಲೇ 213 ಘಟಕಗಳು ಮುಚ್ಚಿಹೋಗಿವೆ. ಜವಳಿ ಗಿರಣಿಗಳು ತಮ್ಮ ಒಟ್ಟು ಉತ್ಪಾದನೆಯ ಸಾಮರ್ಥ್ಯದ ಬರೀ ಶೇ 30 ರಿಂದ 40 ರಷ್ಟನ್ನು ಮಾತ್ರ ಬಳಸಲು ಸಾಧ್ಯವಾಗುತ್ತಿದೆ.

ಇಂತಹ ಪರಿಸ್ಥಿತಿಯಲ್ಲಿ ಏನು ಮಾಡಬೇಕು? ಸರ್ಕಾರ ಮಧ್ಯ ಪ್ರವೇಶಿಸಿ ಈ ಉದ್ದಿಮೆಗೆ ಬೇಕಾದ ಹಣಕಾಸು ನೆರವನ್ನು ನೀಡಬೇಕು. ಬೇರೆ ಮಾರುಕಟ್ಟೆ ಗಳನ್ನೂ ಅವು ಹುಡುಕಿಕೊಳ್ಳಲು ನೆರವಾಗಬೇಕು. ಇವು ಕನಿಷ್ಠ ಕ್ರಮಗಳು. ಆದರೆ ಉದಾರೀಕರಣ ಬಂದ ಮೇಲೆ ಸರ್ಕಾರದ ಮಧ್ಯ ಪ್ರವೇಶಕ್ಕೆ ಅವಕಾಶವೇ ಇಲ್ಲವಲ್ಲ. ಮಾರುಕಟ್ಟೆ ಶಕ್ತಿಗಳು ಹೇಗೆ ಎಳೆದಾಡುತ್ತವೋ ಹಾಗೆ ಎಳೆದಾಡಿಸಿಕೊಳ್ಳಬೇಕು.

ಇಲ್ಲಿ ಮುಖ್ಯವಾಗಿ ನೋವನುಭವಿಸುತ್ತಿರುವವರು ಕಾರ್ಮಿಕರು. ಉದ್ದಿಮೆಗಳು ಮುಚ್ಚಿದಂತೆಲ್ಲ ಕೆಲಸ ಕಳೆದುಕೊಂಡು ಬೀದಿಗೆ ಬರುವ ಕಾರ್ಮಿಕರು ತಮ್ಮ ಉಳಿವಿಗಾಗಿ ಹೋರಾಡುವಂತಾಗುತ್ತದೆ. ಜನರ ಬಗ್ಗೆ ಕಾಳಜಿಯಿರುವ ಸರ್ಕಾರ ಯಾವುದೂ ಉದಾರೀಕರಣವನ್ನು ಜಾರಿಗೆ ತರಲಾರದು ಅಲ್ಲವೇ?

## ಅಶೋಕ್ ಲೇಯ್ಲ್ಯಾಂಡ್‌ನ ಮುಳುಗು

ಹಿಂದೂಜಾ ಕುಟುಂಬದ ಪ್ರತಿಷ್ಠಿತ ಕಂಪನಿಯಾದ ಅಶೋಕ್ ಲೇಯ್ಲ್ಯಾಂಡ್ ಎಂಬ ಲೇಯ್ಲ್ಯಾಂಡ್ ಗಾಡಿಗಳನ್ನು ತಯಾರಿಸುವ ಕಂಪನಿ ತೀವ್ರ ಬಿಕ್ಕಟ್ಟು ಅನುಭವಿಸುತ್ತಿದೆ. ಈ ಕಂಪನಿಯ ಮಾರಾಟ ಮತ್ತು ನಿವ್ವಳ ಲಾಭದಲ್ಲಿ ತೀವ್ರ ಕುಸಿತ ಉಂಟಾಗಿದ್ದು ಮುಚ್ಚುವ ಸ್ಥಿತಿಗೆ ಅದು ಬಂದಿದೆಯಂತೆ. ಈಗಾಗಲೇ ವಾರದಲ್ಲಿ ಮೂರು ದಿನಗಳು ಮಾತ್ರ ಕೆಲಸ ಮಾಡುವಂತಹ ಪರಿಸ್ಥಿತಿ ಉಂಟಾಗಿದ್ದು ಕಂಪನಿ ಮುಚ್ಚುವ ಸಾಧ್ಯತೆಗಳು ಇವೆ ಎಂದು ಹೇಳಲಾಗುತ್ತಿದೆ.

ಕಳೆದ ಸಾಲಿನಲ್ಲಿ ಅಂದರೆ 1997-98 ರಲ್ಲಿ ಈ ಕಂಪನಿಯ ಮಾರಾಟದಲ್ಲಿ ಶೇ. 18.90 ರಷ್ಟು ಕುಸಿತವಾದರೆ, ಲಾಭದಲ್ಲಿ ಶೇ. 36.1 ರಷ್ಟು ಕುಸಿತವಾಗಿದೆ. ನಿವ್ವಳ ಲಾಭದಲ್ಲಿ ಶೇ. 85.26 ರಷ್ಟು ಕುಸಿತ ವಾಗಿದೆ. ಹೀಗೆ ಕುಸಿತ ಉಂಟಾಗಿರುವುದು ಮಾರುಕಟ್ಟೆಯ ಪರಿಸ್ಥಿತಿಯಿಂದಾಗಿ ಎಂದು ಹೇಳಲಾಗುತ್ತಿದೆ.

ವೆಚ್ಚ ಕಡಿಮೆ ಮಾಡಲು ಹಲವು ಕ್ರಮಗಳನ್ನು ಕೈಗೊಂಡಿರುವ ಈ ಕಂಪನಿ ತನ್ನ ಹಲವು ಯೋಜನೆಗಳನ್ನು ಸ್ಥಗಿತಗೊಳಿಸಿದೆ.

ಉದಾರೀಕರಣ ಜನರಿಗೆ ತರುವ ಸೌಭಾಗ್ಯಕ್ಕೆ ಇದು ಮತ್ತೊಂದು ಉದಾಹರಣೆ. ಲೇಯ್ಲ್ಯಾಂಡ್ ಸಣ್ಣ ಕಂಪನಿಯೇನಲ್ಲ. ಇಂತಹ ದೊಡ್ಡ ಕಂಪನಿಗಳೂ ಮಾರುಕಟ್ಟೆಯ ತೊಯ್ದಾಟಕ್ಕೆ ಸಿಕ್ಕು ಪರದಾಡುವಂತಾಗುವುದಾದಲ್ಲಿ ಇಂತಹ ಕಂಪನಿಯ ಮೇಲೆ ಅವಲಂಬಿತವಾಗಿರುವ ಸಹಸ್ರಾರು ಜನರ ಬದುಕು ಅಲ್ಲೋಲ ಕಲ್ಲೋಲವಾಗುತ್ತದೆ. ಬಂಡವಾಳಿಗರಿಗೆ ಒಂದು ಕಂಪನಿ ಮುಚ್ಚಿದರೆ ಇನ್ನೊಂದನ್ನು ಪ್ರಾರಂಭಿಸಿ ಮತ್ತೆ ಲಾಭದ ಬೆನ್ನೇರುವ ಸಾಧ್ಯತೆಗಳು ಇದ್ದೇ ಇರುತ್ತದೆ. ಆದರೆ ಈ ಉದ್ದಿಮೆಗಳಲ್ಲಿ ದುಡಿವ ಕಾರ್ಮಿಕರ ಸ್ಥಿತಿ ಹೀನಾಯವಾಗುತ್ತದ.

## ಇಸ್ಕೊ ಮಾರಾಟಕ್ಕೆ ಮತ್ತೆ ಹುನ್ನಾರ

ಇಂಡಿಯನ್ ಐರನ್ ಅಂಡ ಸ್ಟೀಲ್ ಕಂಪನಿ ಇಸ್ಕೊವನ್ನು ಖಾಸಗಿಯವರಿಗೆ ಮಾರಾಟ ಮಾಡಲು ಮತ್ತೆ ಹುನ್ನಾರ ನಡೆದಿದೆ. ಸಾರ್ವಜನಿಕ ಉದ್ದಿಮೆಗಳ ಮಾರಾಟ ಮಂಡಳಿ ಈ ಉದ್ದಿಮೆಯನ್ನು ಮಾರಾಟ ಮಾಡಲು ಶಿಫಾರಸು ಮಾಡಿದೆಯಂತೆ. ಅದರಂತೆ ಕೇಂದ್ರ ಸರ್ಕಾರ ಈ ಕಂಪನಿಯನ್ನು ಮಾರಾಟ ಮಾಡಲು ಜಾಗತಿಕ ಟೆಂಡರ್‌ಗಳನ್ನು ಕರೆಯಲು ನಿರ್ಧರಿಸಿದೆಯಂತೆ.

ಹಿಂದೆ 1992 ರಲ್ಲಿ ಕಾಂಗ್ರೆಸ್ ಸರ್ಕಾರ ಈ ಕಂಪನಿಯನ್ನು ಮಾರಾಟ ಮಾಡಲು ಪ್ರಯತ್ನಿಸಿ ತೀವ್ರ ವಿರೋಧ ಎದುರಿಸಲಾರದೆ ಸುಮ್ಮನಾಗಿತ್ತು.

ಈ ರೋಗಗ್ರಸ್ತ ಉದ್ದಿಮೆಯನ್ನು ಮೂರು ಕಾಸಿಗೆ ಕಬಳಿಸಲು ಕೆಲವು ಬಂಡವಾಳಿಗರು ಕಾದು ಕುಳಿತಿದ್ದಾರೆ. ಬಿಜೆಪಿ ಸರ್ಕಾರ ಇಂತಹ ಕಬಳಿಕೆದಾರರಿಗೆ ಮಣಿಯದೇ ಇರಲು ಸಾದವೇ! ಇಸ್ಕೊದ ಕಾರ್ಮಿಕರಂತೂ ತೀವ್ರ ಪ್ರತಿಭಟನೆ ಮಾಡಿಯೇ ಮಾಡುತ್ತಾರ.

## ಆರ್ಥಿಕ ದಿಗ್ಬಂಧನದ ಪರಿಣಾಮಗಳು

ಬಿಜೆಪಿ ಸರ್ಕಾರದ ಅಣ್ವಸ್ತ್ರ ಹುಡುಗಾಟ ಭಾರತಕ್ಕೆ ಆರ್ಥಿಕ ದಿಗ್ಬಂಧನದ ಹೊರೆಯನ್ನು ತಂದು ಹೇರಿದೆ. ಐಎಂಎಫ್‌ನ ಕೆಲ ಅಧಿಕಾರಿಗಳು ದಿಗ್ಬಂಧನದ ಕ್ರಮಗಳಿಂದ ಅಮೆರಿಕಕ್ಕೆ ಹಾನಿ ಎಂಬರ್ಥದ ಹೇಳಿಕೆಗಳನ್ನು ನೀಡಿದ್ದಾರೆ. ಆದರೆ ಅಮೇರಿಕದ ಆರ್ಥಿಕ ಅದನ್ನು ಸುಲಭವಾಗಿ ತಡೆದುಕೊಳ್ಳಬಹುದು. ಭಾರತದ ಬಡಜನರನ್ನು ಹೆಚ್ಚಿಚ್ಚು ಹಿಂಡುತ್ತದೆ.

ಆರ್ಥಿಕ ದಿಗ್ಬಂಧನದ ಕೆಲ ನೇರ ಪರಿಣಾಮಗಳು ಕೆಳಗಿನಂತಿವೆ.

I. ಅಮೇರಿಕದ ನೇರ ಹಣ ಸಹಾಯ ಸುಮಾರು 15 ರಿಂದ 20 ದಶಲಕ್ಷ ಡಾಲರುಗಳು ಬರುವುದಿಲ್ಲ.

II ಅಮೇರಿಕಾದ ಬ್ಯಾಂಕುಗಳು ಮತ್ತು ವಿಶ್ವ ಬ್ಯಾಂಕಿನಿಂದ ಭಾರತ ಸರ್ಕಾರಕ್ಕೆ ಸಾಲ ಸಿಗುವುದಿಲ್ಲ. ಆದರೆ ಖಾಸಗಿಯವರಿಂದ ಸಾಲ ಪಡೆಯುವುದರ ಮೇಲೆ ತಡೆಯಿಲ್ಲ.

III ಅಮೇರಿಕದ ಆಮದು ರಫ್ತು ಬ್ಯಾಂಕು ನೀಡುತ್ತಿದ್ದ ಗ್ಯಾರಂಟಿ ಮತ್ತು ಹಣಕಾಸು ಸೌಲಭ್ಯಗಳು ಸಿಗುವುದಿಲ್ಲ. ಇದರಿಂದ ಹಲವು ವಿದ್ಯುತ್ ಮತ್ತು ಟೆಲಿಸಂಪರ್ಕ ಯೋಜನೆಗಳಿಗೆ ಹೊಡೆತ ಬೀಳಬಹುದು.

ಇನ್ನು ಪರೋಕ್ಷವಾಗಿ ಈ ದಿಗ್ಬಂಧನದ ಪರಿಣಾಮಗಳು ಹೀಗಿರುತ್ತದೆ.

I. ರೂಪಾಯಿಯ ಬೆಲೆಯಲ್ಲಿ ಕುಸಿತ ಈಗಾಗಲೇ ರೂಪಾಯಿಯ ಬೆಲೆಯಲ್ಲಿ ಶೇ 3 ಕುಸಿತ ಉಂಟಾಗಿದೆ. ಕಳೆದ ಒಂದು ವರ್ಷದಲ್ಲಿ ಈ ಕುಸಿತ ಶೇ 20 ರಷ್ಟು

II. ಬಂಡವಾಳ ಮಾರುಕಟ್ಟೆಯಲ್ಲಿ ಇಳಿತ, ಬಂಡವಾಳ ಮಾರುಕಟ್ಟೆಯಲ್ಲಿ ಇಳಿತ ಉಂಟಾಗಿದ್ದು ಅದು ಇನ್ನೂ ಹೆಚ್ಚಾಗುತ್ತಾ ಹೋಗುತ್ತಿದೆ.

III. ಮೂಡೀಸ್‌ನ ಭಾರತದ ರೇಟಿಂಗ್ ಕಡಿಮೆ ಆಗಿರುವುದರಿಂದ ವಿದೇಶೀ ಸಾಲಗಳು ಹೂಡಿಕೆಗಳು ಸುಲಭದಲ್ಲಿ ಬರುವುದಿಲ್ಲ.

IV. ಬಹುರಾಷ್ಟ್ರೀಯ ಕಂಪನಿಗಳ ವಿದೇಶೀ ನೇರ ಹೂಡಿಕೆ ಮುಂದಕ್ಕೆ ಹೋಗು ತ್ತದೆ. ಈ ಕಂಪನಿಗಳು ಈಗ ಹೂಡಿಕೆ ಮಾಡುವುದಕ್ಕೆ ಹಿಂದೇಟು ಹಾಕುತ್ತವೆ.

ಈ ಎಲ್ಲ ದಿಗ್ಬಂಧನಗಳನ್ನು ಎದುರಿಸುವುದು ಸಾಧ್ಯ. ಆದರೆ ಸ್ವಾವಲಂಬನೆಯ ಹಾದಿಯನ್ನು ಬಿಟ್ಟು ಅವಲಂಬನೆಯ ದಾರಿ ಹಿಡಿದಿರುವುದರಿಂದಲೇ ಈ ದಿಗ್ಬಂಧನ ಕ್ರಮಗಳು ಹಾನಿಯುಂಟುಮಾಡಬಲ್ಲವು. ಬಿಜೆಪಿ ನೇತೃತ್ವದ ಸರ್ಕಾರಕ್ಕೆ ಇಂತಹ ಪರಿಸ್ಥಿತಿಯನ್ನು ಪರಿಣಾಮಕಾರಿಯಾಗಿ ಎದುರಿಸುವ ಸಾಮರ್ಥ್ಯವಂತೂ ಇಲ್ಲ ಎಂಬುದು ಅದರ ಬಜೆಟ್ಟಿನಿಂದಲೇ ಸ್ಪಷ್ಟವಾಗಿ ಗೊತ್ತಾಗಿ ಹೋಗಿದೆ.

## ಸಣ್ಣ ಕೈಗಾರಿಕೆ: ಮತ್ತೆ ಮೊದಲ ಚೌಕಕ್ಕೆ?

ಸಣ್ಣ ಕೈಗಾರಿಕೆಗಳ ಬಗ್ಗೆ ವರದಿ ನೀಡಲು ನೇಮಕವಾಗಿದ್ದ ಎಸ್.ಎಲ್.ಕಪೂರ್‌ರವರ ನೇತೃತ್ವದ ಏಕ ಸದಸ್ಯ ಸಮಿತಿ ಸರ್ಕಾರಕ್ಕೆ ಆಗಲೇ ವರದಿ ನೀಡಿದೆ. ಭಾರತದ ಆರ್ಥಿಕದಲ್ಲಿ ಸಣ್ಣ ಕೈಗಾರಿಕೆಗಳ ಪಾತ್ರದ ಮಹತ್ವವನ್ನು ಗಮನದಲ್ಲಿರಿಸಿಕೊಂಡು ಈ ಸಮಿತಿ ಹಲವು ಶಿಫಾರಸುಗಳನ್ನು ಮಾಡಿದೆ.

ಅದರಲ್ಲಿ ಸಣ್ಣ ಕೈಗಾರಿಕೆಯೆನಿಸಿಕೊಳ್ಳಲು ಹೂಡಿಕೆಯ ಮಿತಿಯನ್ನು ಮತ್ತೆ ಹಿಂದಿನ 60-75 ಲಕ್ಷ ರೂಪಾಯಿಗಳಿಗೆ ಇಳಿಸಬೇಕೆಂಬುದು ಮುಖ್ಯವಾದದ್ದು. ಸಂಯುಕ್ತ ರಂಗ ಸರ್ಕಾರದ ಅವಧಿಯಲ್ಲಿ ಈ ಹೂಡಿಕೆಯ ಮಿತಿಯನ್ನು 300 ಲಕ್ಷ ರೂಪಾಯಿಗಳಿಗೆ ಏರಿಸುವ ಮೂಲಕ ಮಧ್ಯಮ ಪ್ರಮಾಣದ ಉದ್ದಿಮೆಗಳು ಸಣ್ಣ ಕೈಗಾರಿಕೆಗಳ ಆವರಣದಲ್ಲೇ ಬರುವಂತೆ ಮಾಡಲಾಗಿತ್ತು. ಆ ಮೂಲಕ ದೊಡ್ಡ ಕೈಗಾರಿಕೆಗಳು ಸಣ್ಣ ಕೈಗಾರಿಕೆಗಳಿಗೆ ನೀಡುವ ರಕ್ಷಣೆಯನ್ನು ಅನುಭವಿಸುವಂತಾಗಿತ್ತು. ನಿಜವಾದ ಸಣ್ಣ ಕೈಗಾರಿಕೆಗಳು ಈ ರಕ್ಷಣೆಯ ಲಾಭಕ್ಕಾಗಿ ದೊಡ್ಡ ಕೈಗಾರಿಕೆಗಳೊಡನೆ ಸ್ಪರ್ಧಿಸಬೇಕಾಗುತ್ತದೆ.

ಈಗ ಪುನಃ ಈ ಮಿತಿಯನ್ನು ಕಡಿಮೆ ಮಾಡುವುದರಿಂದ ಸಣ್ಣ ಕೈಗಾರಿಕೆಗಳಿಗೆ ಪರಿಹಾರ ನೀಡಿದಂತಾಗುತ್ತದೆ. ಇದಲ್ಲದೆ ಈ ಸಮಿತಿ ಸಣ್ಣ ಕೈಗಾರಿಕೆಗಳಿಗೆ ಅಂತರ್ರಚನಾ ಸೌಲಭ್ಯಗಳ ನಿಧಿಯೊಂದನ್ನು ಸ್ಥಾಪಿಸುವ ಮತ್ತು ಸುಲಭವಾಗಿ ಹಣಕಾಸು ದೊರೆಯುವಂತಹ ವ್ಯವಸ್ಥೆ ರೂಪಿಸಲು ಶಿಫಾರಸ್ಸು ಮಾಡಿದೆ.

ಸಣ್ಣ ಕೈಗಾರಿಕಾ ಅಭಿವೃದ್ಧಿ ಬ್ಯಾಂಕಿಗೆ ನಬಾರ್ಡ್‌ಗಿರುವಂತಹ ಸ್ವಾಯತ್ತ ಸ್ಥಾನ ನೀಡಿ ಹೆಚ್ಚು ಅಭಿವೃದ್ಧಿ ವ್ಯಾಪ್ತಿ ನೀಡಲು ಅದು ಶಿಫಾರಸು ಮಾಡಿದೆ. ಬಿಜೆಪಿಯ ಸರ್ಕಾರ ಈ ಶಿಫಾರಸುಗಳನ್ನು ಹೇಗೆ ಜಾರಿಗೆ ತರುತ್ತದೆ ಎಂಬುದನ್ನು ಕಾದು ನೋಡಬೇಕು.

## ಸೇವಾ ತೆರಿಗೆ ತೆಗೆದು ಹಾಕಿದ್ದರ ಬೆಲೆ

ಆರ್ಥಿಕ ದಿಗ್ಬಂಧನಗಳು ಬಂದಿರುವುದರಿಂದ ಸರ್ಕಾರ ಆಂತರಿಕವಾಗಿಯೇ ಹೆಚ್ಚು ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಳ್ಳುವುದು ಅತ್ಯವಶ್ಯ. ಆದರೆ ಕೇಂದ್ರ ಸರ್ಕಾರ ತನ್ನ 1998-99 ರ ಬಜೆಟ್ಟಿನಲ್ಲಿ ಸಾಗಾಣಿಕೆದಾರರ ಮೇಲಿನ ಸೇವಾ ತೆರಿಗೆಯನ್ನು ತೆಗೆದು ಹಾಕಿದ್ದರಿಂದ ಸುಮಾರು 5000 ಕೋಟಿ ರೂಪಾಯಿಗಳಷ್ಟು ಆದಾಯ ಕಡಿಮೆ ಆಗುತ್ತದೆ. ಇದೊಂದು ಬಹುಮುಖ್ಯ ಮೂಲವಾಗಿತ್ತು. ಆದರೆ ಹಣಕಾಸು ಮಂತ್ರಿಗಳು ಈ ಮೂಲವನ್ನೇ ಬಿಟ್ಟುಕೊಟ್ಟಿದ್ದಾರೆ.

ಸಿಪಿಐ(ಎಂ)ನ ಲೋಕಸಭೆಯ ಉಪನಾಯಕ ಬಸುದೇವ್ ಆಚಾರ್ಯ ಮತ್ತು ರಾಜ್ಯಸಭೆಯ ನಾಯಕ ಇ. ಬಾಲಾನಂದನ್ ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದು ಈ ವಿಷಯವನ್ನು ಪುನಃ ಪರಿಶೀಲಿಸಬೇಕೆಂದು ಕೇಳಿದ್ದಾರೆ. ಸಂಯುಕ್ತರಂಗ ಸರ್ಕಾರ ಅಧಿಕಾರದಲ್ಲಿದ್ದಾಗ ಅದು ಈ ತೆರಿಗೆಯನ್ನು ವಿಧಿಸಿತ್ತು. ಹೀಗೆ ಸಂಗ್ರಹವಾದ ಹಣವನ್ನು ಹೆದ್ದಾರಿಗಳ ನಿರ್ಮಾಣಕ್ಕೆ ಖರ್ಚು ಮಾಡಲಾಗುತ್ತಿತ್ತು. ಈಗ ಆದಾಯವೂ ಇಲ್ಲ, ಹೆದ್ದಾರಿಗಳನ್ನು ಕಟ್ಟುವುದೂ ಇಲ್ಲ. ಇದು ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರವನ್ನು ನಿರ್ವಹಿಸುವ ರೀತಿ.

## ಕರ್ನಾಟಕದಲ್ಲಿ ಕಳೆದವಾರ

**ಜುಲೈ 4**

❍ ಕರಾವಳಿ, ಮಲೆನಾಡು ಪ್ರದೇಶಗಳಲ್ಲಿ ಸತತ ಮಳೆ, 6 ಸಾವು.

❍ ಕರ್ನಾಟಕ ರಾಜ್ಯ ಇಲೆಕ್ಟ್ರಾನಿಕ್ಸ್ ಅಭಿವೃದ್ಧಿ ನಿಗಮ - ಕಿಯೋನಿಕ್ಸ್ - ನಷ್ಟದ ದಾಖಲೆಯಿರುವ ಸಾರ್ವಜನಿಕ ವಲಯದ ಉದ್ದಿಮೆ ಈ ವರ್ಷ ಲಾಭ ಮಾಡಿದೆಯೆಂದು ನಿಗಮದ ಅಧ್ಯಕ್ಷರು.

**ಜುಲೈ 5**

❍ ಮಲೆನಾಡಿನಲ್ಲಿ ಧಾರಾಕಾರ ಮಳೆ ; ಕೃಷ್ಣರಾಜ ಸಾಗರಕ್ಕೆ 100 ಅಡಿ ನೀರು

❍ ಕರ್ನಾಟಕ ಹೌಸಿಂಗ್ ಬೋರ್ಡ್ 1000 ಕೋಟಿ ರೂ.ಗಳ ಒಂದು ಸಮಗ್ರ ವಸತಿ ಯೋಜನೆಯನ್ನು ಸಿದ್ಧಪಡಿಸುವುದಾಗಿ ಮಂಡಳಿಯ ಅಧ್ಯಕ್ಷರು ಕೆ.ಹೆಚ್.ಬಿ. ಬಗ್ಗೆ ಸಾರ್ವಜನಿಕದಲ್ಲಿರುವ ತಪ್ಪು ಅಭಿಪ್ರಾಯವನ್ನು ತೆಗೆಯಲು ಮಂಡಳಿಯ ಕಾರ್ಯ ಶೈಲಿಯ ಸುಧಾರಣೆಯ ಭರವಸೆ.

**ಜುಲೈ 6**

❍ ಇನ್ನು ಮುಂದೆ ವಸತಿ ಯೋಜನೆಗಳಿಗೆ ನಿವೇಶನ ಅಥವಾ ಮನೆಗಳನ್ನು ಹಂಚುವಾಗ ಫಲಾನುಭವಿ ಗಂಡ ಮತ್ತು ಹೆಂಡತಿಗೆ 'ಜಂಟಿ ಖಾತೆ' ಮಾಡಿ ಕೊಡಬೇಕೆಂದು ಸಂಪುಟ ನಿರ್ಧಾರ.

❍ ಸಚಿವ ಸಂಪುಟ ಸಭೆಯ ಸಂದರ್ಭದಲ್ಲಿ ಟೀಕೆಗೆ ನೊಂದು ಐವರು ಸಚಿವರು ರಾಜೀನಾಮೆ ಇಂಗಿತ ವ್ಯಕ್ತಪಡಿಸಿರುವುದಾಗಿ ವರದಿ

❍ ಕನ್ನಡ ಸಾಹಿತ್ಯ ಪರಿಷತ್ 21 ನೇ ಅಧ್ಯಕ್ಷರಾಗಿ ಎನ್. ಬಸವಾರಾಧ್ಯ ಆಯ್ಕೆ. 1100 ಮತಗಳ ಅಂತರ.

**ಜುಲೈ 7**

❍ ಆಲಮಟ್ಟಿ ಜಲಾಶಯ ಮಟ್ಟ 511.10 ಮೀಟರಿಗೆ ಏರಿಕೆ. ಸುಮಾರು 30 ಗ್ರಾಮಗಳಿಗೆ ಪ್ರವಾಹ ಭೀತಿ.

**ಜುಲೈ 8**

❍ ಸಚಿವ ಸಂಪುಟ ಪುನರ್ರಚನೆ ಅನಿರ್ದಿಷ್ಟಾವಧಿ ಮುಂದಕ್ಕೆ. ಮೊದಲು ಜನತಾದಳದ ಪುನರ್ರಚನೆ, ನಂತರ ಮಂಡಳಿಗಳಿಗೆ ನೇಮಕ, ಆಮೇಲೆ ಸಚಿವ ಸಂಪುಟ ಪುನರ್ರಚನೆ ಕೈಗೊಳ್ಳಲು ನವದೆಹಲಿಯಲ್ಲಿ ಸೇರಿದ ಪಕ್ಷದ ಪ್ರಮುಖರ ನಿರ್ಧಾರ.

❍ ಕದ್ರ-ಕೊಡಸಳ್ಳಿ ಅಣೆಕಟ್ಟುಗಳು ಭರ್ತಿ. ಆಲಮಟ್ಟಿ ಜಲಾಶಯಕ್ಕೆ ಇನ್ನಷ್ಟು ನೀರು - ಸುತ್ತಮುತ್ತಲ ಬಹುತೇಕ ಹಳ್ಳಿಗಳು ಜಲಾವೃತ್ತ.

**ಜುಲೈ 9**

❍ ಕೊಜೆಂಟ್ರಿಕ್ಸ್ ವಿದ್ಯುತ್ ಯೋಜನೆಗೆ ಅನುಮತಿ ನೀಡಲು ಕೇಂದ್ರ ಸರ್ಕಾರ ಅನಗತ್ಯ ವಿಳಂಬ ಮಾಡುತ್ತಿದೆ ಎಂದು ಮುಖ್ಯಮಂತ್ರಿಗಳು.

❍ ಮಂತ್ರಿ ಗುತ್ತೇದಾರ್ ಸಂಬಂಧಿಗಳಾದ ಜನತಾದಳ ಶಾಸಕ ಸುಭಾಶ್ ಗುತ್ತೇದಾರ್ ಮತ್ತು ಇನ್ನೊಬ್ಬ ಸಂಬಂಧಿ ಈರಯ್ಯ ಗುತ್ತೇದಾರ್‌ಗೆ ಮಹಾರಾಷ್ಟ್ರದಲ್ಲಿ ಚಾರ್ಜ್ ಶೀಟ್ ಹಾಗೂ ವಾರೆಂಟ್.

### ಜಾಗತೀಕರಣ, ಉದಾರೀಕರಣ ವಿರುದ್ಧ ವ್ಯಾಪಕ ಪ್ರಚಾರಾಂದೋಲನ

# ಆಗಸ್ಟ್ 16ರಂದು ಸಾಮೂಹಿಕ ಸಂಘಟನೆಗಳ ರಾಜ್ಯಮಟ್ಟದ ಸಮಾವೇಶ

ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆಯ ರಾಜ್ಯ ಘಟಕದ ಸಭೆ ಬೆಂಗಳೂರಿನಲ್ಲಿ ಜುಲೈ 8ರಂದು ನಡೆದು ಕಾರ್ಮಿಕರು, ರೈತರು, ಯುವಜನ - ವಿದ್ಯಾರ್ಥಿಗಳು, ಮಹಿಳೆಯರು ಮತ್ತಿತರ ಜನವಿಭಾಗಗಳನ್ನು ಈಗ ಕಿತ್ತು ತಿನ್ನುತ್ತಿರುವ ಪ್ರಶ್ನೆಗಳ ಬಗ್ಗೆ, ಜಾಗತೀಕರಣ ಮತ್ತು ಉದಾರೀಕರಣ ಜನಗಳ ಸಾಮಾಜಿಕ, ಸಾಂಸ್ಕೃತಿಕ ಜೀವನದ ಮೇಲೆ ಮಾಡುತ್ತಿರುವ ಪ್ರಹಾರಗಳ ಬಗ್ಗೆ ವ್ಯಾಪಕ ಪ್ರಚಾರಾಂದೋಲನ ನಡೆಸಲು ನಿರ್ಧರಿಸಿತು. ಈ ಪ್ರಚಾರಾಂದೋಲನ ಭಾಗವಾಗಿ ಆಗಸ್ಟ್ 16ರಂದು ಬೆಂಗಳೂರಿನಲ್ಲಿ ರಾಜ್ಯಮಟ್ಟದ ಒಂದು ಸಮಾವೇಶವನ್ನು ನಡೆಸಲು ನಿರ್ಧರಿಸಿದೆ.

ಪಿ.ಡಬ್ಲ್ಯೂ.ಟಿ.ಯು.ಸಿ.ಯ ಪ್ರಧಾನ ಕಾರ್ಯದರ್ಶಿ ಆರ್.ಎನ್. ಗೋಡ್‌ಬೋಳೆಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕೇಂದ್ರ ಕಾರ್ಮಿಕ ಸಂಘಟನೆಗಳಾದ ಸಿ.ಐ.ಟಿ.ಯು ಹಾಗೂ ಎ.ಐ.ಟಿ.ಯು.ಸಿ. ಮುಖಂಡರು, ಬ್ಯಾಂಕ್, ವಿಮೆ, ಐ.ಟಿ.ಐ. ಅಂಚೆ-ತಂತಿ, ಖಾಸಗೀ ಸಂಸ್ಥೆಗಳ ನೌಕರರ ಸಂಘಟನೆಗಳ, ರೈತ ಕೃಷಿಕೂಲಿಗಾರರ ಸಂಘಟನೆಗಳ, ವಿದ್ಯಾರ್ಥಿ ಹಾಗೂ ಯುವಜನ ಸಂಘಟನೆಗಳ ಹಾಗೂ ಮಹಿಳಾ ಸಂಘಟನೆಯ ಮುಖಂಡರು ಭಾಗವಹಿಸಿದ್ದರು.


ಜುಲೈ 14ರಂದು ರಾಷ್ಟ್ರೀಯ ವೇದಿಕೆಯ ಕರೆಯಂತೆ ನೌಕರರು, ಕಾರ್ಮಿಕರು ತಂತಮ್ಮ ಕಛೇರಿ, ಕಾರ್ಖಾನೆಗಳ ಎದುರು ಪ್ರತಿಭಟನೆ ನಡೆಸುವುದಲ್ಲದೆ ಬೆಂಗಳೂರಿನಲ್ಲಿ ಸಾಯಂಕಾಲ 4 ಗಂಟೆಗೆ ಮೈಸೂರು ಬ್ಯಾಂಕ್ ವೃತ್ತದಲ್ಲಿ ರ್‍ಯಾಲಿ ನಡೆಸಲು ನಿರ್ಧರಿಸಲಾಯಿತು.

ವಿವಿಧ ಜನವಿಭಾಗಗಳ ಸಮಸ್ಯೆಗಳ ಅಧ್ಯಯನ ಮಾಡಿ ವ್ಯಾಪಕ ಪ್ರಚಾರ ಸಾಹಿತ್ಯವನ್ನು ಪ್ರಕಟಿಸುವ ಉದ್ದೇಶದಿಂದ ಹಲವು ಅಧ್ಯಯನ ಕಾರ್ಯಕ್ರಮಗಳನ್ನು ರಚಿಸಿ ಅವುಗಳ ಸಂಚಾಲಕರನ್ನು ನೇಮಿಸಲಾಯಿತು. ಸಾರ್ವಜನಿಕ ಕೈಗಾರಿಕಾ ವಲಯ, ಖಾಸಗಿ ಕೈಗಾರಿಕಾ ವಲಯ, ಸರಕಾರಿ ವಲಯ, ಹಣಕಾಸು ವಲಯ, ಕೃಷಿ ವಲಯ ಅದೇ ರೀತಿ ವಿದ್ಯಾರ್ಥಿ, ಯುವಜನ, ಮಹಿಳೆಯರು ಹಾಗೂ ಸಾಂಸ್ಕೃತಿಕ ವಲಯದಲ್ಲಿನ ಪ್ರಶ್ನೆಗಳನ್ನು ಕುರಿತಂತೆ ಪ್ರತ್ಯೇಕ ಸಮಿತಿಗಳು ಅಧ್ಯಯನ ಮಾಡುತ್ತವೆ.

ರಾಷ್ಟ್ರೀಯ ವೇದಿಕೆಯನ್ನು ಈಗಿನ ಗಂಭೀರ ಸನ್ನಿವೇಶದಲ್ಲಿ ಜಿಲ್ಲಾ ಹಂತಗಳಿಗೆ ವ್ಯಾಪಕವಾಗಿ ವಿಸ್ತರಿಸುವ ತುರ್ತು ಅಗತ್ಯವನ್ನು ಮನಗಂಡ ಸಭೆ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಈ ಪ್ರಚಾರಾಂದೋಲನವನ್ನು ವಿಸ್ತರಿಸುವ ಜವಾಬ್ದಾರಿಗಳನ್ನು ವಿವಿಧ ವ್ಯಕ್ತಿಗಳು ಹಾಗೂ ಸಂಘಟನೆಗಳಿಗೆ ವಹಿಸಲು ನಿರ್ಧರಿಸಿತು.

ಸಿ.ಐ.ಟಿ.ಯು ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ. ನಾಯರ್, ವಿಮಾ ನೌಕರರ ಸಂಘದ ಮುಖಂಡರಾದ ಕೆ.ವಿ. ಶ್ರೀನಿವಾಸನ್ ಹಾಗೂ ಪಿ.ಡಬ್ಲ್ಯೂ.ಟಿ.ಯು.ಸಿ. ಮುಖಂಡ ಗೋಡ್‌ಬೋಳೆ ಇವರಿಗೆ ರಾಜ್ಯ ಮಟ್ಟದಲ್ಲಿ ಈ ಚಟುವಟಿಕೆಗಳ ಸಂಚಾಲಕತ್ವ ಹೊಣೆ ವಹಿಸಲಾಯಿತು.

ಜುಲೈ 3 ರಂದು ರಾಷ್ಟ್ರೀಯವೇದಿಕೆ ಕರೆಯ ಮೇರೆಗೆ, ಬೆಂಗಳೂರಿನಲ್ಲಿ ಮಳೆ ಸುರಿಯುತ್ತಿದ್ದರೂ ನಡೆದ ಧರಣಿಯ ಒಂದು ದೃಶ್ಯ.



# ಕೂಲಿಕಾರರ ಸಮಾವೇಶ

ಕುರುಗೋಡು: ಕಳೆದ 10 ವರ್ಷ ಗಳಿಂದ ಜಾರಿಗೆ ಬಂದ ಹೊಸ ಆರ್ಥಿಕ-ಕೃಷಿ ನೀತಿಗಳು ಮತ್ತು ಕೇಂದ್ರ ಸರ್ಕಾರ ನಿರಂತರ ಅನುಸರಿಸುತ್ತಾ ಬಂದ ಹೊಸ ಆಮದು ನೀತಿ ಮತ್ತು ಸಾಲ ನೀತಿಗಳೇ ಭಾರತದ ರೈತರನ್ನು ತೀವ್ರವಾಗಿ ಸಾಲದ ಕೂಪದಲ್ಲಿ ನೂಕಿದುದೇ ಅಲ್ಲದೇ, ಮುಂದೆ ಜೀವನ ನಡೆಸಲು ಯಾವುದೇ ದಾರಿ ದೊರೆಯದೇ ಇರುವುದೇ ದೇಶಾದ್ಯಂತ 400ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಳ್ಳಲು ಕಾರಣವಾಗಿದೆ. ಅದೇ ಸಂದರ್ಭದಲ್ಲಿ ಇವು ಆತ್ಮಹತ್ಯೆಗಳಲ್ಲ, ಕೇಂದ್ರ-ರಾಜ್ಯ ಸರ್ಕಾರಗಳ ದಿವಾಳಿಕೋರ ನೀತಿಗಳಿಂದಾದ ಕೊಲೆಗಳೆಂದು ಕರ್ನಾಟಕ ಪ್ರಾಂತ ರೈತ ಸಂಘದ ಬಳ್ಳಾರಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಯು. ಬಸವರಾಜ ಕುರುಗೋಡಿನಲ್ಲಿ ನಡೆದ ರೈತ ಕೂಲಿಕಾರರ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಇಂತಹ ಜನ ವಿರೋಧಿ ನಿಲುವುಗಳನ್ನು ಕೇಂದ್ರ-ರಾಜ್ಯ ಸರ್ಕಾರಗಳು ಕೈಬಿಡಬೇಕು, ಅದೇ ಸಂದರ್ಭದಲ್ಲಿ ತೀವ್ರ ರೀತಿಯ ಸಾಲದ ಕೂಪದಲ್ಲಿ ಮುಳುಗಿರುವ ರೈತರನ್ನು ಸಂರಕ್ಷಿಸಲು ಸಾಲ ಮನ್ನಾ ಮಾಡಬೇಕು.

ಎಲ್ಲಾ ಬ್ಯಾಂಕುಗಳು, ಸೊಸೈಟಿಗಳು, ಎಲ್ಲ ರೈತ-ಕೃಷಿಕೂಲಿಕಾರರಿಗೆ ಹೊಸ ಸಾಲ ನೀಡಬೇಕು ಎಂದು ಕೇಂದ್ರ, ರಾಜ್ಯ ಸರ್ಕಾರವನ್ನು ಯು. ಬಸವರಾಜ್ ಒತ್ತಾಯಿಸಿದರು.

ಇದುವರೆಗೆ ಮಳೆಯಾಗದೇ ಇರುವುದರಿಂದ ಮುಂಗಾರು ವಿಫಲತೆಯನ್ನು ಪರಿಗಣಿಸಿ ಬಳ್ಳಾರಿ ತಾಲೂಕಾವನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಿ, ಬಡ ರೈತ-ಕೂಲಿಕಾರರು ವಲಸೆ ಹೋಗದಂತೆ ತಡೆಯಲು ಬರಗಾಲ ಕಾಮಗಾರಿ ಆರಂಭಿಸಿಬೇಕೆಂದು ಹಾಗೂ ಮೇವು ಒದಗಿಸಲು ಕ್ರಮ ವಹಿಸಿಬೇಕೆಂದು ಮತ್ತೊಬ್ಬ ರೈತ ಸಂಘದ ಉಪಾಧ್ಯಕ್ಷರಾದ ವಿ.ಎಸ್. ಶಿವಶಂಕರ್ ಒತ್ತಾಯಿಸಿದರು.

ಅದೇ ಸಂದರ್ಭದಲ್ಲಿ ಆಂಧ್ರಪ್ರದೇಶದ ರಾಜ್ಯ ಸರ್ಕಾರವು ದಿನಾಂಕ ಜೂನ್ 19 ರಂದು ಸಚಿವಾಲಯದ ಮುಂದೆ ಪಿಕೇಟಿಂಗ್ ಚಳುವಳಿ ನಡೆಸಲು ಮುಂದಾದ ನೂರಾರು ಕೂಲಿಕಾರರ ಮೇಲೆ, ಸಿ.ಪಿ.ಎಂ ಶಾಸಕರ ಮೇಲೆ, ಮುಂದಾಳುಗಳ ಮೇಲೆ ಅಮಾನುಷವಾಗಿ ಲಾಠಿ ಚಾರ್ಜ್ ನಡೆಸಿದುದನ್ನು ಬಲವಾಗಿ ಖಂಡಿಸಿದ ಮುಂದಾಳುಗಳು ಆಂಧ್ರ ಪ್ರೇದಶದ ಸರ್ಕಾರದ ಭೂತ ದಹನಗೈಯ್ದರು.

ಭೂತ -ದಹನದ ಸಂದರ್ಭದಲ್ಲಿ 200ಕ್ಕೂ ಹೆಚ್ಚು ಜನ ರೈತ-ಕೃಷಿಕೂಲಿಗಾರರು ಆಂಧ್ರಪ್ರದೇಶ ರಾಜ್ಯ ಸರ್ಕಾರದ ದಮನಕಾರಿ ನೀತಿಯ ವಿರುದ್ಧ - ಸರ್ವಾಧಿಕಾರಿ ಹಾಗೂ ಕೂಲಿಕಾರರ ವಿರೋಧಿ ನೀತಿಯ ವಿರುದ್ಧ ಘೋಷಣೆ ಕೂಗಿದರು.

ನಂತರ ಮೆರವಣಿಗೆ ಮೂಲಕ - ಕುರುಗೋಡಿನ ನಾಡ ಕಛೇರಿಗೆ ತೆರಳಿದ ರೈತ ಕೂಲಿಕಾರರು ಹಲವಾರು ಬೇಡಿಕೆಗಳುಳ್ಳ ಮನವಿ ಪತ್ರವನ್ನು ಮುಖ್ಯ ಮಂತ್ರಿಗಳಿಗೆ ಕಳುಹಿಸಲು ತಹಸಿಲ್ದಾರಿರಿಗೆ ನೀಡಿದರು.

ಇದೇ ಸಂದರ್ಭದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಗಾದಿಲಿಂಗಪ್ಪ, ತಾಲೂಕಾ ಸಮಿತಿ ಅಧ್ಯಕ್ಷರು ಮಾತನಾಡಿ ಬಿ.ಜೆ.ಪಿ. ಕೇಂದ್ರ ಸರ್ಕಾರದ ಬಜೆಟ್‌ನ ಕುರಿತು ವಿವರಿಸಿ ಬೆಲೆ ಏರಿಕೆಯ ನೀತಿಯನ್ನು ಖಂಡಿಸಿದರು.

ಕೂಲಿಗಾರರಿಗೆ ಸಮಗ್ರ ಕಾನೂನು ಬೇಕೆಂದು - ಹಸಿರು ಕಾಡ್, ಮನೆಗೆ ಪಟ್ಟ ನೀಡಲು ಒತ್ತಾಯಿಸಿದರು.

ಹಲವಾರು ಹಳ್ಳಿಗಳ ಸುಮಾರು 150ಕ್ಕೂ ಹೆಚ್ಚು ಪ್ರಾಂತ ರೈತ ಸಂಘದ ಕಾರ್ಯಕರ್ತರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ನಾಯಕತ್ವವನ್ನು ಎನ್.ಟಿ. ರಾಮಣ್ಣ, ಕೆ. ಮಲ್ಲಯ್ಯ, ಓ ಹುಲುಗಪ್ಪ, ಇಮಾಂಸಾಬ್ ವಹಿಸಿದ್ದರು.

## ಕಾರ್ಮಿಕ ಇಲಾಖೆಯಲ್ಲಿನ ಅವ್ಯವಸ್ಥೆ ನಿವಾರಣೆಗೆ

# ಸಿಐಟಿಯು ಒತ್ತಾಯ

ಹೊನ್ನಾವರ: ಕಾರವಾರದಲ್ಲಿವ ಜಿಲ್ಲಾ ಕಾರ್ಮಿಕ ಇಲಾಖೆಯಲ್ಲಿ ಕಾರ್ಮಿಕಾಧಿಕಾರಿಗಳು ಲಭ್ಯವಾಗದೆ ವರ್ಷಾನುಗಟ್ಟಲೆಗಳಿಂದ ಕಾರ್ಮಿಕ ವಿವಾದ ಬಗೆಹರಿಯದೆ ಬಡ ಕಾರ್ಮಿಕರು ಸಂಕಷ್ಟಕ್ಕೊಳಗಾಗಿದ್ದಾರೆ ಎಂದಿರುವ ಉತ್ತರ ಕನ್ನಡ ಜಿಲ್ಲಾ ಟೈಲ್ ವರ್ಕರ್ಸ್ ಯೂನಿಯನ್(ಸಿ.ಐ.ಟಿ.ಯು.) ಕೂಡಲೇ ಕಾರ್ಮಿಕ ಇಲಾಖೆಯಲ್ಲಿನ ಅವ್ಯವಸ್ಥೆಯನ್ನು ಪರಿಹರಿಸುವಂತೆ ಒತ್ತಾಯಿಸಿದೆ.

ಕಾಸರಕೋಡ ಕೋ-ಆಪೋರೇಟೀವ್ ಟೈಲ್ಸ್‌ನ ಡಿ.ಎ. ಕಡಿತ- ಮಾಡಿದ ಬಗ್ಗೆ ವಿವಾದ ನೆನೆಗುದಿಗೆ ಬಿದ್ದಿದ್ದು ಸ್ಥಳೀಯ ಶಾಸಕರು ಅಧ್ಯಕ್ಷರಾಗಿದ್ದು ಜಂಟಿ-ಸಭೆಗೂ ಹಾಜರಾಗದೇ ತಾರತಮ್ಯ ನೀತಿ ಅನುಸರಿಸುತ್ತಿದ್ದು, ಈ ಬಗ್ಗೆ ಕಾರ್ಮಿಕ ಇಲಾಖೆ ಯಾವ ಕ್ರಮ ಕೈಗೊಳ್ಳದೆ ವಿಳಂಬ ನೀತಿ ಅನುಸರಿಸುತ್ತಿದೆ ಎಂದಿದೆ.

ಸ್ಥಳೀಯ ಲೇಬರ್ ಇನ್ಸ್‌ಪೆಕ್ಟರ್ ಕೂಡ ಕಛೇರಿಯಲ್ಲಿ ಲಭ್ಯವಾಗದೆ, ಕಾರ್ಮಿಕಾಧಿಕಾರಿಗಳ ವರ್ಗಾವಣೆಯಲ್ಲಿ ತೊಡಗಿದ್ದು ಇಡೀ ಜಿಲ್ಲೆಯ ಕಾರ್ಮಿಕ ಸಮಸ್ಯೆಗಳು ಪರಿಹಾರ ಕಾಣದೆ ಸಮಸ್ಯೆಗಳ ಆಗರವಾಗಿದೆ, ಕೂಡಲೇ ಈ ಅವ್ಯವಸ್ಥೆ ಸರಿಪಡಿಸುವಂತೆ ಸಿಐಟಿಯು ಮೇಲಧಿಕಾರಿಗಳನ್ನು ಒತ್ತಾಯಿಸಿದೆ.

## ಪರಿಹಾರಕ್ಕೆ ಒತ್ತಾಯಿಸಿ ರೈತರ ಜಂಟಿ ಜಾಥಾ

ಗುಲ್ಬರ್ಗಾ : ದೇಶದಾದ್ಯಂತ ರೈತರು ಬೆಳೆ ನಷ್ಟಕ್ಕೆ ಹಾಗೂ ಸಾಲದ ಹೊರೆಯಿಂದಾಗಿ ಆತ್ಮಹತ್ಯೆ ಮಾಡಿಕೊಂಡರೂ ರಾಜ್ಯ ಸರ್ಕಾರದ ನಿಷ್ಕ್ರಿಯತೆ ಹಾಗೂ ಕೇಂದ್ರ ಸರ್ಕಾರದ ಉದಾಸೀನತೆಯಿಂದ ಮತ್ತೆ ಬಿತ್ತಲು ಆಗದಂತಹ ಸನ್ನಿವೇಶದಲ್ಲಿರುವ ರೈತರಲ್ಲಿ ಭವಿಷ್ಯದ ಬಗ್ಗೆ ನಂಬಿಕೆ ಹುಟ್ಟಿಸಲು ಹಾಗೂ ರೈತರ ಬೇಡಿಕೆಗಳನ್ನು ಶೀಘ್ರ ಪರಿಹರಿಸುವಂತೆ ರಾಜ್ಯ ಕೇಂದ್ರ ಸರ್ಕಾರಗಳನ್ನು ಒತ್ತಾಯಿಸಲು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಕರ್ನಾಟಕ ರಾಜ್ಯ ಪ್ರಾಂತ ರೈತ ಸಂಘ(ಎ.ಐ.ಕೆ.ಎಸ್.) ಜಂಟಿಯಾಗಿ ಇಡೀ ಜಿಲ್ಲೆಯಲ್ಲಿ ರೈತರ ನಾಲ್ಕು ಜಾಥಾಗಳನ್ನು ನಡೆಸಿ ಮುಂಗಾರಿನ ತಂಪಿನ ಜೊತೆ ಬದುಕಿನಲ್ಲಿ ಭರವಸೆ ಮೂಡಿಸಿವೆ.

ಇದೇ ಮೊದಲ ಬಾರಿಗೆ ಈ ಮೂರು ರೈತ ಸಂಘಗಳು ಜಂಟಿ ಹೋರಾಟ ನಡೆಸುವುದರ ಜೊತೆ ರೈತರು ತಮ್ಮ ಬದುಕಿನ ರಕ್ಷಣೆಗಾಗಿ ಈ ಸರ್ಕಾರಗಳನ್ನು ಎಚ್ಚರಿಸುವ ಹೋರಾಟ ನಡೆಸಲು ಕರೆ ಕೊಡುವುದರ ಜೊತೆ ಕೆಳಗಿನ ಬೇಡಿಕೆಗಳನ್ನು ಕೂಡಲೇ ಈಡೇರಿಸುವಂತೆ ರೈತ ಸಂಘದ ಮುಖಂಡರು ಸರ್ಕಾರವನ್ನು ಒತ್ತಾಯಿಸಿದರು. ಸದಸ್ಯ ಸಮಿತಿ ವರದಿಯಂತೆ ರೈತರಿಗೆ ಬೆಳೆ ನಷ್ಟಕ್ಕೆ ಪರಿಹಾರ ನೀಡಬೇಕು. ಸತ್ತವರ ಕುಟುಂಬಕ್ಕೆ 1ಲಕ್ಷ ರೂ. ಪರಿಹಾರ ನೀಡುವಂತೆ, ಬೆಳೆ ನಷ್ಟ ಪರಿಹಾರಕ್ಕೆ ನಿಧಿ ಸ್ಥಾಪನೆಗಾಗಿ, ನಷ್ಟವಾದ ಎಲ್ಲಾ ಬೆಳೆಗಳಿಗೆ ಪರಿಹಾರ ನೀಡಬೇಕು. ಸಮಗ್ರ ಬೆಳೆ ವಿಮಾ ಜಾರಿಗೆ ತರಬೇಕು. ಸಾಲ ಮನ್ನಾ ಮಾಡಿ ಎಲ್ಲಾ ರೈತರಿಗೆ ತಲಾ 5 ಸಾವಿರ ಬೆಳೆ ಸಾಲ ನೀಡಬೇಕು. ತಡೆ ಹಿಡಿದಿರುವ ಐ.ಆರ್.ಡಿ. ಸಾಲ ಮಂಜೂರು ಮಾಡಬೇಕು. ಬರ ಪರಿಹಾರ ಕಾಮಗಾರಿಗಳನ್ನು ಪ್ರಾರಂಭಿಸಿ ಕೃಷಿ ಕೂಲಿಕಾರರಿಗೆ ಕೆಲಸ ನೀಡಬೇಕು. ಎಲ್ಲಾ ಬಡವರಿಗೆ ಹಸಿರು ಕಾರ್ಡ್ ನೀಡಬೇಕು. ವಸತಿ ಹೀನರಿಗೆ ಮನೆ, ಕೃಷ್ಣ ಯೋಜನೆ 2 ಸಾವಿರದೊಳಗೆ ಪೂರ್ಣಗೊಳ್ಳಲು ಹಣ ಬಿಡುಗಡೆ ಮಾಡುವಂತೆ, ಗುಲ್ಬರ್ಗ ಜಿಲ್ಲೆಯಲ್ಲಿರುವ ಬೆಣ್ಣೆತೊರೆ, ಅಮರ್ಜಾ, ಕಾಗಿನ, ಮುಲ್ಲಾಮಾರಿ, ಗಂಡೋರಿ ನಾಲ, ಭೀಮಾ ಏತ ನೀರಾವರಿ ಮತ್ತು ಭೀಮಾ ಹರಿವು ಯೋಜನೆಗಳಿಗೆ ಹೆಚ್ಚಿನ ಹಣ ಬಿಡುಗಡೆ ಮಾಡಿ ಕಾಮಗಾರಿ ಕೆಲಸ ಶೀಘ್ರ ಮುಗಿಸಬೇಕು. ತೊಗರಿ ಬೆಳೆಗಾರರ ಮಂಡಳಿ ರಚಿಸಬೇಕು. ಮತ್ತು ಬಡರೈತ ಕೃಷಿಕೂಲಿಕಾರರು ಸಾಗುವಳಿ ಮಾಡಿದ ಗೈರಾಣ ಜಮೀನುಗಳಿಗೆ ಪಟ್ಟದ ಜೊತೆ ಸಾಗುವಳಿ ಚೀಟಿ ಕೊಡಬೇಕೆಂದು ಜಿಲ್ಲೆಯಲ್ಲಿ ಸಂಚರಿಸಿದ ಜಾಥಾ ಆಗ್ರಹಿಸಿದೆ.

ಜುಲೈ 3 ರಿಂದ 5 ರವರೆಗೆ ನಡೆದ ಜಾಥಾದಲ್ಲಿ ಆಳಂದ ತಾಲೂಕಿನ ನರೋಣದಿಂದ ಪ್ರಾರಂಭವಾದ ಜಾಥಾದಲ್ಲಿ ಮೇಘರಾಜ ಕಟಾರೆ, ಸುಧಾಮ ಧನ್ನಿ, ಮೌಲಾಮುಲ್ಲಾ ನೇತೃತ್ವದ ತಂಡವು ಆಳಂದ ಹಾಗೂ ಅಫ್ಜಲಪುರ ತಾಲೂಕಿನಲ್ಲಿ ಸಂಚರಿಸಿತು.

ಯಾದಗಿರಿ ಚೌಕ್‌ನಲ್ಲಿ ಗಾಂಧಿಜಿ ಪುತ್ಥಳಿಗೆ ಹೂ ಮಾಲೆ ಹಾಕುವ ಮುಖಾಂತರ ಮಾರುತಿ ಮಾನ್ಪಡೆಯಿಂದ ಉದ್ಘಾಟನೆಗೊಂಡ ಜಾಥಾವು ಮಾನ್ಪಡೆ, ಲಾಲಾಯ್ಯ, ಬಸವರಾಜ ತಂಬಾಕೆ, ಮರಿಲಿಂಗಪ್ಪ ಕಾಮರಡಿಗಿ, ಚಂದು ಜಾಧವ್, ಅಣ್ಣಪ್ಪ ನೇತೃತ್ವದ ತಂಡ ತಾಲೂಕಿನಲ್ಲಿ ಸಂಚರಿಸುವ ಮುಖಾಂತರ ರೈತರಲ್ಲಿ ಹೊಸ ಹುಮ್ಮಸ್ಸು ಮೂಡಿಸಿತು.


ರೈತರು ಆತ್ಮಹತ್ಯೆ ಮಾಡಿಕೊಂಡ ಸುರಪುರದ ಮುನಾರ್ ಬೊಮ್ಮನಹಳ್ಳಿಯಲ್ಲಿ ಆರಂಭವಾದ ಜಾಥಾ ರೈತರ ಸಮಸ್ಯೆಗಳಿಗೆ ಆತ್ಮಹತ್ಯೆ ಪರಿಹಾರವಲ್ಲ, ಸಾಂಘಿಕ ಹೋರಾಟದಿಂದ ತಮ್ಮ ಸಮಸ್ಯೆಗಳ ಪರಿಹಾರ ಸಾಧ್ಯ ಎನ್ನುವುದನ್ನು ಸಮರ್ಥಿಸುವುದರ ಜೊತೆಗೆ ತಾಲೂಕಿನಾದ್ಯಂತ ಸಂಚರಿಸಿ ಐಕ್ಯ ಹೋರಾಟಕ್ಕೆ ಮುಂದಾಗುವಂತೆ ಪ್ರೇರೇಪಿಸಿತು.

ಸಿ.ಎಸ್. ಆನೆಗುಂದಿ, ದಾವಲಸಾಬ, ಶಂಕರ ಶಟ್ಟಿ ಸಂಗಾವಿ, ಶರಣಪ್ಪ ಮಾಪೂರ ನೇತೃತ್ವ ವಹಿಸಿದ್ದರು.

ಚಿಂಚೋಳಿ ಗ್ರಾಮದ ಮಿರಿಯಾಣ ಗ್ರಾಮದಲ್ಲಿ ಹಿರಿಯ ಮುಖಂಡ ಗೋಪಾಲ ರಾವ್ ಕಿಣ್ಣಕರ ಜಾಥಾ ಉದ್ಘಾಟಿಸಿದರೆ ಶೌತಲಿ ಆಲೂರು ಭೀಮಶೆಟ್ಟಿ ಎಂಪಳ್ಳಿ ವಿರುಪಾಕ್ಷ ತಡತಲ, ವೀರಶೆಟ್ಟಿ ಇಮರಾಪೂರ ನೇತೃತ್ವ ವಹಿಸಿದರು.

ಜಿಲ್ಲೆಯಲ್ಲಿ ಮೊದಲ ಬಾರಿ ಈ ಮೂರು ರೈತ ಸಂಘಟನೆಗಳು ಜಂಟಿಯಾಗಿ ನಡೆಸಿದ ಜಾಥಾದಿಂದ ಜಿಲ್ಲೆಯ ರೈತರ ಜೊತೆ ಪಕ್ಕದ ಜಿಲ್ಲೆಗಳ ರೈತರು ಭವಿಷ್ಯದ ಬಗ್ಗೆ ಆಸೆಗಣ್ಣಿನಿಂದ ನೋಡುತ್ತಿರುವುದು ಸ್ಪಷ್ಟವಾಗಿ ಕಾಣತೊಡಗಿದೆ.

## ಸಂತಾಪ



ಗಂಗಾವತಿ ತಾಲ್ಲೂಕಿನ ಸಕ್ರಿಯ ಎಸ್.ಎಫ್.ಐ. ಕಾರ್ಯಕರ್ತರಾಗಿದ್ದ ಅಮರೇಶ ಅಪಘಾತದಲ್ಲಿ ನಿಧನ ಹೊಂದಿದ್ದು ಅವರ ನಿಧನಕ್ಕೆ ಎಸ್.ಎಫ್.ಐ. ತಾಲೂಕು ಸಮಿತಿ ತೀವ್ರ ಸಂತಾಪ ಸೂಚಿಸಿದೆ.

ಜನಶಕ್ತಿ ಜುಲೈ 13-19, 1998

## ಅಧಿಕಾರದಲ್ಲಿ ಬಿ.ಜೆ.ಪಿ.

# ಅಂದು ದುರಂತ ಇಂದು ಪ್ರಹಸನ

**ಶ್ರೀಯುತ ವಾಜಪೇಯಿಯವರ ಮೊದಲ ಅವಧಿ ೧೩ನೇ ದಿನ ದುರಂತಮಯವಾಗಿ ಮುಗಿಯಿತು. ಈ ಬಾರಿ ನೂರುದಿನಗಳಲ್ಲಿ ನಿಜವಾಗಿ ನಾವು ನೋಡಿದ್ದು ಆಡಳಿತವೆಂಬ ಪ್ರಹಸನವನ್ನು. ಈ ವಾಜಪೇಯಿಯವರ ಎರಡನೇ ಆಡಳಿತದ ಮೊದಲ ನೂರುದಿನಗಳಲ್ಲಿ ದೇಶಕ್ಕೆ, ಜನಗಳಿಗೆ ತನ್ನ ತಪ್ಪು ನೀತಿಗಳ ಮೂಲಕ ಬಗೆದ ಅಪಚಾರದಿಂದ ಹಿಡಿದು ಹೊಗಳುಭಟ್ಟಂಗಿತನದ ಹೆಚ್ಚಳಕ್ಕೆ ನೀಡಿದ 'ಕೊಡುಗೆ'ಯವರೆಗಿನ ಸಾಧನೆಯನ್ನು ಸಿಪಿಐ[ಎಂ] ಪಾಲಿಟ್‌ಬ್ಯೂರೋ ಸದಸ್ಯರಾದ ಸೀತಾರಾಂ ಯೆಚೂರಿ ವಿಶ್ಲೇಷಿಸಿದ್ದಾರೆ.**

ಜೂನ್ 26 ರಂದು ಬಿ.ಜೆ.ಪಿ ನೇತೃತ್ವದ ಸರಕಾರ ಅಧಿಕಾರದಲ್ಲಿ ನೂರು ದಿನಗಳನ್ನು ಪೂರೈಸಿತು. ಈ ದಿನ ಶ್ರೀಮತಿ ಇಂದಿರಾಗಾಂಧಿಯವರು ತುರ್ತು ಪರಿಸ್ಥಿತಿ ಸಾರಿದ ದುಷ್ಟ ಘಟನೆಯ 23ನೇ ವಾರ್ಷಿಕವೂ ಆಗಿದ್ದುದು ನಿಜವಾಗಿಯೂ ಇತಿಹಾಸದ ಒಂದು ವಿಚಿತ್ರ ತಿರುವು.

ಇದಕ್ಕಿಂತ ನೂರು ದಿನಗಳ ಮೊದಲು ಪತ್ರಿಕೆಗಳ ವಂದಿ-ಮಾಗಧರು 'ಭಾರತ ನಿರೀಕ್ಷಿಸುತ್ತಿದ್ದ ಪ್ರಧಾನ ಮಂತ್ರಿ' ಎಂದು ಹಾಡಿ ಹೊಗಳಿದ ಶ್ರೀಯುತ ವಾಜಪೇಯಿಯವರೇ ಸ್ವತಃ ಶ್ರೀಮತಿ ಜಯಲಲಿತಾರವರಿಂದ ಸರಕಾರ ಅಧಿಕಾರ ವಹಿಸಲು ಅತ್ಯಗತ್ಯವಾಗಿದ್ದ ಬೆಂಬಲದ ಪತ್ರವನ್ನು ನಿರೀಕ್ಷಿಸುತ್ತಿದ್ದರು. ಅತ್ಯಂತ ನೋವಿನಿಂದ ಕಾದ ನಂತರ, ಅಭೂತಪೂರ್ವ ಅವಮಾನದ ನಂತರ ಆ ಪತ್ರ ಕೊನೆಗೂ ಬಂತು. ಈಗಲೂ ಶ್ರೀಯುತ ವಾಜಪೇಯಿಯವರು ಕಾಯುತ್ತಲೇ ಇದ್ದಾರೆ - ಈ ಬಾರಿ ಅದೇ ಜಯಲಲಿತಾರವರಿಂದ ಸರಕಾರಕ್ಕೆ ಬೆಂಬಲ ಹಿಂತೆಗೆದುಕೊಳ್ಳುವ ಪತ್ರ ಬರಬಹುದು ಎಂಬ ಭೀತಿಪೂರ್ಣ ನಿರೀಕ್ಷೆಯಿಂದ. (ಈ ಲೇಖನ ಬರೆಯುವ ವೇಳೆಗೆ ಚೆನ್ನೈನಲ್ಲಿ ಅವರ ಶಾಶ್ವತ ದೂತ ಜಸ್ವಂತ್ ಸಿಂಗ್ ಕೂಡಾ ಈ ಮಹಿಳೆಯನ್ನು ಭೇಟಿಯಾಗಲು ಸಾಧ್ಯವಾಗಲಿಲ್ಲ (ಈ ಅನುವಾದ ಮುದ್ರಣಕ್ಕೆ ಹೋಗುವ ವೇಳೆಗೆ ಬೇರೆ ಕೆಲವು ದೂತರ ಪ್ರಯತ್ನದಿಂದ 'ಸದ್ಯ'ಕ್ಕೆ ಬೆಂಬಲ ಮುಂದುವರೆಸಲು ಎಐಡಿಎಂಕೆ ನಿರ್ಧರಿಸಿದೆ ಎಂದು ತಿಳಿದುಬಂದಿದೆ.

ಇವೆಲ್ಲಾ ಕಾರ್ಲ್‌ಮಾರ್ಕ್ಸ್‌ರವರ ಒಂದು ಭವಿಷ್ಯವಾಣಿಯನ್ನು ಮತ್ತೆ ನೆನಪಿಗೆ ತರುತ್ತಿವೆ. ಅವರ ಉದ್ಗ್ರಂಥ 'ಲೂಯಿ ಬೋನಾಪಾರ್ಟೆಯ ಹದಿನೆಂಟನೇ ಬ್ರೂಮೇರ್' ನ ಆರಂಭದ ಮಾತುಗಳು ಹೀಗಿವೆ-

*"ಹೆಗೆಲ್ ಎಲ್ಲೋ ಹೇಳಿದ್ದಾರೆ - ಭಾರೀ ಮಹತ್ವದ ಎಲ್ಲಾ ಸಂಗತಿಗಳು ಹಾಗೂ ವ್ಯಕ್ತಿತ್ವಗಳು ವಿಶ್ವ ಇತಿಹಾಸದಲ್ಲಿ ಎರಡು ಬಾರಿ ಸಂಭವಿಸಿವೆ. ಆದರೆ ಅವರು ಇಲ್ಲಿ ಇನ್ನೊಂದು ಮಾತು ಸೇರಿಸಲು ಮರೆತರು - ಮೊದಲನೆ ಬಾರಿ ದುರಂತವಾಗಿ ಸಂಭವಿಸುತ್ತದೆ, ಎರಡನೇ ಬಾರಿಗೆ ಪ್ರಹಸನವಾಗಿ"*

ಶ್ರೀಯುತ ವಾಜಪೇಯಿಯವರ ಪ್ರಧಾನಮಂತ್ರಿತ್ವದ ಮೊದಲ ಅವಧಿ 13ನೇ ದಿನ ದುರಂತಮಯವಾಗಿ ಕೊನೆಗೊಂಡಿತು. ಈ ಬಾರಿ, ಈ ನೂರು ದಿನಗಳಲ್ಲಿ ನಾವು ನಿಜವಾಗಿ ಕಾಣುತ್ತಿರುವುದು ಆಡಳಿತವೆಂಬ ಪ್ರಹಸನವನ್ನು.

### ಆರ್ಥಿಕ ರಂಗದಲ್ಲಿ ಹಾಸ್ಯಾಸ್ಪದ ನಿಲುವು

ಆಡಳಿತ, ಅಧಿಕಾರ ಚಲಾವಣೆ ಮಟ್ಟಿಗಂತೂ ಈ ಅನುಭವ ನಿಜಕ್ಕೂ ಒಂದು ಪ್ರಹಸನವೇ. ಆದರೆ ಈ ದೇಶದ ಜನತೆಯ ಮಟ್ಟಿಗಂತೂ ಈ ನೂರು ದಿನಗಳ ಅಲ್ಪ ಅವಧಿ ಹಲವು ರೀತಿಗಳಲ್ಲಿ ಗಡಿಯಾರದ ಮುಳ್ಳುಗಳನ್ನು ಹಿಂದಕ್ಕೆ ತಿರುಗಿಸಿದ ಅವಧಿ.

ಆಳ್ವಿಕೆ ಕುರಿತಂತೆ ಸರಕಾರದ ಅತ್ಯಂತ ಹಾಸ್ಯಾಸ್ಪದ ನಿಲುವು ಕಂಡುಬಂದದ್ದು ದೇಶದ ಆರ್ಥಿಕದ ನಿರ್ವಹಣೆಯ ರಂಗದಲ್ಲಿ. ಈ ಸರಕಾರ ಮಂಡಿಸಿದ ಬಜೆಟ್ ಅಭೂತಪೂರ್ವ ಹೊರೆಗಳನ್ನು ಹಾಕಿದೆ. ಅವಶ್ಯಕ ವಸ್ತುಗಳ, ಅದರಲ್ಲೂ ತರಕಾರಿಗಳ ನಿರಂತರ ಬೆಲೆಯೇರಿಕೆ ನಿತ್ಯದ ಸಂಗತಿಯಾಗಿಬಿಟ್ಟಿದೆ. ಲಂಗುಲಗಾಮಿಲ್ಲದ ಖಾಸಗೀಕರಣ ಆರಂಭಿಸಲಾಗಿದೆ. ಬಹುರಾಷ್ಟ್ರೀಯ ಕಂಪನಿಗಳಿಗೆ ನಮ್ಮ ಆರ್ಥಿಕ ಸಂಪನ್ಮೂಲಗಳನ್ನು ಲೂಟಿ ಮಾಡಲು ಸಂಪೂರ್ಣ ಸ್ವಾತಂತ್ರ್ಯ ಕೊಡಲಾಗಿದೆ. ಸಾಲದ್ದಕ್ಕೆ ಇವನ್ನೆಲ್ಲ ಸ್ವದೇಶಿಯ ಹೆಸರಲ್ಲೇ ಮಾಡಲಾಗುತ್ತಿದೆ. ಇದರ ಪರಿಣಾಮವಾಗಿ ಲಕ್ಷಾಂತರ ಕಾರ್ಮಿಕರನ್ನು ರಿಟ್ರೆಂಚ್‌ಮೆಂಟ್‌ನಲ್ಲಿ ಕೆಲಸಕೊಳ್ಳುವ ಭಯ ಆವರಿಸಿದೆ. ಇದು ಈಗಾಗಲೇ ಶೋಚನೀಯವಾಗಿರುವ ನಿರುದ್ಯೋಗದ ಪರಿಸ್ಥಿತಿಯನ್ನು ಇನ್ನಷ್ಟು ವಿಕಟಗೊಳಿಸುತ್ತದೆ.

ಇನ್ನೊಂದು ಮಟ್ಟದಲ್ಲಿ, ಆರ್ಥಿಕದ ನಿರ್ವಹಣೆ ಎಷ್ಟು ಕೆಟ್ಟದ್ದಾಗಿದೆಯೆಂದರೆ ರೂಪಾಯಿ ಬೆಲೆ ಹಿಂದೆಂದೂ ಕಾಣದ ಮಟ್ಟಕ್ಕೆ ಕುಸಿದಿದೆ. ನಿಜವಾಗಿ ರೂಪಾಯಿಯ ಬೆಲೆ 15% ದಷ್ಟು ಅಪಮೌಲ್ಯಗೊಂಡಿದೆ. ಆದರೆ ಹಣಕಾಸು ಮಂತ್ರಿಗಳು ರೋಮ್ ಹತ್ತಿ ಉರಿಯುತ್ತಿದ್ದಾಗ ರೋಮನ್ ಚಕ್ರವರ್ತಿ ಪಿಟೀಲು ಬಾರಿಸುತ್ತಿದ್ದಂತೆ ನಿಶ್ಚಿಂತರಾಗಿದ್ದಾರೆ.

ಈ ನೂರು ದಿನಗಳಲ್ಲಿ ಭಾರತದ ಆರ್ಥಿಕ ಸ್ಥಾನಮಾನ ಬಹಳ ಆಳವಾಗಿ ಕುಸಿದಿದೆ. ಸಿಐಐ(ಭಾರತೀಯ ಉದ್ದಿಮೆಗಳ ಒಕ್ಕೂಟ)ದ ಇತ್ತೀಚಿನ ಒಂದು ಸರ್ವೆಯ ಪ್ರಕಾರ ಹಲವಾರು ವಲಯಗಳಲ್ಲಿ ಉತ್ಪಾದನೆ ಇಳಿಮುಖವಾಗಿದೆ. ಒಟ್ಟಿನಲ್ಲಿ ಈ ಅಲ್ಪ ಅವಧಿಯಲ್ಲೇ ಈ ಸರಕಾರ ಭಾರತ ಸಾಮ್ರಾಜ್ಯಶಾಹಿ ಹಣಕಾಸು ಹಾಗೂ ಬಹುರಾಷ್ಟ್ರೀಯ ಕಂಪನಿಗಳ ಒತ್ತಡಕ್ಕೆ ಹೆಚ್ಚೆಚ್ಚು ಒಳಗಾಗುವಂತೆ ಮಾಡಿದೆ, ಅದೇ ವೇಳೆಗೆ ಜನರ ಮೇಲೆ ಹೊಸ-ಹೊಸ ಹೊರೆಗಳನ್ನು ಹಾಕುತ್ತಿದೆ.

### ದೇಶಕ್ಕೆ ಅತಿ ದೊಡ್ಡ ಅಪಚಾರ

ಭಾರತದ ದೀರ್ಘಕಾಲದ ವಿದೇಶಾಂಗ ನೀತಿಯನ್ನು ಹಾಗೂ ಪರಮಾಣು ನೀತಿಯನ್ನು ಈ ಸರಕಾರ ಇದ್ದಕ್ಕಿದ್ದಂತೆ ಬದಲಿಸಿ ಭಾರತ ಅಂತರ್ರಾಷ್ಟ್ರೀಯ ರಾಜಕೀಯದಲ್ಲಿ ಸಾಮ್ರಾಜ್ಯಶಾಹಿ ಒತ್ತಡಗಳಿಗೆ ಹೆಚ್ಚು ಹೆಚ್ಚು ಒಳಗಾಗುವಂತೆ ಮಾಡಿದೆ. ಎರಡನೇ ಪೋಖ್ರಾನ್ ಸ್ಫೋಟದ ನಂತರದ ಘಟ್ಟದಲ್ಲಿ ಭಾರತದ ಅಂತರ್ರಾಷ್ಟ್ರೀಯ ಸ್ಥಾನಮಾನಕ್ಕೆ ತೀವ್ರ ಹೊಡೆತ ಬಿದ್ದಿದೆ. ಈ ಸರಕಾರ ಭಾರತವನ್ನು ಈ ಉಪಖಂಡದಲ್ಲಿ ಒಂದು ಬುದ್ದಿಗೇಡಿ ಶಸ್ತ್ರಾಸ್ತ್ರ ಪೈಪೋಟಿಯತ್ತ ನೂಕಿದ್ದಷ್ಟೇ ಅಲ್ಲ, ಕಳೆದ ದಶಕಗಳಲ್ಲಿ ಭಾರತ ರಾಜತಾಂತ್ರಿಕ ವಲಯದಲ್ಲಿ ಮಾಡಿದ ಸಾಧನೆಗಳನ್ನೆಲ್ಲಾ ಮಣ್ಣುಪಾಲು ಮಾಡಿದೆ.

ಈ ಸರಕಾರದ ಒಂದು ಪ್ರಮುಖ 'ಕೊಡುಗೆ' ಎಂದರೆ ಕಾಶ್ಮೀರದ ಪ್ರಶ್ನೆಯನ್ನು ಅಂತರ್ರಾಷ್ಟ್ರೀಯ ಪ್ರಶ್ನೆಯಾಗಿ ಮಾಡಲು ಸಾಮ್ರಾಜ್ಯಶಾಹಿಗಳಿಗೆ ಅವಕಾಶ ತೆರೆದು ಕೊಟ್ಟದ್ದು. ಗೃಹಮಂತ್ರಿಗಳು ರಕ್ಷಣಾ ಮಂತ್ರಿಗಳು ಮತ್ತಿತರ ಈ ಪಡೆಯ ಎಲ್ಲರೂ ಅಹಂಭಾವದಿಂದ ಕುರುಡು ದೇಶಭಕ್ತಿಯ ಪ್ರದರ್ಶನದಲ್ಲಿ ತೊಡಗುವ ಮೂಲಕ ಸಾಮ್ರಾಜ್ಯಶಾಹಿಗಳು ಕಾಶ್ಮೀರ ಪ್ರಶ್ನೆಯ ಇತ್ಯರ್ಥಕ್ಕಾಗಿ ಮೂರನೇ ದೇಶದ ಮಧ್ಯಸ್ಥಿಕೆಯನ್ನು ಒಪ್ಪಿಕೊಳ್ಳಿ ಎಂದು ಭಾರತದ ಮೇಲೆ ಒತ್ತಡ ಹಾಕಲು ಅನುವು ಮಾಡಿಕೊಟ್ಟರು. ಕಳೆದ 26 ವರ್ಷಗಳಿಂದ ಭಾರತ ಇಂತಹ ಒತ್ತಡಗಳನ್ನು ಯಶಸ್ವಿಯಾಗಿ ಎದುರಿಸಿ ಕಾಶ್ಮೀರ ಸಮಸ್ಯೆಗೆ ಪರಿಹಾರ ಶಿಮ್ಲಾ ಒಪ್ಪಂದದಡಿ ದ್ವಿಪಕ್ಷೀಯ ಮಾತುಕತೆಗಳ ಮೂಲಕ ಮಾತ್ರವೇ ಸಾಧ್ಯ ಎಂದು ಅಂತರ್ರಾಷ್ಟ್ರೀಯ ಸಮುದಾಯ ಒಪ್ಪುವಂತೆ ಭಾರತ ಮಾಡಿತ್ತು. ಈ ಉತ್ತಮ ಕೆಲಸವೆಲ್ಲಾ ಈಗ ನಿಷ್ಫಲವಾಗಿದೆ. ಇದು ಈ ಸರಕಾರ ಈ ದೇಶಕ್ಕೆ ಮಾಡಿರುವ ಅತಿದೊಡ್ಡ ಅಪಚಾರ.

ಇಷ್ಟೇ ಅಲ್ಲ, ಸಾಮ್ರಾಜ್ಯಶಾಹಿ ದೇಶಗಳು ಈಗ ಎನ್.ಪಿ.ಟಿ., ಸಿಟಿಬಿಟಿಗಳಿಗೆ ಭಾರತ ಸಹಿ ಹಾಕಬೇಕು ಎಂದು ಮತ್ತೆ ಒತ್ತಡ ಹೇರಲು ಆರಂಭಿಸಿವೆ. ಇದನ್ನು ಎದುರಿಸುವ ಸಾಮರ್ಥ್ಯವಿಲ್ಲದ ಈ ಸರಕಾರ ದೇಶ ಈ ಒತ್ತಡಗಳಿಗೆ ಮಣಿದು ದೇಶದ ಹಿತಾಸಕ್ತಿಗಳಿಗೆ ವಿಶ್ವಾಸಘಾತ ಬಗೆಯಲೂ ಬಹುದು. ಇದಕ್ಕೆ ಅವಕಾಶ ನೀಡಲಾಗದು.

ಒಟ್ಟಿನಲ್ಲಿ ಈ ಸರಕಾರದ ಪರಮಾಣು ಮತ್ತು ವಿದೇಶಾಂಗ ನೀತಿ ಭಾರತ ಸಾಮ್ರಾಜ್ಯಶಾಹಿ ಒತ್ತಡಗಳಿಗೆ ಹೆಚ್ಚೆಚ್ಚು ಬಲಿಯಾಗುವಂತೆ ಮಾಡಿವೆ. ತಮಾಷೆಯ ಸಂಗತಿಯೆಂದರೆ ಈ ದೇಶಗಳ ಅನ್ಯಾಯ ಪೂರ್ಣ ನಿರ್ಬಂಧಗಳನ್ನು ಎದುರಿಸುವ ಹೆಸರಿನಲ್ಲಿ ನಮ್ಮ ಆರ್ಥಿಕವನ್ನು ಆ ದೇಶಗಳಿಗೆ ತೆರೆದು ಕೊಡುತ್ತಿದೆ. ಈ ಸಾಮ್ರಾಜ್ಯಶಾಹಿಗಳಿಗೆ ಅದೇ ಬೇಕಾದದ್ದು.

ಹೀಗೆ ಸಾಮ್ರಾಜ್ಯಶಾಹಿಯನ್ನು ಎದುರಿಸುವ ಹೆಸರಲ್ಲಿ ನಮ್ಮ ಆರ್ಥಿಕವನ್ನು ಸಾಮ್ರಾಜ್ಯಶಾಹಿಗೆ ಹೆಚ್ಚೆಚ್ಚು ತೆರೆದು ಕೊಡಲಾಗುತ್ತದೆ, ಭಾರತ ಅವರ ರಾಜಕೀಯ, ರಾಜತಾಂತ್ರಿಕ ಹಾಗೂ ಮಿಲಿಟರಿ ಒತ್ತಡಗಳಿಗೆ ಹೆಚ್ಚೆಚ್ಚು ಬಲಿಯಾಗುವಂತೆ ಮಾಡಲಾಗುತ್ತಿದೆ - ಇವನ್ನೆಲ್ಲಾ ಭಾರತದ ಹೆಮ್ಮೆಯನ್ನು ಮೆರೆಸಲಿಕ್ಕಾಗಿಯಂತೆ! ಅದೇ ರೀತಿ ಸ್ವದೇಶಿಯ ಹೆಸರಲ್ಲಿ ದೇಶದ ಆರ್ಥಿಕವನ್ನು ಜನಗಳ ಸಂಪತ್ತನ್ನು ಖಾಸಗೀ ಲೂಟಿಗೆ ವಹಿಸಿಕೊಡಲಾಗುತ್ತಿದೆ.


ಕೃಪೆ: ಇಂಡಿಯಾ ಟುಡೇ

### ದೇಶ ಬೇಕಿಲ್ಲ, ಕೇವಲ ತನ್ನ ಅಜೆಂಡಾ ಬೇಕು.

ಹೀಗೆ ಭಾರತೀಯ ಜನತೆಯ ಹೆಸರಲ್ಲಿ ಇಷ್ಟೊಂದು ಭಾರೀ ಪ್ರಮಾಣದಲ್ಲಿ ಅಪಚಾರವೆಸಗುತ್ತಲೇ ಈ ವಾಜಪೇಯಿ ಸರಕಾರ ಕೋಮು ವಿಭಜನೆಯನ್ನು ಆಳಗೊಳಿಸಲು ಪ್ರೋತ್ಸಾಹ ನೀಡುತ್ತಿದೆ. ಅಯೋಧ್ಯೆಯಲ್ಲಿ ದೇವಸ್ಥಾನ ಕಟ್ಟುವ ಬಗ್ಗೆ ನಿರಂತರ ಪ್ರಚಾರ, ವಿವಿಧ ವರ್ಕ್‌ಶಾಪ್‌ಗಳಲ್ಲಿ ಇದಕ್ಕಾಗಿ ಗುಟ್ಟಿನ ಚಟುವಟಿಕೆಗಳು ಇವೆಲ್ಲಾ ದೇಶಕ್ಕೆ ಒಳಿದು ಮಾಡುವುದು, ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ಬೆಸೆಯುವುದು ಈ ಸರಕಾರಕ್ಕೆ ಬೇಕಿಲ್ಲ, ತನ್ನದೇ ರಾಜಕೀಯ ಯೋಜನೆಯನ್ನು, 'ಹಿಂದೂ ರಾಷ್ಟ್ರ' ದ ಆರ್.ಎಸ್.ಎಸ್. ಕಣ್ಣೋಟವನ್ನು ದೇಶದ ಐಕ್ಯತೆಯನ್ನು ಒಡೆದಾದರೂ ಜಾರಿಗೆ ತರುವುದೇ ಅದಕ್ಕೀಗ ಬೇಕಾಗಿರುವುದು.

ತನ್ನ ಗುರಿ ಈಡೇರಿಸಿಕೊಳ್ಳುವಲ್ಲಿ ಸರಕಾರ ಪ್ರಜಾಪ್ರಭುತ್ವದ ಎಲ್ಲಾ ನೀತಿ-ನಿಯಮಗಳನ್ನು ಗಾಳಿಗೆ ತೂರಿ ಸಂವಿಧಾನವನ್ನು ಬಹಿರಂಗವಾಗಿಯೇ ಉಲ್ಲಂಘಿಸುತ್ತಿದೆ. ನಮ್ಮ ಸಂವಿಧಾನದ ಒಕ್ಕೂಟ ತತ್ವವನ್ನು ಉಲ್ಲಂಘಿಸಿ ರಾಜ್ಯಗಳಿಗೆ ಅದು ತನಿಖಾ ತಂಡಗಳನ್ನು ಕಳಿಸುತ್ತಿರುವ ರೀತಿ ಬಿಜೆಪಿಯ ಸರ್ವಾಧಿಕಾರಿ ಪ್ರವೃತ್ತಿಗಳನ್ನು ಬಿಂಬಿಸುತ್ತಿದೆ.

ದೇಶದ ಹೆಸರಲ್ಲಿ ಇವನ್ನೆಲ್ಲಾ ಮಾಡುತ್ತಲೇ ಬಿಜೆಪಿ ಮತ್ತು ಅದರ ಗುರು ಆರ್.ಎಸ್.ಎಸ್. ಆಡಳಿತದೊಳಗೆ ತೂರಿಕೊಳ್ಳಲು ಪ್ರಯತ್ನಿಸುತ್ತಿದೆ. ರಾಜ್ಯಪಾಲರುಗಳು ಮತ್ತಿತರ ಹುದ್ದೆಗಳಿಗೆ ಎಲ್ಲರಿಗೂ ತಿಳಿದಿರುವ ರಾಜಕೀಯ ವ್ಯಕ್ತಿಗಳನ್ನೇ ನೇಮಿಸುವ ಮೂಲಕ ವಿವಿಧ ಹುದ್ದೆಗಳ ಘನತೆಗೆ ತಾನು ಏನೇನೂ ಬೆಲೆ ಕೊಡುವುದಿಲ್ಲ ಎಂದು ಬಿಜೆಪಿ ಸಾರಿ ಹೇಳುತ್ತಿದೆ.

### ಹೊಗಳು ಭಟ್ಟರ ಸಂಖ್ಯೆಯಲ್ಲಿ ಹೆಚ್ಚಳ

ಈ ನೂರು ದಿನಗಳ ಅತ್ಯಂತ ಗಮನಾರ್ಹ ಸಂಗತಿಯೆಂದರೆ ಹೊಗಳುಭಟ್ಟಂಗಿತನ. ಪತ್ರಿಕಾ ರಂಗದ, ಇಲೆಕ್ಟ್ರಾನಿಕ್ ಮಾಧ್ಯಮದ ಕೆಲವು ವಿಭಾಗಗಳಲ್ಲಿ ಇದು ಈ ನೂರು ದಿನಗಳಲ್ಲಿ ಎದ್ದು ಕಾಣುತ್ತಿದೆ. ಇಂತಹ ಹೊಗಳು ಭಟ್ಟಂಗಿಗಳಿಗೆ ಸೂಕ್ತ ಬಹುಮಾನ ನೀಡಿ ತೃಪ್ತಗೊಳಿಸುವ ಸಾಮರ್ಥ್ಯ ತನಗಿದೆ ಎಂದೂ ಬಿಜೆಪಿ ಈ ನೂರು ದಿನಗಳಲ್ಲಿ ತೋರಿಸಿಕೊಟ್ಟಿದೆ. ಕಾವಿಪಡೆಗಳು ಪ್ರಿತೀಶ್ ನಂದಿ ಮತ್ತು ಅರುಣ್ ಶೌರಿಯವರನ್ನು ರಾಜ್ಯಸಭಾ ಸದಸ್ಯರನ್ನಾಗಿ ಮಾಡಿದ್ದಾರೆ. 1980 ರ ಮಧ್ಯಭಾಗದಲ್ಲಿ ಪ್ರೀತೀಶ್ ನಂದಿ 'ಇಲ್ಲಸ್ಟ್ರೇಟೆಡ್ ವೀಕ್ಲಿ' ಯ ಸಂಪಾದಕರಾಗಿದ್ದಾಗ ಈ ಪತ್ರಿಕೆಯಲ್ಲಿ ಅರುಣ್ ಶೌರಿಯವರಿಗೆ 1942 ರಲ್ಲಿ ಕಮ್ಯುನಿಸ್ಟರ ಪಾತ್ರದ ಕುರಿತು 'ನಾಲ್ಕು ಭಾಗಗಳ ಲೇಖನ' ಬರೆಯುವ ಕೆಲಸ ಹಚ್ಚಿದರು ಎಂಬುದನ್ನು ಈಗ ನೆನಪಿಸಿ ಕೊಳ್ಳಬಹುದು. ಅರುಣ್ ಶೌರಿಯವರಿಗೆ ಈ ಲೇಖನದಲ್ಲಿ ಹೊಸದಾಗಿ ಮೌಲಿಕವಾದದ್ದೇನೂ ಹೇಳಲಾಗಲಿಲ್ಲ. ದಶಕಗಳ ಕಾಲ ಎಲ್ಲರಿಗೂ ಗೊತ್ತಿದ್ದ ಚರ್ವಿತ ಚರ್ವಣವೇ ಈ ಲೇಖನದಲ್ಲಿ ಇದ್ದದ್ದು. ಇರಲಿ, ಅವರ ಮಟ್ಟಿಗೆ ಇದೇ ಸೃಜನಾತ್ಮಕ ಪತ್ರಕಾರಿತೆ!

ಈ ಇಬ್ಬರು ಮಹನೀಯರ ಕಮ್ಯುನಿಸ್ಟ್-ವಿರೋಧಿ ಅಪಲಾಪಗಳಿಗೆ ಕೊನೆಗೆ ಭಾರತದ ರಾಷ್ಟ್ರಪತಿಗಳಾದ ಶಂಕರ್ ದಯಾಳ್ ಶರ್ಮ ಕ್ವಿಟ್ ಇಂಡಿಯಾ ಆಂದೋಲನದ ಸುವರ್ಣ ಜಯಂತಿಯ ವಿಶೇಷ ಸಂಸದೀಯ ಅಧಿವೇಶನದಲ್ಲಿ ಮಾತನಾಡುವಾಗ ಸರಿಯಾದ ಉತ್ತರ ನೀಡಿದರು- "ಕಾನ್ಪುರ, ಜಮಶೆಡ್‌ಪುರ ಹಾಗೂ ಅಹ್ಮದಾಬಾದ್‌ನ ಗಿರಣಿಗಳಲ್ಲಿ ವ್ಯಾಪಕ ಪ್ರಮಾಣದ ಮುಷ್ಕರಗಳ ನಂತರ ದಿಲ್ಲಿಯಿಂದ ಲಂಡನ್ನಿನಲ್ಲಿರುವ ಗೃಹ ಕಾರ್ಯದರ್ಶಿಗೆ ಕಳಿಸಿದ ಸೆಪ್ಟೆಂಬರ್ 5, 1942 ರ ಸಂದೇಶದಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷದ ಬಗ್ಗೆ ವರದಿ ಮಾಡಿತ್ತು; ಅದರ ಸದಸ್ಯರುಗಳ ವರ್ತನೆ ಕುರಿತು ಸದಾ ಸ್ಪಷ್ಟವೇ ಆಗಿದ್ದ ಸಂಗತಿಯನ್ನು ಸಾಬೀತು ಮಾಡಿತು. ಅದೇನೆಂದರೆ ಅದು ಬ್ರಿಟಿಶ್-ವಿರೋಧಿ ಕ್ರಾಂತಿಕಾರಿಗಳಿಂದ ಕೂಡಿದೆ ಎಂಬುದು"

ನಿಜ, ತನಗೆ ಇಂತಹ ಯಾವುದೇ ದಸ್ತಾವೇಜು ಸಿಗಲಿಲ್ಲ ಎಂದು ಶ್ರೀಯುತ ಎಂದು ಶೌರಿ ಹೇಳಿಕೊಳ್ಳಬಹುದು. ಖಂಡಿತವಾಗಿಯೂ "ವಿಶೇಷವಾಗಿ ಆಗಸ್ಟ್1942 ರಲ್ಲಿ ಭುಗಿಲೆದ್ದ ಗಲಭೆಗಳಲ್ಲಿ ಭಾಗವಹಿಸದೆ ದೂರವಿದ್ದು ಸಂಘ ತನ್ನನ್ನು ಕಾನೂನಿನ ಪರಿಧಿಯೊಳಗೆ ಇಟ್ಟುಕೊಂಡಿತು" ಎಂದು ಕ್ವಿಟ್ ಇಂಡಿಯಾ ಆಂದೋಲನದ ವೇಳೆಯಲ್ಲಿ ಬ್ರಿಟಿಶ್ ಗೃಹ ಇಲಾಖೆಗೆ ವರದಿ ಮಾಡಿದ್ದು ಕೂಡಾ ಅವರ ಗಮನಕ್ಕೆ ಬಂದಿರಲಿಕ್ಕಿಲ್ಲ.

ಹೀಗಿದೆ ಈ ಮಹನೀಯರುಗಳ ಬೌದ್ಧಿಕ ಪ್ರಾಮಾಣಿಕತೆ. ಆದರೂ ಈ ಮಹನೀಯರುಗಳಿಗೆ ಸೂಕ್ತ ಬಹುಮಾನ ದೊರೆತದ್ದನ್ನು ಕಂಡು ಇನ್ನೂ ಹಲವಾರು ಪತ್ರಕರ್ತರು ಅದೇ ರಾಗ ಹಾಡಲಾರಂಭಿಸಿದ್ದಾರೆ.

ಉದಾಹರಣೆಗೆ, ಪ್ರಮುಖ ಇಂಗ್ಲೀಷ್ ವಾರಪತ್ರಿಕೆ 'ಇಂಡಿಯಾ ಟುಡೇ' ಯ ಸಂಪಾದಕರು ಎಐಎಡಿಎಂಕೆ ಕರುಣಾನಿಧಿ ಸರಕಾರವನ್ನು ವಜಾ ಮಾಡಬೇಕು ಎಂದು ಆಗ್ರಹಿಸುತ್ತಿರುವುದನ್ನು ಹಿಂದೊಂದು ಸಂದರ್ಭದಲ್ಲಿ ಸಿಪಿಐ(ಎಂ) ಗುಜರಾತ್ ಸರ್ಕಾರವನ್ನು ವಜಾ ಮಾಡಲು ಒತ್ತಾಯಿಸಲಾಯಿತು ಎನ್ನಲಾದ ಘಟನೆಯೊಡನೆ ಹೋಲಿಸಿದ್ದಾರೆ. ಮೊದಲನೆಯದಾಗಿ ಸಿಪಿಐ(ಎಂ) ಎಂದೂ ಇಂತಹ ಬೇಡಿಕೆ ಇಟ್ಟಿರಲಿಲ್ಲ. ಬಿಜೆಪಿ ಗುಜರಾತಿನಲ್ಲಿ ಆಗ ಸುಮಾರಾಗಿ ಒಡೆದೇ ಹೋಗಿತ್ತು. ಇದರಿಂದ ಭಿನ್ನಮತೀಯ ಮುಖಂಡ ಶಂಕರ್‌ಸಿಂಗ್ ವಘೇಲಾ ಪರ್ಯಾಯ ಸರಕಾರ ರಚಿಸಿದರು. ರಾಷ್ಟ್ರಪತಿ ಆಳ್ವಿಕೆ ಹೇರಿಕೆಗೆ ಕಾರಣವಾದ ಬಿಜೆಪಿ ವಿಭಜನೆಗೆ ಸಿಪಿಐ(ಎಂ) ಕಾರಣವೆಂದು ಜನ ನಂಬುವಂತೆ ಈ ಸಂಪಾದಕರು ಜಾಣತನದ ಪ್ರಯತ್ನ ನಡೆಸಿದ್ದಾರೆ!


ಹೀಗೆ ಈ ಚಾಳಿಯ ಪತ್ರಕರ್ತರು ತಮ್ಮ ಯಜಮಾನರುಗಳ ಹಿತಾಸಕ್ತಿಗಳನ್ನು ಈಡೇರಿಸಿಕೊಳ್ಳಲು ಏನು ಮಾಡಲು, ಹೇಳಲೂ ಹೇಸರು. ದುರದೃಷ್ಟವಶಾತ್ ಇಂತಹವರ ಸಂಖ್ಯೆ ಹೆಚ್ಚುತ್ತಿದೆ. ನಮ್ಮ ಪ್ರಜಾಪ್ರಭುತ್ವದ ಈ ನಾಲ್ಕನೇ ಸ್ತಂಭದ ವಸ್ತುನಿಷ್ಟತೆ ಈ ರೀತಿ ಧ್ವಂಸವಾಗುತ್ತಿರುವುದು, ಅದಕ್ಕೆ ಮಾಧ್ಯಮಗಳಲ್ಲಿನ ಹೊಗಳುಭಟ್ಟರ ನೆರವು ಕೂಡಾ ಈ ಸರಕಾರ ಈ 100 ದಿನಗಳಲ್ಲಿ ನೀಡಿದ ಇನ್ನೊಂದು ದೊಡ್ಡ ಕೊಡುಗೆ!

ಕೃಪೆ: 'ಟೈಂಸ್ ಆಫ್ ಇಂಡಿಯಾ'ದಲ್ಲಿ ಆರ್.ಕೆ.ಲಕ್ಷ್ಮಣ್



# ಸಿಪಿಐ(ಎಂ) 356ನೇ ಕಲಮನ್ನು ಏಕೆ ವಿರೋಧಿಸುತ್ತಿದೆ?

*ಪ್ರಾದೇಶಿಕ ಪಕ್ಷಗಳ ಬೆಂಬಲವನ್ನು ಅವಲಂಬಿಸಿರುವ ಅಲ್ಪಮತದ ವಾಜಪೇಯಿ ಸರ್ಕಾರದ ಶೋಚನೀಯ ಸ್ಥಿತಿಯಿಂದಾಗಿ ರಾಜ್ಯ ಸರ್ಕಾರಗಳನ್ನು ವಜಾ ಮಾಡಲು ಬಳಸುವ ಸಂವಿಧಾನದ 356ನೇ ಕಲಮಿನ ಬಗ್ಗೆ ಮತ್ತೆ ಚರ್ಚೆ ನಡೆಯುತ್ತಿದೆ. ಈ ಬಗ್ಗೆ 'ಫ್ರಂಟ್‌ಲೈನ್' ಇಂಗ್ಲೀಷ್ ಪತ್ರಿಕೆ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ ಪ್ರಕಾಶ್ ಕಾರಟ್‌ರೊಂದಿಗೆ ನಡೆಸಿದ ಸಂದರ್ಶನದ ಅನುವಾದವನ್ನು ಇಲ್ಲಿ ಕೊಡಲಾಗಿದೆ.*



## ಇದನ್ನು ಬದಲಿಸದೆ ದುರುಪಯೋಗದ ನಿರ್ಮೂಲನ ಸಾಧ್ಯವಿಲ್ಲ

● *ಬಿಜೆಪಿಯ ಕೆಲವು ಮಿತ್ರಪಕ್ಷಗಳು ತಮ್ಮ ರಾಜಕೀಯ ಪ್ರತಿಸ್ಪರ್ಧಿಗಳ ವಿರುದ್ಧ ಸಂವಿಧಾನದ 356ನೇ ಕಲಮನ್ನು ಬಳಸಬೇಕು ಎಂದು ಆಗ್ರಹಿಸುವುದರೊಂದಿಗೆ ರಾಜಕೀಯ ಸೇಡು ತೀರಿಸಿಕೊಳ್ಳುವ ಸಾಧನವಾಗಿ ಇದರ ಉಪಯೋಗ ಪ್ರಶ್ನೆ ಮತ್ತೆ ಮುಂಚೂಣಿಗೆ ಬಂದಿದೆ. ನೀವು ಇದನ್ನು ಹೇಗೆ ಕಾಣುತ್ತೀರಿ?*

**ಪ್ರಕಾಶ್ ಕಾರಟ್:** ಈ ಸಂವಿಧಾನದ ಕಲಮಿನ ಸ್ವರೂಪ ನಿರಂತರವಾಗಿ ಈ ಬಗೆಯ ದುರುಪಯೋಗಕ್ಕೆ ಆಹ್ವಾನ ನೀಡುವಂತದ್ದು. ಹೆಚ್ಚಿನ ಸಂದರ್ಭಗಳಲ್ಲಿ 356ನೇ ಕಲಮಿನ ಬಳಕೆ ಪ್ರಜಾಪ್ರಭುತ್ವ-ವಿರೋಧಿ ಹಾಗೂ ಅಸಮರ್ಥನೀಯವಾಗಿದೆ. ಈ ಕಲಮನಲ್ಲಿ ಅತ್ಯಂತ ದೂಷಣಾರ್ಹ ಸಂಗತಿಯೆಂದರೆ ಇಲ್ಲಾಗುವ ಅನ್ಯಾಯಕ್ಕೆ ಪರಿಹಾರದ ಅವಕಾಶವಿಲ್ಲ. 1994ರ ನಂತರ ಅಂದರೆ ಬೊಮ್ಮಾಯಿ ತೀರ್ಪಿನ ನಂತರ ಆಗಿರುವ ಒಂದೇ ಸಂಗತಿಯೆಂದರೆ ಅದನ್ನೀಗ ನ್ಯಾಯಾಂಗದ ಪರಿಶೀಲನೆಗೆ ತೆರೆಯಲಾಗಿದೆ. ಇದರಿಂದಾಗಿ ಬಹುಶಃ ಈಗ ಸ್ವಲ್ಪ ಹತೋಟಿ, ತಡೆ ಇದೆ.

● *ಬೊಮ್ಮಾಯಿ ತೀರ್ಪಿನಿಂದ ಇದಲ್ಲದೆ 356ನೇ ಕಲಮಿನ ಬಳಕೆಯಲ್ಲಿ ಬೇರೇನಾದರೂ ಗುಣಾತ್ಮಕ ಬದಲಾವಣೆಯಾಗಿದೆ ಎಂದು ನಿಮಗನಿಸುತ್ತದೆಯೇ?*

**ಪ್ರಕಾಶ್ ಕಾರಟ್:** ಬೊಮ್ಮಾಯಿ ತೀರ್ಪಿನ ಮಹತ್ವವೆಂದರೆ ಅದು 356ನೇ ಕಲಮಿನ ಬಳಕೆಯ ಬಗ್ಗೆ ಪರಿಮಿತಿಗಳನ್ನು ಹಾಕಿತು. ರಾಜಕೀಯ ಪ್ರತಿಸ್ಪರ್ಧಿಗಳ ಮೇಲೆ ಸೇಡು ತೀರಿಸಲು ಕೇಂದ್ರದ ಆಳುವ ಪಕ್ಷದ ಬಳಕೆಗಾಗಿ ಈ ಕಲಮನ್ನು ಸೇರಿಸಿದ್ದಲ್ಲ ಎಂದು ಆ ತೀರ್ಪು ಬೊಟ್ಟು ಮಾಡಿ ತೋರಿತು. ಕರಾಳ ಅವಕಾಶಗಳ ಮೇಲೆ ಮಿತಿ ಹಾಕಲು ಅದು ಪ್ರಯತ್ನಿಸಿತೆನ್ನಬಹುದು. ನ್ಯಾಯಾಂಗ ಮಧ್ಯ ಪ್ರವೇಶದಿಂದ ಅದರ ದುರುಪಯೋಗದ ಮೇಲೆ ತಡೆ ಬಂದಿದೆ. ಆದರೆ ಕಲಮಿನ ದುರುಪಯೋಗದ ನಿರ್ಮೂಲನೆ ಸಾಧ್ಯವಿಲ್ಲ.

● *ಹಾಗಿದ್ದರೆ ಪರಿಹಾರವೇನು?*

**ಪ್ರಕಾಶ್ ಕಾರಟ್:** ನಿಜವಾದ ಪರಿಹಾರವೆಂದರೆ ಸಂವಿಧಾನದ ಸೂಕ್ತ ತಿದ್ದುಪಡಿ ತಂದು 356ನೇ ಕಲಮನ್ನು ಬದಲಿಸುವುದೇ ನಿಜವಾದ ಪರಿಹಾರ. ಈಗಿರುವ ರೀತಿಯಲ್ಲಿ ಇದು ಮುಂದುವರಿಯಲು ಸಾಧ್ಯವಿಲ್ಲ ಎಂಬ ಬಗ್ಗೆ ಸಂದೇಹವಿಲ್ಲ. ಒಂದು ರಾಜ್ಯ ಸರಕಾರದ ಕೃತ್ಯಗಳಿಂದಾಗಿ ಅಥವಾ ಈ ಸರಕಾರದ ಪ್ರತ್ಯೇಕತವಾದಿ ಆಂದೋಲನದಿಂದಾಗಿ ಐಕ್ಯತೆಗೆ ಗಂಭೀರ ಅಪಾಯ ಬರುವಂತಹ ಸಂದರ್ಭದಲ್ಲಿ ಮಾತ್ರವೇ ಅದನ್ನು ವಜಾ ಮಾಡಬಹುದು ಎಂಬಂತೆ ಸಂವಿಧಾನವನ್ನು ತಿದ್ದುಪಡಿ ಮಾಡಬೇಕು ಎಂದು ನಾವು ಹಲವು ವೇದಿಕೆಗಳಲ್ಲಿ ಪ್ರಸ್ತಾಪಿಸುತ್ತಾ ಬಂದಿದ್ದೇವೆ. ಡಿಸೆಂಬರ್ 6, 1992 ರ ಬಿಜೆಪಿ ರಾಜ್ಯಸರಕಾರಗಳು ರಾಷ್ಟ್ರೀಯ ಐಕ್ಯತೆಗೆ ಒಂದು ಬೆದರಿಕೆಯನ್ನೊಡ್ಡಿದ ಅನುಭವದ ನಂತರ ಇದು ನಮ್ಮ ನಿಲುವು.

● *356ನೇ ಕಲಮು ಅಗತ್ಯವೆನಿಸುವ ಬೇರೆ ಕೆಲವು ಸನ್ನಿವೇಶಗಳೂ ಇವೆ. ಉದಾಹರಣೆಗೆ, ಒಂದು ಚುನಾವಣೆಯಲ್ಲಿ ತ್ರಿಶಂಕು ಸಂಸತ್ತು ಮೂಡಿಬಂದಾಗ, ಅಂದರೆ ಈ ಚುನಾವಣೆಯಲ್ಲಿ ಭಾಗವಹಿಸಿದ ಯಾರಿಗೂ ಸರಕಾರ ರಚಿಸಬಲ್ಲ ಒಂದು ಚುನಾವಣಾ ನಂತರದ ವ್ಯವಸ್ಥೆ ಏರ್ಪಡಿಸಿಕೊಳ್ಳಲು ಸಾಧ್ಯವಾಗದಾದಾಗ ಅಥವಾ ಒಂದು ಸರಕಾರ ಮೈತ್ರಿಕೂಟದ ಪಾಲುದಾರರ ಬೆಂಬಲ ವಾಪಸಾತಿಯಿಂದ ಬಹುಮತ ಕಳಕೊಂಡಾಗ.*

**ಪ್ರಕಾಶ್ ಕಾರಟ್:** ಇಂತಹ ಪರಿಸ್ಥಿತಿಗಳು ಉತ್ತರ ಪ್ರದೇಶದಲ್ಲಿ ಇತ್ತೀಚೆಗೆ ಮತ್ತೆ-ಮತ್ತೆ ಬಂದಿವೆ. ನಮ್ಮ ಅಭಿಪ್ರಾಯದಲ್ಲಿ ಇವು 356ನೇ ಕಲಮಿನಡಿ ಬರಬೇಕಾಗಿಲ್ಲ. ಇದು ಅಸೆಂಬ್ಲಿಯಲ್ಲಿ ಬಹುಮತ ಇಲ್ಲದಿರುವ ಅಥವಾ ಕಳಕೊಂಡ ಪ್ರಶ್ನೆ. ಆದಕ್ಕೆ ನೀವು ರಾಜ್ಯಪಾಲರಿಗೆ ಬೇರೊಂದು ವಿಧಾನದ ಮಾರ್ಗದರ್ಶನಗಳನ್ನು ರೂಪಿಸಬಹುದು. ಆದಕ್ಕೆ 356ನೇ ಕಲಮು ಬೇಕಿಲ್ಲ. ಇದು ಮುಖ್ಯವಾಗಿ ಸಾಂವಿಧಾನಿಕ ನಿರ್ವಹಣೆ ಮುರಿದು ಬಿದ್ದ ಪರಿಸ್ಥಿತಿಯ ಬಗ್ಗೆ ಹೇಳುತ್ತದೆ. ಉಳಿದ ಸನ್ನಿವೇಶಗಳ ಬಗ್ಗೆಯೂ ಹೇಳುತ್ತದೆ. ಇದನ್ನೇ ಬಳಸಿ ರಾಜ್ಯಪಾಲರ ವರದಿಯನ್ನು ಬದಿಗೊತ್ತಿ ಸರಕಾರವನ್ನು ವಜಾ ಮಾಡಿದಂತಹ ಪ್ರಕರಣಗಳು ನಡೆದವು. ತಮಿಳುನಾಡು ಹಿಂದಿನ ಡಿ.ಎಂ.ಕೆ. ಸರಕಾರವನ್ನು ವಜಾ ಮಾಡಿದಾಗ ಹೀಗೆ ಆಯಿತು. ನಾವು ಈ ಸಾಂವಿಧಾನಿಕ ಅವಕಾಶವನ್ನು ಬದಲಿಸಬೇಕು ಎನ್ನುತ್ತೇವೆ. ಆಗ ಈ ವಿವಾದ ಬಗೆ ಹರಿಯುತ್ತದೆ.

ಆದರೆ ಇದನ್ನು ಮಾಡುವುದು ಹೇಗೆ? ಈ ಹಿಂದೆ ಇದರ ಬಗ್ಗೆ ಬಾರೀ ಅಬ್ಬರ ಮಾಡುತ್ತಿದ್ದ ಬಿಜೆಪಿಗೆ ಈಗ ಗಂಭೀರ ಆಸಕ್ತಿಯಿದ್ದಂತಿಲ್ಲ. ಇದಕ್ಕೆ ಕಾರಣ ಅದರ ಮೈತ್ರಿಕೂಟದ ಆಂತರಿಕ ಸಮಸ್ಯೆಗಳು ಹಾಗೂ ಹಲವು ಬಿಜೆಪಿ ಮಿತ್ರಪಕ್ಷಗಳ 356ನೇ ಕಲಮನ್ನು ಬಳಸಬೇಕೆಂಬ ನಿರಂತರ ಒತ್ತಡಗಳು. ಅಂತರ ರಾಜ್ಯ ಮಂಡಳಿ ಈ ವಿಷಯದ ಪರಿಶೀಲನೆಗೆಂದು ಒಂದು ಉಪಸಮಿತಿ ರಚಿಸಿತ್ತು. ಅದು ಒಂದು ಸೂತ್ರ ಅಥವಾ ವರದಿ ತಯಾರಿಸಿ 356ನೇ ಕಲಮನ್ನು ಬದಲಿಸುವ ಬಗ್ಗೆ ಸೂಚನೆಗಳನ್ನು ನೀಡಿದೆ. ಈ ಸಮಿತಿಯಲ್ಲಿ ಬಿಜೆಪಿ, ಕಾಂಗ್ರೆಸ್(ಐ), ಸಿಪಿಐ(ಎಂ) ಇತ್ಯಾದಿ ಮುಖ್ಯಮಂತ್ರಿಗಳಿದ್ದಾರೆ. ಆದ್ದರಿಂದ ಬಿಜೆಪಿ ಸರಕಾರ ಈಗ ಮಾಡಬೇಕಾದ್ದೇನೆಂದರೆ ಅಂತರರಾಜ್ಯ ಮಂಡಳಿಯ ಸಭೆ ಕರೆದು ಸಂಯುಕ್ತರಂಗ ಸರಕಾರ ಆರಂಭಿಸಿದ್ದ ಈ ಕೆಲಸವನ್ನು ಪೂರ್ಣಗೊಳಿಸಬೇಕು. ಆಗ 356ನೇ ಕಲಮನ್ನು ಹೇಗೆ ಬದಲಿಸಬೇಕು ಎಂಬ ಬಗ್ಗೆ ಒಂದು ಒಪ್ಪಂದಕ್ಕೆ ಬರಲು ಸಾಧ್ಯ. ಏಕೆಂದರೆ ಯಾವುದೇ ಪ್ರಸ್ತಾವ ಅಂಗೀಕಾರವಾಗಬೇಕಾದರೆ ಸಂಸತ್ತಿನಲ್ಲಿ ಮೂರನೇ ಎರಡು ಬಹುಮತ ಬೇಕು.

● *356 ನೇ ಕಲಮಿನ ದುರುಪಯೋಗದ ಸಂದರ್ಭದಲ್ಲಿ ರಾಜ್ಯಪಾಲರ ಪಾತ್ರವನ್ನು ಪ್ರಶ್ನಿಸಲಾಗಿದೆಯಲ್ಲವೇ?*

**ಪ್ರಕಾಶ್ ಕಾರಟ್:** ಈ ವಿಷಯದಲ್ಲಿ ಸರ್ಕಾರಿಯಾ ಆಯೋಗದ ಶಿಫಾರಸುಗಳು ಸದುದ್ದೇಶಪೂರ್ಣವಾಗಿವೆ. ರಾಜಕೀಯದಲ್ಲಿ ಸಕ್ರಿಯರಾಗಿರುವವರನ್ನು, ವಿಶೇಷವಾಗಿ ಆಳುವ ಪಕ್ಷಗಳ ಮುಖಂಡರನ್ನು ರಾಜ್ಯಪಾಲರಾಗಿ ನೇಮಿಸಬಾರದು ಎಂದು ಅದು ಹೇಳಿದೆ. ಆದರೆ ಅದೇ ನಡೆಯುತ್ತಿದೆ. ಈ ಬಾರಿಯೂ ನಡೆದಿದೆ. ತನ್ನ ವಿರೋಧಿ ಎಂದು ಬಗೆದಿರುವ ಸರಕಾರವಿರುವ ಬಿಹಾರದಲ್ಲಿ ಬಿಜೆಪಿ ತನ್ನ ಹಿರಿಯ ಮುಖಂಡರಾದ ಸುಂದರ್‌ಸಿಂಗ್ ಭಂಡಾರಿಯವರನ್ನೇ ರಾಜ್ಯಪಾಲರಾಗಿ ನೇಮಿಸಿದೆ. ನಾವು ಸರ್ಕಾರಿಯಾ ಆಯೋಗದಿಂದಾಚೆ ಹೋಗಬೇಕಾಗಿದೆ. ಕೇಂದ್ರ-ರಾಜ್ಯ ಸಂಬಂಧಗಳ ಇಡೀ ಪ್ರಶ್ನೆಯನ್ನು ಪರಿಶೀಲಿಸುವಾಗ ರಾಜ್ಯಪಾಲರ ಪಾತ್ರ ನಿರ್ಣಾಯಕವಾಗುತ್ತದೆ. ಈಗಂತೂ ರಾಜ್ಯಪಾಲರ ಪಾತ್ರ ಒಕ್ಕೂಟ ರಚನೆಗೆ ಕೆಡುಕುಂಟು ಮಾಡುವಂತದ್ದು.

ಇದನ್ನು ನಿವಾರಿಸಲು ಹಲವು ವಿಧಾನಗಳನ್ನು ಅನುಸರಿಸಬಹುದು. ಒಂದು ದಾರಿಯೆಂದರೆ ರಾಜ್ಯಪಾಲರನ್ನು ನೇಮಿಸುವ ಮೊದಲು ಕೇಂದ್ರ ಸರಕಾರ ರಾಜ್ಯ ಸರಕಾರದ ಒಪ್ಪಿಗೆ ಪಡೆಯುವುದು. ಇನ್ನೊಂದು ದಾರಿಯೆಂದರೆ ಹಲವು ಹೆಸರುಗಳಿರುವ ಒಂದು ಪಟ್ಟಿಯನ್ನು ಸೂಚಿಸಿ ರಾಜ್ಯಸರ್ಕಾರದೊಡನೆ ಸಮಾಲೋಚನೆಯ ನಂತರ ಇವುಗಳಲ್ಲಿ ಒಂದು ಹೆಸರನ್ನು ಆರಿಸಿಕೊಳ್ಳುವುದು. ರಾಜ್ಯಪಾಲರ ನೇಮಕ ಕೇವಲ ಆಳುವ ಪಕ್ಷದ ವಿಶೇಷ ಅಧಿಕಾರವಾಗಿರಬಾರದು.

● *ತಮಿಳುನಾಡು ಸರಕಾರದ ವಿರುದ್ಧ 356ನೇ ಕಲಮನ್ನು ಬಳಸಲಾಗುವುದು ಎಂದು ಲೋಕಸಭಾ ಚುನಾವಣೆಗಳ ಮೊದಲು ಬಿಜೆಪಿ ಮತ್ತು ತಮ್ಮ ಪಕ್ಷದ ನಡುವೆ ಒಂದು ರಾಜಕೀಯ ಒಪ್ಪಂದವಾಗಿತ್ತು ಎಂದು ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ ಜಯಲಲಿತಾ ಹೇಳಿದ್ದಾರೆ. ನೀವು ಈ ರಾಜಕೀಯ ವ್ಯವಹಾರವನ್ನು ಹೇಗೆ ಕಾಣುತ್ತೀರಿ?*

**ಪ್ರಕಾಶ್ ಕಾರಟ್:** ಇಂತಹದೊಂದು ವ್ಯವಹಾರ ಕುದುರಿಸಿರುವ ಸಾಧ್ಯತೆಗಳು ಬಹಳ ಇವೆ. ತಮ್ಮ ಸ್ವಂತ ಹಿತಾಸಕ್ತಿಗೆ ಅನುಗುಣವಾಗಿ 356ನೇ ಕಲಮನ್ನು ಬಳಸುವುದರಲ್ಲಿ ತಪ್ಪೇನಿಲ್ಲ ಎಂದು ಹಲವು ರಾಜಕೀಯ ಪಕ್ಷಗಳ ಯೋಚನೆ. ಆದರೆ ನಾವು ಹೇಳುತ್ತಿರುವುದು ಇನ್ನಷ್ಟು ಮೂಲಭೂತವಾದ ಒಂದು ಸಂಗತಿಯನ್ನು. ಈ ಕಲಮಿನ ಈಗಿರುವ ಸ್ವರೂಪವನ್ನು ತೊಲಗಿಸಿ, ಅದು ದುರುಪಯೋಗವಾಗದಂತೆ ಸೂಕ್ತ ರೀತಿಯಲ್ಲಿ ತಿದ್ದುಪಡಿ ಮಾಡಿ ಎಂದು ನಾವು ಹೇಳುತ್ತಿದ್ದೇವೆ.

# ಸತತ ದುರುಪಯೋಗದಿಂದ ವಿಶ್ವಾಸಾರ್ಹತೆ ಕಳಕೊಂಡಿದೆ

*356ನೇ ಕಲಮನ್ನು ಬಳಸುವ ಧೈರ್ಯ ಸಾಲದಾದಾಗ ತನಿಖಾ ತಂಡಗಳನ್ನು ಕಳಿಸಿಯಾದರೂ ತನ್ನ ಮಿತ್ರಪಕ್ಷಗಳನ್ನು ತಣಿಸಲು ಪ್ರಯತ್ನದಲ್ಲಿ ಬಿಜೆಪಿ ಪಶ್ಚಿಮ ಬಂಗಾಳ ಇಂತಹ ತಂಡವನ್ನು ಕಳಿಸಿ ಮುಖಭಂಗ ಮಾಡಿಕೊಂಡಿದೆ. ಪಶ್ಚಿಮ ಬಂಗಾಳದ ಗೃಹಮಂತ್ರಿ ಬುದ್ಧದೇವ್‌ಭಟ್ಟಾಚಾರ್ಯರೊಂದಿಗೆ 'ಫ್ರಂಟ್‌ಲೈನ್' ಪತ್ರಿಕೆ ನಡೆಸಿದ ಸಂದರ್ಶನದ ಅನುವಾದ ಇದು.*

● *1950 ರಿಂದ ಕೇಂದ್ರ ಸರಕಾರ ನೂರಕ್ಕೂ ಹೆಚ್ಚು ಬಾರಿ 356ನೇ ಕಲಮಿನಡಿ ರಾಷ್ಟ್ರಪತಿ ಆಳ್ವಿಕೆಯನ್ನು ಹೇರಿದೆ. ಈ ಎಲ್ಲಾ ಸಂದರ್ಭಗಳಲ್ಲಿ ಕೇಂದ್ರ ಸರ್ಕಾರ ಮಾಡಿದ್ದು ಸರಿಯೆಂದು ನಿಮಗನಿಸುತ್ತದೆಯೇ?*

**ಬುದ್ಧದೇವ್ ಭಟ್ಟಾಚಾರ್ಯ:** ಇಲ್ಲ, ಪ್ರತಿ ಬಾರಿಯೂ ಸಂಕುಚಿತ ರಾಜಕೀಯ ಸ್ವಾರ್ಥಸಾಧನೆಗಾಗಿ ಕೇಂದ್ರ ರಾಷ್ಟ್ರಪತಿ ಆಳ್ವಿಕೆ ಹೇರಿತು, ವಿರೋಧಪಕ್ಷಗಳ ಸರಕಾರಗಳನ್ನು ವಜಾ ಮಾಡಿತು. 1959 ರಲ್ಲಿ ಇಎಂಎಸ್ ನಂಬೂದರಿಪಾಡ್‌ರ ವಿಶ್ವದ ಮೊದಲ ಚುನಾಯಿತ ಕಮ್ಯುನಿಸ್ಟ್ ಸರಕಾರವನ್ನು ವಜಾ ಮಾಡಲು 356ನೇ ಕಲಮನ್ನು ಬಳಸಿದಾಗ ಈ ಅನ್ಯಾಯ ಆರಂಭವಾಯಿತು. ಪ್ರಧಾನಮಂತ್ರಿ ಜವಾಹರ ಲಾಲ್ ನೆಹರೂ ಆಗ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ತನ್ನ ಮಗಳು ಇಂದಿರಾಗಾಂಧಿಯವರ ಅಪೇಕ್ಷೆಯಂತೆ ಹೀಗೆ ಮಾಡಿದರು. ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಮುರಿದು ಬಿದ್ದಿದೆ ಎಂದು ಇದನ್ನು ಮಾಡಲಾಯಿತು. ಪಶ್ಚಿಮ ಬಂಗಾಳದಲ್ಲಿರುವ ನಾವೂ ಕೂಡಾ ಕೇಂದ್ರದ ಈ ಹೊಲಸು ಆಟಕ್ಕೆ ಬಲಿಯಾದವರು. 1969 ರಲ್ಲಿ ಸಿಪಿಐ(ಎಂ) ಸೇರಿದ್ದ ಸಂಯುಕ್ತ ರಂಗ ಸರಕಾರವನ್ನು ಕೇಂದ್ರದಲ್ಲಿನ ಕಾಂಗ್ರೆಸ್ ಸರ್ಕಾರ ರಾಷ್ಟ್ರಪತಿ ಆಳ್ವಿಕೆ ಹೇರಿ ಅಧಿಕಾರದಿಂದ ಹೊರಗೆಸೆದಿತ್ತು. ಹಲವಾರು ಸಂದರ್ಭಗಳಲ್ಲಿ ಕೇಂದ್ರ ಸರ್ಕಾರ ಈ ತುರ್ತು ಸನ್ನಿವೇಶದ ಅಂಶವನ್ನು ದುರುಪಯೋಗ ಪಡಿಸಿದೆಯೆಂದು ಸ್ವತಃ ಸುಪ್ರೀಂ ಕೋರ್ಟ್ ಹೇಳಿದೆ.

● *ನಿಮ್ಮ ಪ್ರಕಾರ ಬೊಮ್ಮಾಯಿ ಕೇಸಿನಲ್ಲಿ ಸುಪ್ರೀಂ ಕೋರ್ಟ್‌ನ ತೀರ್ಪಿನ ಮೊದಲಿನ ಹಾಗೂ ನಂತರದ ಸನ್ನವೇಶದಲ್ಲಿನ ವ್ಯತ್ಯಾಸದ ಸಾರಾಂಶ ಏನು?*

**ಬುದ್ಧದೇವ ಭಟ್ಟಾಚಾರ್ಯ:** ಬೊಮ್ಮಾಯಿ ಕೇಸಿನ ತೀರ್ಪು ಜಾತ್ಯಾತೀತತೆ ಸಂವಿಧಾನದ ಮೂಲರಚನೆಯ ಒಂದು ಭಾಗ, ಧರ್ಮ ಮತ್ತು ರಾಜಕೀಯವನ್ನು ಮಿಶ್ರ ಮಾಡಬಾರದು ಎಂದಿತು. ಎರಡನೆಯದಾಗಿ 356ನೇ ಕಲಮಿನ ಅಡಿ ಕೇಂದ್ರ ಸರಕಾರ ಮಾಡುವ ಘೋಷಣೆಯನ್ನು ನ್ಯಾಯಾಂಗ ವಿಮರ್ಶಿಸಬಹುದು ಎಂದಿತು. ಇಂತಹ ಘೋಷಣೆಯನ್ನು ಯಾವ ಆಧಾರದಲ್ಲಿ ಮಾಡಲಾಯಿತು, ಅದು ಸಂಬದ್ಧವೇ, ಅಸಂಬದ್ಧವೇ ಅಥವಾ ಅಧಿಕಾರದ ದುರುದ್ದೇಶಪೂರ್ವಕ ಚಲಾವಣೆಯಿಂದ ಮಾಡಲಾಗಿದೆಯೇ ಎಂದು ನ್ಯಾಯಾಂಗ ಪರಿಶೀಲಿಸಬಹುದು. ಹೀಗೆ ಒಂದು ಮೈಲಿಗಲ್ಲೆನಿಸಿಕೊಂಡ ಈ ತೀರ್ಪು ಜಾತ್ಯಾತೀತತೆಯನ್ನು ಒಂದು ಉನ್ನತ ಸ್ಥಾನದಲ್ಲಿಟ್ಟಿತು ಹಾಗೂ ಕೇಂದ್ರದಿಂದ 356ನೇ ಕಲಮಿನ ಬಳಕೆಯಲ್ಲಿ ಪಾರದರ್ಶಕತೆಯನ್ನು ತಂದಿತು. ಇದೇ ಮುಖ್ಯ ವ್ಯತ್ಯಾಸ.

● *ಸುಪ್ರೀಂ ಕೋರ್ಟ್ ಹಾಕಿರುವ ಮಾದರಿಯನ್ನು ಮತ್ತು ಮಿತಿಗಳನ್ನು ಉಲ್ಲಂಘಿಸುವ ಪ್ರವೃತ್ತಿಗಳು ಮುಂದುವರಿದಿರುವಾಗ ಬೊಮ್ಮಾಯಿ ಕೇಸಿನ ತೀರ್ಪನ್ನು ಜಾರಿಗೆ ತರಲು ಸಾಧ್ಯವೇ?*

**ಬುದ್ಧದೇವ ಭಟ್ಟಾಚಾರ್ಯ:** ಬೊಮ್ಮಾಯಿ ತೀರ್ಪು ಬಿಜೆಪಿಗೆ ಮತ್ತು ಹಿಂದುತ್ವ ಮತ್ತು ಹಿಂದೂ ರಾಷ್ಟ್ರದ ಗುರಿಸಾಧನೆಗೆ ಮತ್ತು ಬೇರೆ ಎಲ್ಲಾ ರೀತಿಯ ಕೋಮುವಾದಕ್ಕೆ ಒಂದು ದೊಡ್ಡ ಅಡ್ಡಿ. ಜಾತ್ಯಾತೀತ ಶಕ್ತಿಗಳಿಗೆ ಒಂದು ಪ್ರಮುಖ ವಿಜಯವಾದ ಈ ತೀರ್ಪು ಈಗ ಖಂಡಿತವಾಗಿಯೂ ಅಲೆಯನ್ನು ಕೋಮುವಾದದ ವಿರುದ್ಧ ತಿರುಗಿಸಿದೆ. ಈಗ ಒಂದು ರಾಜ್ಯ ಅಥವಾ ಒಂದು ರಾಜಕೀಯ ಪಕ್ಷ ಧರ್ಮ ಮತ್ತು ರಾಜಕೀಯವನ್ನು ಬೆರೆಸುವುದರ ವಿರುದ್ಧ ಬುದ್ಧಿವಂತಿಕೆಯಿಂದ ಗುರಿಯಿಟ್ಟು ಹಾಗೂ ಕಠಿಣ ಶಾಸನವನ್ನು ತರುವ ಘಟ್ಟ ಬಂದಿದೆ. ಸಂಸತ್ತು ಈಗ ಚುನಾವಣಾ ಪ್ರಕ್ರಿಯೆಯಲ್ಲಿ ಧರ್ಮದ ದುರುಪಯೋಗವನ್ನು ತಡೆಯಲು ವಿಶ್ವಾಸಾರ್ಹ ಕ್ರಮಗಳನ್ನು ರೂಪಿಸಬೇಕು. ಇದು ಅಪೂರ್ಣವಾಗಿ ಉಳಿದಿರುವ ಕೆಲಸ. ಬೊಮ್ಮಾಯಿ ತೀರ್ಪನ್ನು ಜಾರಿಗೆ ತರುವಂತೆ ದೇಶದ ಎಲ್ಲಾ ಜಾತ್ಯಾತೀತ ಶಕ್ತಿಗಳು ಸಂಸತ್ತಿನ ಒಳಗೆ ಹಾಗೂ ಹೊರಗೆ ಜನತೆಯ ಆಂದೋಲನದ ಮೂಲಕ ಮಾಡಬೇಕಾಗಿದೆ.

● *ಎಐಡಿಎಂಕೆ, ಸಮತಾ ಪಾರ್ಟಿ ಮತ್ತು ತೃಣಮೂಲ ಕಾಂಗ್ರೆಸ್ಸಿನಂತಹ ಬಿಜೆಪಿಯ ಮಿತ್ರಪಕ್ಷಗಳು ಚುನಾಯಿತ ಸರಕಾರಗಳಿರುವ ಕೆಲವು ರಾಜ್ಯಗಳಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಬೇಕು ಎಂದು ಒತ್ತಾಯಿಸುತ್ತಿರುವುದು ಸಂವಿಧಾನಬಾಹಿರ ಎಂದು ನಿಮಗನಿಸುವುದಿಲ್ಲವೇ?*

**ಬುದ್ಧದೇವ ಭಟ್ಟಾಚಾರ್ಯ:** ಬಿಜೆಪಿಯ ಈ ಪ್ರಾದೇಶಿಕ ಮಿತ್ರಪಕ್ಷಗಳು ಸಮಯ ಸಾಧಕ ಪಕ್ಷಗಳು. ರಾಜಕೀಯ ನೈತಿಕತೆಗೆ ಕನಿಷ್ಟ ಗೌರವವನ್ನೂ ಕೊಡುವವರಲ್ಲ. ಅವರ ಪ್ರತಿಸ್ಪರ್ಧಿಗಳ ನೇತೃತ್ವದ ರಾಜ್ಯ ಸರಕಾರಗಳ ವಿರುದ್ಧ 356ನೇ ಕಲಮನ್ನು ಬಳಸಬೇಕು ಎಂಬ ಅವರ ಆಗ್ರಹಕ್ಕೆ ಯಾವುದೇ ಸಾಂವಿಧಾನಿಕ ಅಥವಾ ಕಾನೂನಾತ್ಮಕ ಆಧಾರ ಇಲ್ಲ. ಅವರ ಒತ್ತಾಯಗಳು ಅವರ ಪಕ್ಷಗಳ ಹಿತಾಸಕ್ತಿ ಸಾಧಿಸಲಿಕ್ಕಾಗಿ ಮಾತ್ರ. ಇದು ಸಂಕುಚಿತ ಪಕ್ಷದ ಹಿತಾಸಕ್ತಿಗಳಿಗಾಗಿ ಸಂವಿಧಾನದತ್ತ ಅಧಿಕಾರಗಳನ್ನು ದುರುಪಯೋಗ ಪಡಿಸಿಕೊಳ್ಳುವುದರ ಒಂದು ಸ್ಪಷ್ಟ ಪ್ರಯತ್ನ. ಬುದ್ಧಿಯಿರುವ ಯಾವುದೇ ಸರಕಾರ ಇಂತಹ ಸಂವಿಧಾನ ಬಾಹಿರ ಒತ್ತಾಯಗಳಿಗೆ ಒಪ್ಪಲು ಸಾಧ್ಯವಿಲ್ಲ.

● *ಪಶ್ಚಿಮ ಬಂಗಾಳಕ್ಕೆ ಕಳಿಸಿದ ವಸ್ತುಸ್ಥಿತಿ ಪರಿಶೀಲಿಸುವ ಕೇಂದ್ರೀಯ ತಂಡದ ಭೇಟಿಯ ಬಗ್ಗೆ ನಿಮ್ಮ ಅಭಿಪ್ರಾಯ?*

**ಬುದ್ಧದೇವ್ ಭಟ್ಟಾಚಾರ್ಯ:** ತಮಿಳುನಾಡು, ಬಿಹಾರ, ಪಶ್ಚಿಮ ಬಂಗಾಳಗಳಿಗೆ ಬಿಜೆಪಿಯೇತರ ಸರಕಾರಗಳಿರುವ ಈ ರಾಜ್ಯಗಳಿಗೆ ಕೇಂದ್ರೀಯ ತಂಡಗಳನ್ನು ಕಳಿಸಿರುವುದು ಕೂಡಾ ರಾಜಕೀಯ ದುರುದ್ದೇಶದಿಂದ ಪ್ರೇರಿತವಾದದ್ದು. ಕಾನೂನು ಮತ್ತು ವ್ಯವಸ್ಥೆ ರಾಜ್ಯ ಸರಕಾರದ ವ್ಯಾಪ್ತಿಗೆ ಒಳಪಟ್ಟದ್ದು. ಇದು ವಾಜಪೇಯಿ ಸರಕಾರ ಆರಂಭಿಸಿರುವ ಒಂದು ಅನ್ಯಾಯದ ಪಕ್ರಿಯೆಯ ಭಾಗ ಎಂದು ನನ್ನ ಅನುಭವದಿಂದ ಹೇಳಬಲ್ಲೆ. ಕೇಂದ್ರ ತಂಡಗಳ ವರದಿಗಳನ್ನು ಬಿಜೆಪಿಯೇತರ ರಾಜ್ಯ ಸರಕಾರಗಳನ್ನು ವಜಾ ಮಾಡಲು ಆಧಾರವಾಗಿ ಬಳಸಬಹುದು. ಅಲ್ಪಮತದ ವಾಜಪೇಯಿ ಸರಕಾರ ಭಾರೀ ಬಹುಮತದಿಂದ ಚುನಾಯಿತಗೊಂಡ ಸರಕಾರಗಳನ್ನು 356ನೇ ಕಲಮು ಬಳಸಿ ವಜಾ ಮಾಡುವ ಯೋಚನೆ ಮಾಡುತ್ತಿರುವುದು ದುರದೃಷ್ಟಕರ. ಇಲ್ಲಿಗೆ ಬಂದ ಮೂವರು ಸದಸ್ಯರ ಕೇಂದ್ರೀಯ ತಂಡಕ್ಕೆ ಉತ್ತರ ಪ್ರದೇಶದಲ್ಲಿನ ಕಾನೂನು-ವ್ಯವಸ್ಥೆಯ ಸನ್ನಿವೇಶದ ಅಧ್ಯಯನ ಮಾಡಿ ಅಯೋಧ್ಯೆಯಲ್ಲಿ ದೇವಸ್ಥಾನ ಕಟ್ಟುವ ಗುಟ್ಟಿನ ಚಟುವಟಿಕೆಗಳ ಬಗ್ಗೆ ವರದಿ ಮಾಡಿ ಎಂದು ನಾನು ಹೇಳಿದೆ.

● *ಈಗ ಯಾರಿಗಾದರೂ 356ನೇ ಕಲಮಿನ ಭಯವಿದೆಯೇ?*

**ಬುದ್ಧದೇವ್ ಭಟ್ಟಾಚಾರ್ಯ:** ಈ ಹಿಂದೆ ತುರ್ತು ಸನ್ನಿವೇಶ ಅಧಿಕಾರವನ್ನು ಬಹಳ ಸಲ ದುರುಪಯೋಗಪಡಿಸಿ ಕೊಂಡಿರುವುದರಿಂದ ಅದರ ವಿಶ್ವಾಸಾರ್ಹತೆ, ಪರಿಣಾಮಕಾರತೆಯನ್ನು ಕಳಕೊಂಡಿದೆ. ಎಡಪಕ್ಷಗಳಿಗೆ 356ನೇ ಕಲಮಿನ ಬಗ್ಗೆ ಭಯವಿಲ್ಲ. ಏಕೆಂದರೆ ಒಂದು ಸಂಘಟಿತ ರಾಜಕೀಯ ಆಂದೋಲನ ನಡೆಸಿ ಅದನ್ನು ಎದುರಿಸುವುದು ಹೇಗೆ ಎಂದು ಅವರಿಗೆ ಗೊತ್ತಿದೆ.

ದೇಶದೊಳಗೆ

# ಎಡರಂಗದ ನೈತಿಕ ಬಲ ಹೆಚ್ಚಿಸಿದ ಜಯ:

ಪಶ್ಚಿಮ ಬಂಗಾಳ ವಿಧಾನ ಸಭೆಯ ಮೂರು ಸ್ಥಾನಗಳಿಗೆ ಜೂನ್ 27 ರಂದು ನಡೆದ ಉಪಚುನಾವಣೆಯಲ್ಲಿ ಎರಡು ಕ್ಷೇತ್ರಗಳಲ್ಲಿ ಎಡರಂಗ ಜಯ ಭೇರಿ ಬಾರಿಸಿದೆ. ಇನ್ನೊಂದರಲ್ಲಿ ತೃಣಮೂಲ ಕಾಂಗ್ರೆಸ್ ಗೆದ್ದಿದೆ.

ಈಚೆಗಷ್ಟೇ ಮುಗಿದ ಪಂಚಾಯಿತಿ ಚುನಾವಣೆಗಳಲ್ಲಿ ಎಡರಂಗದ ಪ್ರಚಂಡ ವಿಜಯ ಸಾಧಿಸಿದ್ದ ಬೆನ್ನಲ್ಲೇ ಅಸೆಂಬ್ಲಿ ಉಪಚುನಾವಣೆಯಲ್ಲಿ ರಂಗ ಗೆದ್ದಿರುವುದು ರಾಜ್ಯದಲ್ಲಿ ಸಿಪಿಐ(ಎಂ) ನೇತೃತ್ವದ ಎಡರಂಗ ಜನತೆಯ ಮಧ್ಯೆ ಗಳಿಸಿರುವ ವಿಶ್ವಾಸವನ್ನು ಮತ್ತೊಮ್ಮೆ ಎತ್ತಿ ತೋರಿಸುತ್ತಿದೆ.

ಸಿಪಿಐ(ಎಂ) ಕಾರ್ಯಕರ್ತರು ತೃಣಮೂಲ ಕಾಂಗ್ರೆಸ್ ಮತ್ತು ಬಿಜೆಪಿ ಮೇಲೆ ದಬ್ಬಾಳಿಕೆ ನಡೆಸುತ್ತಿದ್ದಾರೆ, ಎಂದು ಈ ಎರಡೂ ಪಕ್ಷಗಳು ಬೊಬ್ಬೆಯಿಡುತ್ತಿದ್ದ ವೇಳೆಯಲ್ಲೇ ನಡೆದ ಚುನಾವಣೆಯ ಫಲಿತಾಂಶ ಇವುಗಳ ಕುಟಿಲ ರಾಜಕೀಯ ದುರುದ್ದೇಶದಿಂದ ಕೂಡಿದ್ದು ಎಂಬುದನ್ನು ಸಾಬೀತು ಪಡಿಸಿದೆ. ತೃಣಮೂಲ ಕಾಂಗ್ರೆಸ್ ನಿಂದಲೇ ಎರಡು ಅಸೆಂಬ್ಲಿ ಕ್ಷೇತ್ರಗಳನ್ನು ಎಡರಂಗ ಕಸಿದುಕೊಂಡಿರುವುದು ಇಲ್ಲಿ ಗಮನಾರ್ಹ, ಉಲ್ಲೇಖಾರ್ಹ.

ಚಂಡಿತಾಲಾ ಮತ್ತು ಬೋಬಜಾರ್ ಕ್ಷೇತ್ರಗಳು ಎಡರಂಗದ ಪಾಲಾದವು. ದಾಶ್ ಬಿಹಾರಿ ಕ್ಷೇತ್ರದಲ್ಲಿ ತೃಣಮೂಲ ಕಾಂಗ್ರೆಸ್ ಗೆದ್ದರೂ ಅದರ ಗೆಲುವಿನ ಅಂತರ ಕಳೆದ ಸಲದಕ್ಕಿಂತ ಗಮನಾರ್ಹವಾಗಿ ಕಡಿಮೆಯಾಗಿದೆ.

ಚಂಡಿತಾಲಾ ಕ್ಷೇತ್ರದಲ್ಲಿ ಕಳೆದ ವಿಧಾನ ಸಭೆ ಚುನಾವಣೆಯಲ್ಲಿ ಸಿಪಿಐ(ಎಂ) ಅಭ್ಯರ್ಥಿ ತೃಣಮೂಲ ಕಾಂಗ್ರೆಸ್ ಹುರಿಯಾಳಿನಿಂದ ಸೋತಿದ್ದರು. ಆದರೆ ಈ ಬಾರಿ ಸಿಪಿಐ(ಎಂ) ಅಭ್ಯರ್ಥಿ ಭಕ್ತರಾವಲ್ ಪನ್ ತೃಣಮೂಲ ಕಾಂಗ್ರೆಸ್‌ನ (ಟಿ.ಎಂ.ಸಿ) ಸಮೀಪ ಸ್ಪರ್ಧಿ ಅಮಿತ ಮಿತ್ರರನ್ನು 15,519 ಮತಗಳ ಅಂತರದಿಂದ ಸೋಲಿಸಿದರು.

ಬೋಬಜಾರ್ ಕ್ಷೇತ್ರದಲ್ಲಿ ನಡೆದ ರೊಮಾಂಚಕ ತ್ರಿಕೋನ ಸ್ಪರ್ಧೆಯಲ್ಲಿ ಸಿಪಿಐ(ಎಂ) ಬೆಂಬಲಿತ ಪಕ್ಷೇತರ ಅಭ್ಯರ್ಥಿ ಅಜಿತ್ ಪಾಂಡೆ ಟಿ.ಎಂ.ಸಿ. ಅಭ್ಯರ್ಥಿ ಯನ್ನು 1881 ಮತಗಳ ಅಂತರದಿಂದ ಸೋಲಿಸಿ ಜಯವನ್ನು ದಾಖಲಿಸಿದರು. ಈ ಕ್ಷೇತ್ರದಲ್ಲಿ ಸಿಪಿಐ(ಎಂ) ಕೊನೆಯ ಬಾರಿ ಜಯಗಳಿಸಿದ್ದು 1977 ರಲ್ಲಿ. ಸುಮಾರು ಎರಡು ದಶಕಗಳ ನಂತರ ಮತ್ತೆ ಈ ಸ್ಥಾನವನ್ನು ಎಡರಂಗ ಗೆದ್ದುಕೊಂಡಿದೆ.

ಲೋಕಸಭೆ ಚುನಾವಣೆಯ ನಂತರ ತಾನು ಕಳೆದುಕೊಂಡ ನೆಲೆಯನ್ನು ಮತ್ತೆ ಕಂಡುಕೊಳ್ಳಲು ಎಡರಂಗಕ್ಕೆ ಸಾಧ್ಯವಾಗಿರು ವುದು ಈ ಫಲಿತಾಂಶದಿಂದ ಸ್ಪಷ್ಟವಾಗಿದೆ.

ದಾಶ್ ಬಿಹಾರಿ ಕ್ಷೇತ್ರದಲ್ಲಿ ಸಿಪಿಐ(ಎಂ) ಬೆಂಬಲಿತ ಪಕ್ಷೇತರ ಅಭ್ಯರ್ಥಿ ಬಿಪ್ಲವ್ ಚಟರ್ಜಿ ಸೋತರೂ ಟಿ.ಎಂ.ಸಿ.ಗೆ ಉತ್ತಮ ಸ್ಪರ್ಧೆ ನೀಡಿದ್ದರು.

**ಹೋರಾಟದ ಅಂಗ:**

ಶಾಂತ ಮತದಾನ ಮಾಡಿದ ಹಾಗೂ ಎರಡು ಕ್ಷೇತ್ರಗಳಲ್ಲಿ ಎಡರಂಗದ ಜಯವನ್ನು ಖಾತರಿಪಡಿಸಿದ್ದಲ್ಲದೆ ಒಟ್ಟಾರೆಯಾಗಿ ಎಡರಂಗದ ಮತ ಗಳಿಕೆ ಪ್ರಮಾಣವನ್ನು ಏರಿಸುವಲ್ಲಿ ಪಾತ್ರ ವಹಿಸಿದ ಜನತೆಗೆ ಮುಖ್ಯಮಂತ್ರಿ ಜ್ಯೋತಿ ಬಸು ಮತ್ತು ಎಡರಂಗ ಸಂಚಾಲಕ ಶೈಲೇನ್ ದಾಸ್‌ಗುಪ್ತ ಅಭಿನಂದನೆ ಸಲ್ಲಿಸಿದ್ದಾರೆ. ಪ್ರತಿಯೊಂದು ಚುನಾವಣೆಯೂ ರಾಜಕೀಯ ಹೋರಾಟದ ಅಂಶವಾಗಿರುತ್ತದೆ. ಇದು ಕೂಡ ಅದಕ್ಕೆ ಹೊರತಲ್ಲ ಎಂದಿರುವ ಜ್ಯೋತಿ ಬಸು, ಈ ಉಪ ಚುನಾವಣೆಯ ಫಲಿತಾಂಶ ಎಡರಂಗದ ರಾಜಕೀಯ ಯಶಸ್ಸಿನ ದ್ಯೋತಕವಾಗಿದೆ ಎಂದು ವಿಶ್ಲೇಷಿದ್ದಾರೆ.

**ಪರ್ಯಾಯವಿಲ್ಲ**

ಲೋಕಸಭೆ ಚುನಾವಣೆಯ ಕೇವಲ ಸುಮಾರು ನೂರು ದಿನಗಳಲ್ಲಿ ನಡೆದ ಉಪಚುನಾವಣೆಯ ಫಲಿತಾಂಶ ರಾಜ್ಯದಲ್ಲಿ ಜನತೆಗೆ ಎಡರಂಗಕ್ಕೆ ಪರ್ಯಾಯವಾದುದು ಬೇರೊಂದಿಲ್ಲ ಎಂಬುದನ್ನು ಮನದಟ್ಟು ಮಾಡಿಕೊಟ್ಟಿದೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯ ಅನಿಲ್ ಬಿಸ್ವಾಸ್ ಹೇಳಿದ್ದಾರೆ.

ವಿಶ್ವ

## ಪ.ಬಂಗಾಳಕ್ಕೆ ಕೇಂದ್ರ ತಂಡ: ಲೋಕಸಭೆಯಲ್ಲಿ ಪ್ರತಿಭಟನೆ

ಪಶ್ಚಿಮ ಬಂಗಾಳದ ಕಾನೂನು ಮತ್ತು ಸುವ್ಯವಸ್ಥೆಯ ಪರಿಶೀಲನೆಗೆ ವಾಜಪೇಯಿ ಸರ್ಕಾರವು ಅಧಿಕಾರಿಗಳ ತಂಡ ಕಳುಹಿಸಿದ ಕ್ರಮ ಸಣವಿಧಾನಬಾಹಿರ ಹಾಗೂ ಅನಗತ್ಯ ಎಂದು ಬಸುದೇವ್ ಆಚಾರ್ಯ ಅವರು ಟೀಕಿಸಿದ್ದರಿಂದ ಮಂಗಳವಾರ ಸಿಪಿಐ(ಎಂ) ಮತ್ತು ತೃಣಮೂಲ ಕಾಂಗ್ರೆಸ್ ಸದಸ್ಯರ ನಡುವೆ ಲೋಕಸಭೆಯಲ್ಲಿ ಮಾತಿನ ಚಕಮಕಿ ನಡೆಯಿತು.

ಶೂನ್ಯ ವೇಳೆಯಲ್ಲಿ ಆಚಾರ್ಯ ಅವರು ಆರೋಪ ಮಾಡಿದಾಗ ತೃಣಮೂಲ ಕಾಂಗ್ರೆಸ್ ನಾಯಕಿ ಮಮತಾ ಬ್ಯಾನರ್ಜಿ ಮತ್ತು ಅವರ ಪಕ್ಷದ ಸದಸ್ಯರು ಎದ್ದು ನಿಂತು ಪ್ರತಿಭಟಿಸಿದರಲ್ಲದೆ, ಕೇಂದ್ರವು ಪರಿಶೀಲನಾ ತಂಡ ಕಳುಹಿಸಿದ ಕ್ರಮ ಸರಿ ಎಂದು ವಾದಿಸಿದರು. ಈ ಸಂದರ್ಭದಲ್ಲಿ ಬ್ಯಾನರ್ಜಿ ಹಾಗೂ ಆಚಾರ್ಯ ಮತ್ತು ಎಡಪಕ್ಷಗಳ ಇತರ ಸದಸ್ಯರು ನಡುವೆ ಮಾತಿನ ಚಕಮಕಿ ನಡೆಯಿತು.

ಬ್ಯಾನರ್ಜಿ ಅವರು ಒಂದು ಪಕ್ಷದ ನಾಯಕಿ ಆಗಿರುವುದರಿಂದ ಆಚಾರ್ಯ ಅವರ ಆರೋಪಕ್ಕೆ ಪ್ರತಿಕ್ರಿಯೆ ವ್ಯಕ್ತಪಡಿಸಲು ಅವರಿಗೆ ಅವಕಾಶ ನೀಡಬೇಕು ಎಂದು ಸಂಸದೀಯ ವ್ಯವಹಾರ ಸಚಿವ ರಾಂ ನಾಯಕ್ ಸಭಾಧ್ಯಕ್ಷರಿಗೆ ಮನವಿ ಮಾಡಿದರು.

ಶೂನ್ಯ ವೇಳೆಯಲ್ಲಿ ವಿಷಯಗಳನ್ನು ಪ್ರಸ್ತಾಪಿಸಲು 46 ಸದಸ್ಯರು ಸೂಚನೆ ಸಲ್ಲಿಸಿರುವ ಕಾರಣ ಬ್ಯಾನರ್ಜಿ ಅವರಿಗೆ ಮಾತನಾಡಲು ಅವಕಾಶ ನೀಡಲು ಸಾಧ್ಯವಿಲ್ಲ ಎಂದು ಸಭಾಪತಿ ಸ್ಥಾನದಲ್ಲಿದ್ದ ಪಿ.ಎಂ. ಸಯೀದ್ ಹೇಳಿದರು.

ಕಾನೂನು ಪಾಲನೆ ಕುಸಿದಿರುವ ಬಿಜೆಪಿ ಆಡಳಿತ ಇರುವ ಉತ್ತರ ಪ್ರದೇಶ ಮತ್ತು ರಾಜಸ್ತಾನಕ್ಕೆ ಇಂತಹ ತಂಡವನ್ನು ಕೇಂದ್ರ ಏಕೆ ಕಳುಹಿಸಿಲ್ಲ ಎಂದು ರಾಷ್ಟ್ರೀಯ ಜನತಾ ದಳದ ನಾಯಕ ಲಾಲೂ ಪ್ರಸಾದ್ ಯಾದವ್ ಪ್ರಶ್ನಿಸಿದರು.

## ಹೆಚ್ಚಿದ ಹಿಂಸಾಚಾರ : ಹಲವರ ಹತ್ಯೆ

ಕಾಂಗ್ರೆಸ್(ಐ) ಟಿ.ಎನ್.ವಿ. ಮತ್ತು ಟಿ.ಯು.ಜೆ.ಎಸ್. ಮೊದಲಾದ ತನ್ನ ಮಿತ್ರರ ನೈತಿಕ ಬೆಂಬಲದೊಂದಿಗೆ ತ್ರಿಪುರಾ ರಾಷ್ಟ್ರೀಯ ವಿಮೋಚನಾ ರಂಗ (ಎನ್.ಎಲ್.ಎಫ್.ಟಿ) ಹಿಂಸಾತ್ಮಕ ಚಟುವಟಿಕೆಗಳನ್ನು ಹೆಚ್ಚಿಸಿದೆ. ಬೆಲೋನಿಯಾ ಉಪವಿಭಾಗ ಮತ್ತು ಖೋವಾಯ್ ಉಪ ವಿಭಾಗಗಳಲ್ಲಿ ಉಗ್ರಗಾಮಿಗಳು ಇಬ್ಬರು ಸೈನಿಕರ ಸಹಿತ ಏಳು ಜನರನ್ನು ಕೊಂದಿದ್ದು ಹತ್ತು ಜನರನ್ನು ಗಾಯಗೊಳಿಸಿದ್ದಾರೆ. ಆರೇಳು ಮನೆಗಳನ್ನು ಲೂಟಿಮಾಡಿ ಒಂದು ಮನೆಯನ್ನು ಸುಟ್ಟುಹಾಕಿದ್ದಾರೆ.

ಜೂನ್ 28ರ ರಾತ್ರಿ ಎನ್.ಎಲ್.ಎಫ್.ಟಿ. ಉಗ್ರಗಾಮಿಗಳು ಜೀರ ಚಂದ್ರಮಾನುನಲ್ಲಿರುವ ಬುಡಕಟ್ಟೇತರ ಜನರ ತಾಂಡದ ಮೇಲೆ ಹಠಾತ್ತಾಗಿ ದಾಳಿ ಮಾಡಿದರು. ಇದ್ದಕ್ಕಿದ್ದಂತೆ ಉಗ್ರಗಾಮಿಗಳು ಎರಗಿದ್ದರಿಂದ ಮೊದಲಿಗೆ ಗಾಬರಿಗೊಂಡ ಜನರು ಕ್ರಮೇಣ ಆಘಾತದಿಂದ ಸುಧಾರಿಸಿಕೊಂಡು ದಾಳಿಕೋರರಿಗೆ ಪ್ರತಿರೋಧ ಒಡ್ಡಿದರು. ಇದರಿಂದಾಗಿ ಭಾರೀ ರಕ್ತಪಾತ ನಡೆಯುವುದು ತಪ್ಪಿತು. ಆದರೆ ದುಷ್ಕರ್ಮಿಗಳು ಕಾಲಿಗೆ ಬುದ್ಧಿಹೇಳುವ ಮುನ್ನ ಆರೇಳು ಮನೆಗಳನ್ನು ಲೂಟಿ ಮಾಡಿ ಒಂದು ಮನೆಗೆ ಕೊಳ್ಳಿಯಿಟ್ಟರು.

ಅದೇ ದಿನ ಉಗ್ರಗಾಮಿಗಳು ತ್ರಿಪುರಾ ರಾಜ್ಯ ರೈಫಲ್ಸ್‌ಗೆ (ಟಿ.ಎಸ್.ಆರ್) ಸೇರಿದ ಸೈನಿಕರು ಪ್ರಯಾಣಿಸುತ್ತಿದ್ದ ವಾಹನ ಮತ್ತು ಕೆಲವು ನಾಗರಿಕರು ಪ್ರಯಾಣಿಸುತ್ತಿದ್ದ ವಾಹನದ ಮೇಲೆ ಗುಂಡಿನ ಸುರಿಮಳೆಗರೆದಿದ್ದರಿಂದ ಇಬ್ಬರು ಟಿ.ಎಸ್.ಆರ್ ಜವಾನರು ಮತ್ತು ಇಬ್ಬರು ನಾಗರಿಕರು ಮೃತಪಟ್ಟರು.

ಈ ಕೃತ್ಯಗಳನ್ನೇ ನೆಪವಾಗಿಟ್ಟುಕೊಂಡು ಕೆಲವು ಕೋಮುವಾದಿ ದುಷ್ಕರ್ಮಿಗಳು ಈ ಘಟನೆಗಳು ನಡೆದ ಸ್ಥಳದ ಸಮೀಪದ ಶಾಂತಿ ಬಜಾರ್ ಎಂಬಲ್ಲಿಗೆ ಬಂದ ಮೂರು ಮುಗ್ಧ ಬುಡಕಟ್ಟು ಯುವಕರಿಗೆ ಅಮಾನುಷ ಚಿತ್ರಹಿಂಸೆ ನೀಡಿದರು.

ಆದರೆ ಅಲ್ಲಿದ್ದ ಜನರು ತೋರಿದ ಸಮಯ ಪ್ರಜ್ಞೆಯಿಂದಾಗಿ ದೊಡ್ಡ ಅನಾಹುತ ನಡೆಯುವುದು ತಪ್ಪಿತು. ಸಾರ್ವಜನಿಕರು ಗಲಭೆಕೋರರ ಮೇಲೆ ಮುಗಿಬಿದ್ದು ಬುಡಕಟ್ಟು ಯುವಕರನ್ನು ಬಚಾವು ಮಾಡಿ ಆಸ್ಪತ್ರೆಗೆ ಸೇರಿಸಿದರು.

## ತ್ರಿಪುರಾ ಜನತೆಗೆ ಬಿಜೆಪಿ ಕೇಂದ್ರ ಸರ್ಕಾರದ ದ್ರೋಹ

ಉಗ್ರಗಾಮಿ ಪಿಡುಗಿನ ವಿರುದ್ಧ ಇನ್ನಷ್ಟು ತೀಕ್ಷ್ಣ ಕಾರ್ಯಾಚರಣೆ ನಡೆಸಲು ಹೆಚ್ಚುವರಿ ಪಡೆಗಳ ತುರ್ತು ಅಗತ್ಯವಿರುವ ಸಂದರ್ಭದಲ್ಲೇ ರಾಜ್ಯದಲ್ಲಿನ ಪಡೆಗಳನ್ನು ವಾಪಸು ಕರೆಸಿಕೊಂಡಿರುವ ಬಿಜೆಪಿ ನೇತೃತ್ವದ ಕೇಂದ್ರ ಸರಕಾರದ ಕ್ರಮವನ್ನು ಸಿಪಿಐ(ಎಂ) ತ್ರಿಪುರಾ ರಾಜ್ಯ ಸಮಿತಿ ಕಟುವಾಗಿ ಟೀಕಿಸಿದೆ.

ಈ ಕ್ರಮ ರಾಜ್ಯವನ್ನು ಅಸ್ಥಿರಗೊಳಿಸುವ ಪಿತೂರಿಯಲ್ಲದೆ ಬೇರೇನೂ ಅಲ್ಲ ಎಂದಿರುವ ಸಮಿತಿ ಇದರಿಂದ ಸಾಮ್ರಾಜ್ಯ ಶಾಹಿ ಶಕ್ತಿಗಳ ಬೆಂಬಲವಿರುವ ಪ್ರತ್ಯೇಕತಾ ವಾದಿ ಶಕ್ತಿಗಳಿಗೆ ತಮ್ಮ ಹೀನ ಕೃತ್ಯಗಳನ್ನು ನಡೆಸಲು ಕುಮ್ಮಕ್ಕು ಸಿಕ್ಕಂತಾಗುತ್ತದೆ ಅಷ್ಟೆ ಎಂದಿದೆ.

ಜೂನ್ ಕೊನೆ ಭಾಗದಲ್ಲಿ ನಡೆದ ರಾಜ್ಯ ಸಮಿತಿ ಸಭೆ ರಾಜ್ಯದಲ್ಲಿನ ಪರಿಸ್ಥಿತಿಯ ಪರಾಮರ್ಶೆ ನಡೆಸಿತು.

ರಾಜ್ಯದಲ್ಲಿ ಎಡರಂಗ ಸರಕಾರ ಅಧಿಕಾರಕ್ಕೆ ಬಂದ ಕೇವಲ 20 ದಿನಗಳಲ್ಲಿ ಸಚಿವ ಬಿಮಲ್ ಸಿನ್ಹಾರನ್ನು ಹೇಯವಾಗಿ ಕೊಲೆ ಮಾಡುವುದರ ಮೂಲಕ ಆಂತರಿಕ ಹಾಗೂ ಅಂತಾರಾಷ್ಟ್ರೀಯ ಸ್ಥಾಪಿತ ಹಿತಾಸಕ್ತರು ಎಡರಂಗ ಸರಕಾರದ ವಿರುದ್ಧ ಹೂಡಿರುವ ಪಿತೂರಿ ಎಷ್ಟು ಆಳವಾಗಿದೆ ಎನ್ನುವುದು ಬಯಲಿಗೆ ಬಂದಿದೆ. ಎಂದು ಪಕ್ಷ ಹೇಳಿದೆ.

ರಾಜ್ಯ ಸಮಿತಿ ಸಭೆ ಏಪ್ರಿಲ್‌ನಲ್ಲಿ ತೆಗೆದುಕೊಂಡ ನಿರ್ಧಾರಕ್ಕೆ ಅನುಸಾರವಾಗಿ ಉಗ್ರಗಾಮಿಗಳ ವಿರುದ್ಧ ಹಲವು ರೀತಿಯ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಉಗ್ರಗಾಮಿಗಳನ್ನು ರಾಜಕೀಯವಾಗಿ ಪ್ರತ್ಯೇಕಗೊಳಿಸುವ ದೃಷ್ಟಿಯಿಂದ ಎಡರಂಗ ಮತ್ತು ಪ್ರಜಾಸತ್ತಾತ್ಮಕ ಸಂಘಟನೆಗಳು ರಾಜ್ಯದಾದ್ಯಂತ ಸಮಗ್ರ ಪ್ರಚಾರ ಕಾರ್ಯಕ್ರಮವನ್ನು ನಡೆಸಿದವು. ರಾಜ್ಯ ಸರಕಾರ ಸರ್ವಪಕ್ಷ ಸಭೆಯೊಂದನ್ನು ನಡೆಸಿತು. ಆ ಸಭೆ ಹಲವು ಸಕಾರಾತ್ಮಕ ರಾಜಕೀಯ ಆರ್ಥಿಕ ಹಾಗೂ ಆಡಳಿತಾತ್ಮಕ ಸಲಹೆಗಳನ್ನು ಮುಂದಿಟ್ಟಿತು.

ಅದೇ ವೇಳೆಗೆ ದೈಹಿಕವಾಗಿ ಉಗ್ರಗಾಮಿಗಳನ್ನು ಹಿಮ್ಮೆಟ್ಟಿಸಲು ರಾಜ್ಯ ಸಮನ್ವಯ ಸಮಿತಿಯೊಂದು, ತ್ರಿಪುರಾದಲ್ಲಿ ಕೇಂದ್ರ ಪಡೆಗಳ ಇನ್ನೂ ಐದು ಬೆಟಾಲಿಯನ್‌ಗಳನ್ನು ನಿಯೋಜಿಸಬೇಕೆಂಬ ಪ್ರಸ್ತಾಪವನ್ನು ಮುಂದಿಟ್ಟಿತು. ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ಪ್ರಧಾನಿ, ಕೇಂದ್ರ ಗೃಹಮಂತ್ರಿ ಮತ್ತು ರಕ್ಷಣಾ ಸಚಿವರನ್ನು ಎರಡೆರಡು ಬಾರಿ ಭೇಟಿ ಮಾಡಿ ಹೆಚ್ಚಿನ ಅರೆಸೇನಾ ಪಡೆಗಳ ನಿಯೋಜನೆಯ ಅಗತ್ಯವನ್ನು ವಿವರಿಸಿದ್ದರು. ಸಮಾಲೋಚನೆಯ ವೇಳೆ ಇವರ್‍ಯಾರೂ ರಾಜ್ಯ ಸರಕಾರದ ನಿಲುವಿಗೆ ಅಸಮ್ಮತಿ ಸೂಚಿಸಿರಲಿಲ್ಲ. ಪಡೆಗಳನ್ನು ಆದಷ್ಟು ಬೇಗ ಕಳಿಸಿಕೊಡುವುದಾಗಿ ಭರವಸೆ ಕೊಟ್ಟಿದ್ದರು ಕೂಡ.

ಆದರೆ ಆಶ್ಚರ್ಯ ಹಾಗೂ ಆಘಾತಕರ ಸಂಗತಿಯೆಂದರೆ, ಕೇಂದ್ರ ಸರಕಾರ ಹೆಚ್ಚುವರಿ ಪಡೆಗಳನ್ನು ಕಳಿಸುವ ಬದಲು ರಾಜ್ಯದಲ್ಲಿದ್ದ ಪಡೆಗಳ ಪೈಕಿ ಎರಡು ಬೆಟಾಲಿಯನ್‌ಗಳನ್ನು ಈಗಾಗಲೇ ವಾಪಸ್ ಪಡೆದುಕೊಂಡಿದೆ. ಒಂದು ಬೆಟಾಲಿಯನ್‌ನಂತೂ ರಾಜ್ಯ ಸರಕಾರಕ್ಕೆ ಮಾಹಿತಿ ನೀಡದೆಯೇ ವಾಪಸ್ ಕರೆಸಿಕೊಳ್ಳ ಲಾಗಿದೆ. ಕೇಂದ್ರ ಸರಕಾರದ ಈ ಕ್ರಮ ದಿಂದಾಗಿ ರಾಜ್ಯದಲ್ಲಿನ ಭದ್ರತಾ ಪರಿಸ್ಥಿತಿ ದುರ್ಬಲಗೊಂಡಿದೆ.

ಈ ಸನ್ನಿವೇಶದ ಲಾಭ ಪಡೆದು ಉಗ್ರಗಾಮಿಗಳು ಹಿಂಸಾಚಾರ ಮತ್ತು ಅಪಹರಣದಂಥ ಚಟುವಟಿಕೆಗಳನ್ನು ತೀವ್ರಗೊಳಿಸಿದ್ದಾರೆ. ಬುಡಕಟ್ಟು ಮತ್ತು ಬುಡಕಟ್ಟೇತರ ಜನರ ಮಧ್ಯೆ ಜನಾಂಗೀಯ ವಿದ್ವೇಷವನ್ನು ಹರಡುವುದು ಅವರ ಉದ್ದೇಶವಾಗಿದೆ. ರಾಜ್ಯದ ಅಗತ್ಯಕ್ಕೆ ಅನುಗುಣವಾಗಿ ತ್ರಿಪುರಕ್ಕೆ ಹೆಚ್ಚುವರಿ ಪಡೆಗಳನ್ನು ಕಳಿಸುವ ಕೇಂದ್ರ ಸರಕಾರದ ಮೇಲೆ ಒತ್ತಡ ಹೇರುವಂತೆ ರಾಷ್ಟ್ರದ ದೇಶ ಪ್ರೇಮಿ ಜನತೆಗೆ ಸಿಪಿಐ(ಎಂ) ರಾಜ್ಯ ಸಮಿತಿ ಮನವಿಮಾಡಿದೆ.

## ಅಸ್ಸಾಂ ಉಗ್ರರಿಂದ ಸಿಪಿಐ(ಎಂ) ಮುಖಂಡನ ಹತ್ಯೆ

ಅಸ್ಸಾಂನ ಬೊಂಗೈಗಾಂವ್ ಜಿಲ್ಲೆಯ ಬಹಿರಾ ಬೆನಮರಿ (ರೋಸಿಮರಿ) ಗ್ರಾಮದಲ್ಲಿ ಜೂನ್ 20 ರ ರಾತ್ರಿ ಉಲ್ಫಾ ಉಗ್ರಗಾಮಿಗಳು ಸಿಪಿಐ(ಎಂ) ಬೊಂಗೈಗಾಂವ್ ಸ್ಥಳೀಯ ಸಮಿತಿಯ ಕಾರ್ಯದರ್ಶಿ ಹಾಗೂ ಜಿಲ್ಲೆಯ ರೈತ ನಾಯಕ ಕಾ|| ಕಿಶೋರಿ ಮೋಹನ ರಾಯ್(47) ಅವರನ್ನು ಅಪಹರಿಸಿ ಕೊಲೆ ಮಾಡಿದ್ದಾರೆ. ಕಾ|| ರಾಯ್ ಅವರ ಶವ 27ರಂದು ಸಿಕ್ಕಿತು.

ಕಾ|| ರಾಯ್ ಪಕ್ಷದ ಸ್ಥಳೀಯ ಕಾರ್ಯದರ್ಶಿ ಕಾ|| ಪುಲಿನ್ ರಾಯ್ ಅವರ ಜತೆ ರೋಸಿಮರಿ ಗ್ರಾಮಕ್ಕೆ ತೆರಳುತ್ತಿದ್ದರು. ಪಕ್ಷದ ಶಾಖೆಯ ಸಭೆಯಲ್ಲಿ ಪಾಲ್ಗೊಳ್ಳಲು ಅವರಿಬ್ಬರೂ ಹೋಗುತ್ತಿದ್ದರು. ಗ್ರಾಮಕ್ಕೆ ಬಂದ ಉಲ್ಫಾ ಉಗ್ರಗಾಮಿಗಳು ಒಂದು ಗುಂಪು ರಾಯ್ ಅವರನ್ನು ಅಪಹರಿಸಿಕೊಂಡು ಹೋಯಿತು.

ಕಾಮ್ರೇಡ್ ಕಿಶೋರಿ ಮೋಹನರಾಯ್ ಒಬ್ಬ ದಿಟ್ಟ ಹೋರಾಟಗಾರರಾಗಿದ್ದರು. ಕಳೆದ ಲೋಕಸಭೆ ಚುನಾವಣೆಯ ನಂತರ ಉಲ್ಫಾ ಉಗ್ರರು ಕಾ|| ರಾಯ್ ಅವರ ಮೇಲೆ ದೃಷ್ಟಿ ಹಾಕಿದ್ದರು. ಉಲ್ಫಾದ ಚುನಾವಣೆ ಬಹಿಷ್ಕಾರ ಕರೆ ವಿಫಲವಾಗುವಂತೆ ಮಾಡಿದ್ದ ರಾಯ್ ಅನೇಕ ಚುನಾವಣೆ ಸಭೆಗಳನ್ನು ಸಂಘಟಿಸಿದ್ದರು. ಇದು ಉಗ್ರಗಾಮಿಗಳ ಕೋಪಕ್ಕೆ ಕಾರಣವಾಗಿತ್ತು.

## ಸಂಘ ಪರಿವಾರದಿಂದ ಕೇರಳದಲಿ ಡಿ.ವೈ.ಎಫ್.ಐ ಕಾರ್ಯಕರ್ತನ ಹತ್ಯೆ

ಬಿಜೆಪಿ-ಆರೆಸ್ಸೆಸ್ ಗೂಂಡಾಗಳಿಂದ ಜೂನ್ 27 ರಂದು ಹಲ್ಲೆಗೊಳಗಾಗಿದ್ದ ಡಿವೈಎಫ್ಐ ಮುಟ್ಟತರ ಘಟಕದ ಜಂಟಿ ಕಾರ್ಯದರ್ಶಿ ಅನಿಲ್ ಕುಮಾರ್ (35 ವರ್ಷ) ಜುಲೈ 20 ರಂದು ನಿಧನರಾದರು.

ಕಾ|| ಕುಮಾರ್ ಖಾಸಗಿ ಬಸ್ಸೊಂದರಲ್ಲಿ ಪ್ರಯಾಣಿಸುತ್ತಿದ್ದಾಗ ಬಸ್ಸನ್ನು ನಿಲ್ಲಿಸಿ ಅವರನ್ನು ಹೊರಗೆಳೆದ ಗೂಂಡಾಗಳು ಖಡ್ಗ ಮತ್ತಿತರ ಆಯುಧಗಳಿಂದ ದಾಳಿ ಮಾಡಿದರು. ಅನಿಲ್ ಕುಮಾರರನ್ನು ಬಸ್ಸಿನಿಂದ ಹೊರಗೆಳೆಯುವುದನ್ನು ತಡೆಯಲು ಯತ್ನಿಸಿದ ಸಹ ಪ್ರಯಾಣಿಕರ ಮೇಲೂ ದುಷ್ಕರ್ಮಿಗಳು ಹಲ್ಲೆ ಮಾಡಿದರು.

ಗಂಭೀರವಾಗಿ ಗಾಯಗೊಂಡ ಕುಮಾರರನ್ನು ತಿರುವನಂತಪುರದ ಮೆಡಿಕಲ್ ಕಾಲೇಜ್ ಆಸ್ಪತ್ರೆಗೆ ಸೇರಿಸಲಾಗಿತ್ತು. ಆದರೆ ತೀವ್ರ ನಿಗಾ ಹಾಗೂ ಉತ್ತಮ ಚಿಕಿತ್ಸೆಯ ಹೊರತಾಗಿಯೂ ಅವರ ಪ್ರಾಣವನ್ನು ಉಳಿಸಿಕೊಳ್ಳಲಾಗಲಿಲ್ಲ. ರಾಜ್ಯ ರಾಜಧಾನಿಯಿಂದ 15 ಕಿ.ಮೀ ದೂರದಲ್ಲಿರುವ ಮುಟ್ಟತರದಲ್ಲಿ ಕಾ|| ಕುಮಾರರ ಹತ್ಯೆಯನ್ನು ಪ್ರತಿಭಟಿಸಿ ಜುಲೈ 20 ರಂದು ಹರತಾಳ ಆಚರಿಸಲಾಯಿತು.

## ಅನ್ನ 'ತ್ಯಾಗ'ದ ಪ್ರಹಸನ!

ಕಳೆದ ನಾಲ್ಕುವರೆ ವರ್ಷಗಳಿಂದ ಭಾರತೀಯ ಜನತಾ ಪಕ್ಷ ಅಧಿಕಾರದಲ್ಲಿರುವ ದೆಹಲಿಯ ಜನರು ಸರಕಾರ ಎಷ್ಟೇ ಪ್ರಯತ್ನ ಪಟ್ಟರೂ ಸಾಕಷ್ಟು ಕಷ್ಟ ನಷ್ಟಗಳನ್ನು ಅನುಭವಿಸಿದ್ದಾರೆ.

ಈ ಮಾತನ್ನು ಸ್ವತಃ ಬಿಜೆಪಿಯ ನಾಯಕ ಹಾಗೂ ದೆಹಲಿ ಹೊರವಲಯದ ಲೋಕಸಭೆ ಕ್ಷೇತ್ರದ ಸದಸ್ಯ ಕೆ. ಎಲ್. ಶರ್ಮಾ ಹೇಳಿದ್ದಾರೆ.

ಈ ತಪ್ಪಿಗೆ ಸರಕಾರವೇನೂ ಶಿಕ್ಷೆಗೆ ಒಳಗಾಗದು ಬಿಡಿ. ಜನತೆಗೆ ವಿಷಾದವನ್ನಷ್ಟೇ ಅವರು ಸೂಚಿಸಿದ್ದಾರೆ. ಅದಕ್ಕೆ ಸಂಕೇತವಾಗಿ ತಾವು ಸೋಮವಾರದಿಂದ ಅನ್ನ ತ್ಯಾಗ ಮಾಡುವುದಾಗಿ ಶರ್ಮಾ ಘೋಷಿಸಿದ್ದಾರೆ. ಕಾರ್ಯವೈಖರಿಯನ್ನು ಉತ್ತಮ ಪಡಿಸಿಕೊಳ್ಳುವಂತೆ ದೆಹಲಿ ಸರಕಾರದ ನಾನಾ ಇಲಾಖೆಗಳ ಮೇಲೆ ನೈತಿಕ ಒತ್ತಡ ಹೇರುವುದು ತಮ್ಮ ಈ ಕ್ರಮದ ಉದ್ದೇಶ ಎಂದು ಹೇಳಿಕೊಂಡಿದ್ದಾರೆ.

ಆದರೆ ಒತ್ತಡ ಹೇರಬೇಕಿರುವುದು ಆಡಳಿತ ಪಕ್ಷದ ಮೇಲೋ, ಇಲಾಖೆಗಳ ಮೇಲೋ? ಆಳುವ ಪಕ್ಷ ಸರಿಯಿದ್ದರೆ ಇಲಾಖೆಗಳು ಅದನ್ನು ಉಲ್ಲಂಘಿಸು ತ್ತವೆಯೇ? ಆದ್ದರಿಂದ ಈ ಅನ್ನತ್ಯಾಗದ ಬಿಜೆಪಿ ನಾಯಕನ ನಿರ್ಧಾರ ಒಂದು ಪ್ರಹಸನ ವಾಗಿಯಷ್ಟೆ ನಮಗೆ ಕಾಣುತ್ತದೆ. ಆದರೆ ಏನೇ ಇರಲಿ, ರಾಷ್ಟ್ರದ ರಾಜಧಾನಿ ಯ ಜನತೆ ಒಂದು ಅದಕ್ಷ ಪಕ್ಷದ ದುರಾಡಳಿತದಲ್ಲಿ ನಲುಗುತ್ತಿದೆ ಎಂಬುದು ಸ್ವತಃ ಆಡಳಿತ ಪಕ್ಷದ ನೇತಾರನಿಂದಲೇ ತಿಳಿದಂತಾಯಿತು.

## ಸ್ತ್ರೀಯರ ಅವಹೇಳನ: ಶೌರಿಯ ಕ್ಷಮೆಯಾಚನೆಗೆ ಒತ್ತಾಯ

ಬಿ.ಜೆ.ಪಿ.ಯ ರಾಜ್ಯ ಸಭಾ ಸದಸ್ಯ ಅರುಣ್ ಶೌರಿ ಪ್ರತಿಕೆಯೊಂದರಲ್ಲಿ ಸ್ತ್ರೀಯರನ್ನು ಕುರಿತು ಅಸಭ್ಯ ಭಾಷೆ ಬಳಸಿರು ವುದಕ್ಕೆ ಹಲವಾರು ಮಹಿಳಾ ಸಂಘಟನೆಗಳು ಸಿಟ್ಟಾಗಿ, ಶೌರಿಯವರಾಗಲಿ, ಇಲ್ಲವೇ ಅವರ ಪಕ್ಷವಾಗಲಿ ಸಾರ್ವಜನಿಕ ಕ್ಷಮಾಪಣೆ ಕೇಳಬೇಕೆಂದು ಒತ್ತಾಯಿಸಿವೆ.

'ಆರ್.ಎಸ್.ಎಸ್. ಪತ್ರಿಕೆ ನನ್ನ ಸಂದರ್ಶನ ಪ್ರಕಟಿಸಿದಾಕ್ಷಣ ನಾನು ಕೋಮುವಾದಿ ಎನ್ನಲು ಇನ್ನಷ್ಟು ದೃಢ ಪುರಾವೆ ಸಿಕ್ಕಂತಾಗುವುದು. ಆದರೆ ಈ ಪ್ರಗತಿಪರರ ಕನ್ಯಾಪೊರೆ ಎಷ್ಟೊಂದು ಗಟ್ಟಿ ಎಂದರೆ ಕಮ್ಯುನಿಸ್ಟ್ ಪಕ್ಷದ ಪ್ರಕಟಣೆಗಳಿಗೆ ಸ್ವಂತ ಹೆಸರಿನಿಂದ ಲೇಖನಗಳನ್ನು ಬರೆದರೂ ಅವರ ಕನ್ಯತ್ವಕ್ಕೆ ಯಾವ ಬಾಧೆಯೂ ಬರುವುದಿಲ್ಲ' ಎಂದು ಕಳೆದ ಮೂರರಂದು ಭಾರತೀಯ ಐತಿಹಾಸಿಕ ಸಂಶೋಧನಾ ಮಂಡಳಿಯ ಬಗ್ಗೆ ಬರೆದ ಲೇಖನದಲ್ಲಿ ಅರುಣ್ ಶೌರಿ ಅಭಿಪ್ರಾಯ ಪಟ್ಟಿದ್ದಾರೆ.

ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘ, ಭಾರತೀಯ ಮಹಿಳೆಯರ ರಾಷ್ಟ್ರೀಯ ಒಕ್ಕೂಟ, ಸಂಯುಕ್ತ ಮಹಿಳಾ ಸಂಘಟನೆ, ಅಖಿಲ ಭಾರತ ಮುಸ್ಲಿಂ ಮಹಿಳಾ ಸಂಘ, ಜಾಗೋರಿ, ಅಂಕುರ್ ಮತ್ತಿತರ ಸಂಘಟನೆಗಳು ಜಂಟಿ ಹೇಳಿಕೆಯೊಂದನ್ನು ನೀಡಿ, ಅರುಣ್ ಶೌರಿಯವರ ಈ ಹೋಲಿಕೆ ಸಂಪೂರ್ಣ ಅನಗತ್ಯವಾದದ್ದು, ಅವರು ತಮ್ಮ ಲೇಖನದಲ್ಲಿ ಚರ್ಚಿಸಿದ ವಿಷಯಕ್ಕೂ ಮಹಿಳೆಯ ದೇಹಕ್ಕೂ ಏನೇನೂ ಸಂಬಂಧ ವಿಲ್ಲ. ಅದು ಯಾವೊಬ್ಬ ಸಭ್ಯ ನಾಗರಿಕನ ಬರವಣಿಗೆಗಿಂತ ಅಸಹ್ಯವಾಗಿದೆ ಎಂದು ಟೀಕಿಸಿವೆ.

ಮಾಧ್ಯಮಗಳಲ್ಲಿ ಲೈಂಗಿಕ ದೃಷ್ಟಿಯಸ ಹೋಲಿಕೆಗಳು ಬರುತ್ತವೆ. ಅವನ್ನು ವಕ್ರತಲೆಗಳ ಹುಚ್ಚು ಎಂದು ಉಪೇಕ್ಷಿಸಬಹುದು. ಆದರೆ ಇಂದು ಅರುಣ್ ಶೌರಿ ಒಬ್ಬ ಸಾಮಾನ್ಯ ಪತ್ರಕರ್ತರಲ್ಲ. ಈಗವರು ಭಾರತೀಯ ಜನತಾ ಪಕ್ಷವನ್ನು ಪ್ರತಿನಿಧಿಸುವ ಒಬ್ಬ ಜವಾಬ್ದಾರಿಯುತ ಸಂಸತ್ ಸದಸ್ಯ ಎಂದೂ ಈ ಸಂಘಟನೆಗಳು ಹೇಳಿವೆ.

ಹೀಗಿದ್ದೂ ಮಹಿಳೆಯರ ಭಾವನೆಗಳಿಗೆ ಅವರು ಕೊಡುವ ಮರ್ಯಾದೆ ಇದೇ ಏನು? ಇದೇ ಅವರ ಸಂಸ್ಕೃತಿಯೇ? ಸಂಸತ್ತಿನಲ್ಲೂ ಶೌರಿ ಹೀಗೆಯೇ ಮಾತನಾಡು ತ್ತಾರೆಯೇ ಎಂದು ಕಟುವಾಗಿ ಪ್ರಶ್ನಿಸಿವೆ.

ಮಹಿಳಾ ಸಂಘಟನೆಗಳು ಮಹಿಳೆಯರ ಭಾವನೆಗಳಿಗೆ ಕೊಡಲಿ ಪೆಟ್ಟು ನೀಡಿರುವ ಶೌರಿಯವರು, ಕನಿಷ್ಠ ಪಕ್ಷ ಸಾರ್ವಜನಿಕರ ಮುಂದೆ ತಪ್ಪೊಪ್ಪಿಗೆ ಯಾಚಿಸುವ ಮೂಲಕ ಮಹಿಳೆಯರ ಭಾವನೆಗಳಿಗೆ ಸ್ಪಂದಿಸಲಿ ಎಂದು ಈ ಸಂಘಟನೆಗಳ ಮುಖಂಡರು ಆಶಿಸಿದ್ದಾರೆ.

ಲೋಕಸಂಚಾರ

# ಇರಾಕ್ ಮೇಲೆ ಅಮೆರಿಕ ಧಾಳಿ - ಭದ್ರತಾ ಸಮಿತಿಯ ಮಲತಾಯಿ ಧೋರಣೆ

ಇರಾಕ್‌ನ ಉಮ್ ಖಸ್ರ್ ನಗರದ 12 ಕಿ.ಮೀ. ಉತ್ತರಕ್ಕೆ ಅಮೇರಿಕದ ವಿಮಾನ, ಒಂದು ನೀರಿನ ಟ್ಯಾಂಕಿನತ್ತ ಕ್ಷಿಪಣಿ ದಾಳಿ ನಡೆಸಿದೆ ಎಂದು ವರದಿಯಾಗಿದೆ. ಬಸ್ರಾ ಪ್ರಾಂತ್ಯದ ದಕ್ಷಿಣದಲ್ಲಿರುವ ಈ ಸ್ಥಳದಲ್ಲಿ ಯಾವುದೇ ಮಿಲಿಟರಿ ಘಟಕ ಇಲ್ಲ. ಹಾಗೂ ಇರಾಕ್‌ನ ಯಾವುದೇ ಇಲೆಕ್ಟ್ರಾನಿಕ್ ಉಪಕರಣ ಅಥವಾ ರಾಡಾರ್‌ಗಳನ್ನು ಉಪಯೋಗಿಸುತ್ತಿರಲಿಲ್ಲ. ಅಮೇರಿಕ ಮತ್ತು ಬ್ರಿಟನ್‌ನ ವಿಮಾನಗಳು ಭಾಗವಹಿಸಿದ ಈ ಕ್ಷಿಪಣಿ ದಾಳಿ ಯಾವುದೇ ಪ್ರಚೋದನೆ ಯಿಲ್ಲದೆ ಮಾಡಿದ ಅನ್ಯಾಯಯುತ ಆಕ್ರಮಣವಾಗಿದೆ ಎಂದು ಇರಾಕ್ ಖಂಡಿಸಿದೆ. ಭದ್ರತಾ ಸಮಿತಿಯ ಯಾವುದೇ ನಿರ್ಣಯವಿಲ್ಲದೆ ಮಾಡಿದ ಈ ದಾಳಿಯನ್ನು ಭದ್ರತಾ ಸಮಿತಿ ಖಂಡಿಸಬೇಕು, ಮಾತ್ರವಲ್ಲ- ಈಗ ನಿರ್ಣಯ ವಿಧಿಸಿರುವ 'ಹಾರಾಟ-ರಹಿತ' ಪ್ರದೇಶಗಳನ್ನು ರದ್ದು ಮಾಡಬೇಕೆಂದು ಒತ್ತಾಯಿಸಿದೆ. ಇರಾಕ್‌ನಲ್ಲಿ ಹಾರಾಟ-ರಹಿತ ಪ್ರದೇಶಗಳನ್ನು ಪರೀಕ್ಷಿಸುವ ನೆವದಲ್ಲಿ ಅಮೇರಿಕ ಮತ್ತು ಬ್ರಿಟನ್‌ಗಳು ಈ ಆಕ್ರಮಣ ನಡೆಸಿವೆ. ಮುಂದೆ ಇದಕ್ಕೆ ಅವಕಾಶ ಕೊಡದಂತೆ ಈ ಹಾರಾಟ-ರಹಿತ ಪ್ರದೇಶಗಳನ್ನು ರದ್ದು ಮಾಡಬೇಕು ಎಂದಿದೆ ಇರಾಕ್. ಭದ್ರತಾ ಸಮಿತಿ ಮತ್ತು ಇಡೀ ಜಗತ್ತು ಈ ಅಮೇರಿಕದ ಆಕ್ರಮಣದ ಬಗೆಗೆ ಮೌನ ತಳೆದಿರುವುದು ಅಮೇರಿಕ ಮಾತ್ರವಲ್ಲ ಇಡೀ ಭದ್ರತಾ ಸಮಿತಿಯ ಇರಾಕ್ ವಿರುದ್ಧ ಮಲತಾಯಿ ಧೋರಣೆಯನ್ನು ಖಚಿತ ಪಡಿಸಿದೆ ಎಂದು ಇರಾಕ್ ಖಂಡಿಸಿದೆ.

# ಅಮೆರಿಕದ ಸರ್ಕಾರ, ಮಿಲಿಟರಿಗೆ ಬೆದರಿ ಜಾರಿಕೊಂಡ ಟೈಮ್-ಸಿ.ಎನ್.ಎನ್.

ಅಮೆರಿಕದ ಸುದ್ದಿ ಮಾಧ್ಯಮಗಳಿಗೆ ಪತ್ರಿಕೆ, ಟಿವಿ ಇತ್ಯಾದಿಗಳಿಗೆ ಸ್ವತಂತ್ರವಾಗಿ ಸರಕಾರವನ್ನು ಟೀಕಿಸುವ ಬಯಲಿಗೆಳೆಯುವ ಶಕ್ತಿ ಇದೆ ಎಂದೆಲ್ಲಾ ಅಬ್ಬರದ ಪ್ರಚಾರ ನಡೆಯುತ್ತಿದೆ.

ಇವೆಲ್ಲ ಬೊಗಳೆ ಎಂದು ಸಿದ್ಧಪಡಿಸುವ ಘಟನೆ ಇತ್ತೀಚೆಗೆ ನಡೆದಿದೆ. ಟೈಂ ಪತ್ರಿಕೆ ಮತ್ತು ಸಿ.ಎನ್.ಎನ್. ಸುದ್ದಿ ಚಾನೆಲ್ ಹೆಸರಾಂತ ಮಾಧ್ಯಮಗಳು - ಒಂದೇ ಕಂಪನಿಯ ಎರಡು ಭಾಗಗಳು.

ಇತ್ತೀಚೆಗೆ ಟೈಮ್ ಪತ್ರಿಕೆ ಮತ್ತು ಸಿ.ಎನ್.ಎನ್. ಕೇಬಲ್ ಚಾನೆಲ್ ಅಮೆರಿಕ 1970ರಲ್ಲಿ ತನ್ನದೇ 'ದ್ರೋಹಿ' ಸೈನಿಕರ ವಿರುದ್ಧ ಲಾವೋಸ್‌ನಲ್ಲಿ ಸರಿನ್ ಎಂಬ ನರ್ವ್‌ಗ್ಯಾಸ್ (ವಿಷಾನಿಲ) ಬಳಸಿತ್ತು ಎಂದು ವರದಿ ಮಾಡಿತ್ತು. ಈ ಬಗ್ಗೆ ತನ್ನ ಬಳಿ ಸಾಕ್ಷ್ಯಾಧಾರಗಳಿವೆ ಎಂದು ಹೇಳಿತ್ತು. ಅಮೆರಿಕ ಆಗ ತನ್ನ ಬಳಿ ಇದ್ದ ಎಲ್ಲಾ ರೀತಿಯ ರಾಸಾಯನಿಕ, ಜೈವಿಕ ಅಸ್ತ್ರಗಳನ್ನು ಲಾವೋಸ್, ಕಾಂಬೋಡಿಯಾ, ವಿಯೆಟ್ನಾಂಗಳಲ್ಲಿ ಬಳಸಿತ್ತು ಎಂದು ಎಲ್ಲರಿಗೂ ಗೊತ್ತಿರುವ ವಿಚಾರ. ಆದರೂ ಟೈಂ-ಸಿ.ಎನ್.ಎನ್. ನಂತಹ ಮಾಧ್ಯಮಗಳು ಈ ಬಗ್ಗೆ ಹೇಳಲಾರಂಭಿಸಿದ್ದು, ಅಮೆರಿಕದ ಆಳುವ ಮತ್ತು ಮಿಲಿಟರಿ ವಲಯಗಳಲ್ಲಿ ಗಲಿಬಿಲಿ,ಕಸಿವಿಸಿ ಉಂಟು ಮಾಡಿತ್ತು.

ಅದಾದ ಕೆಲವು ದಿನಗಳಲ್ಲಿ ಏನಾಯ್ತೋ ಏನೋ ಟೈಂ ಹಾಗೂ ಸಿ.ಎನ್.ಎನ್ ಎರಡೂ ಈ ಸುದ್ದಿ ನಿಜವಲ್ಲ, ಅದನ್ನು ಹಿಂತೆಗೆದುಕೊಂಡಿರುವುದಾಗಿ ಪ್ರಕಟಿಸಿವೆ. ಅಮೆರಿಕನ್ ಸರ್ಕಾರ ಮತ್ತು ಮಿಲಿಟರಿ ಈ ಸುದ್ದಿಯನ್ನು ಬಲವಾಗಿ ಅಲ್ಲಗಳೆದ ಮೇಲೆ 'ಸ್ವತಂತ್ರ' ಮಾಧ್ಯಮ ಲಾಯರುಗಳಿಂದ ತನಿಖೆ ನಡೆದ ಮೇಲೆ ಈ ಸುದ್ದಿ ನಿಜವಲ್ಲ ಎಂದು ತಿಳಿದು ಬಂದಿದೆ ಎಂದು ಇವು ಹೇಳಿವೆ. ಈ ಸುದ್ದಿಯ ತನಿಖೆ ಮಾಡಿ ವರದಿ ಮಾಡಿದ ಇಬ್ಬರು ವರದಿಗಾರರನ್ನು ಟೈಂ- ಸಿ.ಎನ್.ಎನ್ ಕೆಲಸದಿಂದ ತೆಗೆದು ಹಾಕಿವೆ. ಈ ಎರಡೂ ವರದಿಗಾರರು ಸುದ್ದಿ ನಿಜ, ಸರ್ಕಾರದ ಮಿಲಿಟರಿ ವಲಯಗಳ ಒತ್ತಡ ತಾಳಲಾರದೆ ಟೈಂ-ಸಿ.ಎನ್.ಎನ್ ಹಿಂದೇಟು ಹೊಡೆದಿವೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

ಮೂರನೇ ಜಗತ್ತಿನ ಜನರಿಗೆ ಇದರಿಂದ ಏನೂ ಆಶ್ಚರ್ಯವಾಗಿಲ್ಲ. ಮೂರನೇ ಜಗತ್ತಿನ ಬಗ್ಗೆ ಸುಳ್ಳು ವರದಿ ಸಲ್ಲಿಸುವ ಟೈಂ ಸಿ.ಎನ್.ಎನ್. ಅವೇರಿಕನ್ ಸರ್ಕಾರದ ಆಳುವ ವರ್ಗಗಳ ಅಂಗಗಳಂತೆ ಎಂದು ಗೊತ್ತಿದ್ದವರಿಗೆ ಇದರಿಂದ ಏನೂ ಆಶ್ಚರ್ಯವಾಗಿಲ್ಲ.

# 32 ವರ್ಷಗಳ ನಂತರ: ಚೀನಿ-ಜಪಾನಿ ಕಮ್ಯುನಿಸ್ಟ್ ಪಕ್ಷಗಳ ಸಂಬಂಧ ಪುನರ್ಸ್ಥಾಪನೆ

ಚೀನಿ ಮತ್ತು ಜಪಾನಿ ಕಮ್ಯುನಿಸ್ಟ್ ಪಕ್ಷಗಳು 32 ವರ್ಷಗಳ ನಂತರ ಪುನಃ ಪಕ್ಷ-ಪಕ್ಷಗಳ ನೇರ ಸಂಬಂಧ ಸ್ಥಾಪಿಸಲು ನಿರ್ಧರಿಸಿವೆ. ಇದು ಅಂತರಾಷ್ಟ್ರೀಯ ಪ್ರಗತಿಪರ ಮತ್ತು ಕಮ್ಯುನಿಸ್ಟ್ ಚಳುವಳಿಯ ಇತಿಹಾಸದಲ್ಲಿ ಒಂದು ಮಹತ್ತರ ಬೆಳವಣಿಗೆಯಾಗಿದೆ. ಕಮ್ಯುನಿಸ್ಟರು ಮತ್ತು ಪ್ರಗತಿಪರರು ಎಲ್ಲೆಡೆ ಇದನ್ನು ಸ್ವಾಗತಿಸಿದ್ದಾರೆ.

1960 ರ ದಶಕದಲ್ಲಿ ಚೀನಿ ಕಮ್ಯುನಿಸ್ಟ್ ಪಕ್ಷ ಸಾಂಸ್ಕೃತಿಕ ಕ್ರಾಂತಿಯ ನೀತಿ ಅಂಗೀಕರಿಸಿದಾಗ ಮತ್ತು ಎರಡು ಪಕ್ಷಗಳ ನಡುವೆ ನಡೆದ ಕಹಿ ಘಟನೆಗಳಿಂದ ಸಂಬಂಧ ಕಡಿದು ಹೋಗಿತ್ತು. ಜಪಾನ್ ಕಮ್ಯುನಿಸ್ಟ್ ಪಕ್ಷದ ಅಂತರಾಷ್ಟ್ರೀಯ ವಿಭಾಗದ ಮುಖ್ಯಸ್ಥರ ನಾಯಕತ್ವದ ತಂಡ ಹಾಗೂ ಚೀನಿ ಪಕ್ಷದ ತಂಡ ಬೀಜಿಂಗ್‌ನಲ್ಲಿ 3 ದಿನಗಳ ಮಾತುಕತೆ ನಡೆಸಿದನಂತರ, ಬೀಜಿಂಗ್ ಮತ್ತು ಟೋಕ್ಯೋಗಳೆರಡರಲ್ಲೂ ಏಕಕಾಲಕ್ಕೆ ಈ ನಿರ್ಧಾರವನ್ನು ಪ್ರಕಟಿಸಲಾಯಿತು. ಎರಡೂ ಪಕ್ಷಗಳು ಪಕ್ಷದ ಸಂಬಂಧ ನಿಂತು ಹೋದ ತಾಂತ್ರಿಕ, ಸೈದ್ಧಾಂತಿಕ ವಿಷಯಗಳ ಬಗ್ಗೆ ಚರ್ಚೆ ಮಾಡಿ, ಆ ಬಗ್ಗೆ ಮರೆತು ಭವಿಷ್ಯದ ಬಗ್ಗೆ ಗಮನ ಕೊಡಲು ನಿರ್ಧರಿಸಿದವು. ಎರಡೂ ಪಕ್ಷಗಳ ನಡುವೆ ಸಂಬಂಧ ಸಾಮಾನ್ಯೀಕರಿಸುವ ಹಾಗೂ ಬೆಳೆಸುವ ಬಗ್ಗೆ ಯೋಜನೆಯನ್ನು ಚರ್ಚಿಸಲಾಯಿತು. ಪಕ್ಷಗಳ ನಡುವಿನ ಸಂಬಂಧಗಳ ಬಗೆಗಿನ ನಾಲ್ಕು ನೀತಿಗಳನ್ನು ತಮ್ಮ ಪಕ್ಷ ಪಾಲಿಸಲಿಲ್ಲ ಎಂಬ ಚೀಣೀ ಪಕ್ಷದ ಸ್ವಯಂ-ಟೀಕೆಯನ್ನು ಜಪಾನಿ ಪಕ್ಷ ಮೆಚ್ಚಿಕೊಂಡಿದ್ದು, ಈ ನಿರ್ಣಯಕ್ಕೆ ಬರುವಲ್ಲಿ ಸಹಾಯಕಾರಿಯಾಯಿತು.

ಸದ್ಯದಲ್ಲೆ ಎರಡೂ ಪಕ್ಷಗಳ ಉನ್ನತ ನಾಯಕರು ಶೃಂಗಸಭೆಯೊಂದರಲ್ಲಿ ಸೇರುವುದು ಎಂದು ನಿರ್ಧರಿಸಲಾಗಿದೆ.

# ಲ್ಯಾಟಿವಿಯಾ ರಶ್ಯನರಿಗೆ ಪ್ರಜಾಹಕ್ಕು

ಸೋವಿಯೆತ್ ಒಕ್ಕೂಟದ ವಿಘಟನೆಯ ಸಮಯದಲ್ಲಿ ಮೊದಲು ಪ್ರತ್ಯೇಕವಾದ ಲ್ಯಾಟಿವಿಯಾಲ್ಲಿ ರಶ್ಯನ್‌ರು ಎರಡನೇ ದರ್ಜೆಯ ಪ್ರಜೆಗಳಾಗಿ 1991ರಿಂದ ಬಾಳುತ್ತಿದ್ದಾರೆ. ಅವರಿಗೆ ಇತ್ತೀಚೆಗೆ ಅಂಗೀಕರಿಸಿದ ಕಾನೂನಿನಿಂಜ ಸಲ್ಪಮಟ್ಟಿಗೆ ಅನಿಶ್ಚಿತತೆ ದೂರವಾದಂತಾಗಿದೆ. ಆದರೆ ಲ್ಯಾಟಿವಿಯಾದಲ್ಲಿ ರಶ್ಯನ್‌ರ ಇನ್ನೂ ಎರಡನೇ ದರ್ಜೆಯ ಪ್ರಜೆಗಳಾಗಿ ಬಾಳುತ್ತಿದ್ದಾರೆ.

1991 ರಿಂದ ಲ್ಯಾಟಿವಿಯಾದಲ್ಲಿ ಜಾರಿಗೆ ಬಂದ ನಾಗರಿಕ ಕಾನೂನುಗಳ ಪ್ರಕಾರ 1940 ರ ನಂತರ ಬಂದು ನೆಲೆಸಿದ ರಶ್ಯನ್‌ರು ತಮ್ಮ ಎಲ್ಲಾ ನಾಗರಿಕ ಹಕ್ಕುಗಳನ್ನು ಕಳೆದು ಕೊಂಡಿದ್ದರು. ನಾಗರಿಕತ್ವ ಪಡೆಯಬೇಕಾದರೆ ಲ್ಯಾಟಿವಿಯನ್ ಭಾಷೆಯಲ್ಲಿ ಮತ್ತು ಚರಿತ್ರೆಯಲ್ಲಿ ಪರೀಕ್ಷೆ ಕಟ್ಟ ಬೇಕಾಗಿತ್ತು. ಇದು 1945 ರ ನಂತರ ಲ್ಯಾಟಿವಿಯಾದಲ್ಲಿ ಬಂದು ನೆಲೆಸಿ, ಆಧುನಿಕ ಸಮಾಜವಾದಿ ಲ್ಯಾಟಿವಿಯಾವನ್ನು ಕಟ್ಟುವಲ್ಲಿ ನೆರವಾದ ಸುಮಾರು 7 ಲಕ್ಷ ರಶ್ಯನ್ ಮೂಲದವರಿಗೆ ಅವಮಾನಕಾರಿ ಮಾತ್ರವಲ್ಲ-ದೊಡ್ಡ ಸವಾಲಾಗಿತ್ತು. ಹೆಚ್ಚಿನ ರಶ್ಯನ್ ಮೂಲದವರು ಈ ಪರೀಕ್ಷೆ ಕಟ್ಟಿ, ನಾಗರಿಕತ್ವ ಪಡೆಯುವಂತಿರಲಿಲ್ಲ. ಈ ಫ್ಯಾಸಿಸ್ಟ್ ರೀತಿಯ ಜನಾಂಗ ಭೇದ ಸಮಾಜವಾದಿ ಸಮಾಜದಲ್ಲೇ ಬೆಳೆದ ಅವರಿಗೆ ದೊಡ್ಡ ಆಘಾತವಾಗಿತ್ತು.

ರಶ್ಯ ಈ ಬಗ್ಗೆ ಬಲವಾದ ಪ್ರತಿಭಟನೆ ಸಲ್ಲಿಸಿ, ಈ ಬಗ್ಗೆ ಅಂತರ್ರಾಷ್ಟ್ರೀಯ ಅಭಿಪ್ರಾಯ ರೂಢಿಸಲು ಪ್ರಯತ್ನಿಸಿತು. ಯುರೋಪಿಯನ್ ಒಕ್ಕೂಟ ಸಹ ಲ್ಯಾಟಿವಿಯಾದ ಈ ಫ್ಯಾಸಿಸ್ಟ್ ಅತಿರೇಕಗಳ ಬಗ್ಗೆ ಆಕ್ಷೇಪಣೆ ಸಲ್ಲಿಸಿತ್ತು. ಈ ಎಲ್ಲಾ ಒತ್ತಡಗಳಿಂದ ಲ್ಯಾಟಿವಿಯ ರಶ್ಯನ್‌ರ ಬಗೆಗಿನ ಮಲತಾಯಿ ಧೋರಣೆಯನ್ನು ಸ್ವಲ್ಪ ಸಡಿಲಗೊಳಿಸಿದೆ. 1991ರ ನಂತರ ಹುಟ್ಟಿದ ರಶ್ಯನ್ ಮೂಲದವರಿಗೆ ನಾಗರಿಕತ್ವ ತಂತಾನೆ ದೊರೆಯುತ್ತದೆ. ಲ್ಯಾಟಿವಿಯನ್ ಭಾಷೆ ಮತ್ತು ಚರಿತ್ರೆ ಪರೀಕ್ಷೆಯನ್ನು ಸರಳೀಕರಿಸಲಾಗಿದೆ. ಆದರೂ ರಶ್ಯನರು ಇನ್ನೂಎರಡನೇ ದರ್ಜೆ ಪ್ರಜೆಗಳು ಎಂದು ಮರೆಯಬಾರದು.

## ಐರ್ಲೆಂಡ್ ಶಾಂತಿ ಒಪ್ಪಂದಕ್ಕೆ ಐರಿಷ್ ಕಮ್ಯುನಿಸ್ಟ್ ಪಕ್ಷದ ಸ್ವಾಗತ

ಉತ್ತರ ಐರ್ಲೆಂಡಿನ ಹಲವು ದಶಕಗಳ ಸಶಸ್ತ್ರ ಹೋರಾಟ, ಘರ್ಷಣೆ ಕೊನೆಗೊಳಿಸಿ, ಅಲ್ಲಿನ ಜನಾಂಗೀಯ ಸಮಸ್ಯೆಗೆ ಶಾಂತಿಯುತ ಪರಿಹಾರ ಕಂಡುಹಿಡಿಯಲು ಅನುವು ಮಾಡಿಕೊಟ್ಟ ಬಹು-ಪಕ್ಷೀಯ ಶಾಂತಿ ಒಪ್ಪಂದವನ್ನು ಐರ್ಲೆಂಡಿನ ಕಮ್ಯುನಿಸ್ಟ್ ಪಕ್ಷ ಸ್ವಾಗತಿಸಿದೆ. ಮೇಯಲ್ಲಿ ಶಾಂತಿ ಒಪ್ಪಂದದ ಬಗ್ಗೆ ನಡೆದ ಜನಮತ ಸಂಗ್ರಹದಲ್ಲೂ ಕಮ್ಯುನಿಸ್ಟ್ ಪಕ್ಷ ಶಾಂತಿ ಒಪ್ಪಂದದ ಬಗ್ಗೆ ಬೆಂಬಲ ನೀಡಲು ಪ್ರಚಾರ ನಡೆಸಿತ್ತು.

ಉತ್ತರ ಐರ್ಲೆಂಡಿನ ಜನತೆಗೆ ಈ ಶಾಂತಿ ಒಪ್ಪಂದದಿಂದ ಒಂದು ಹೊಸ ಅವಕಾಶ ಸಿಕ್ಕಂತಾಗಿದೆ. ಧಾರ್ಮಿಕ/ಜನಾಂಗೀಯ ಹಿಂಸಾಚಾರ ಮತ್ತು ಪ್ರತ್ಯೇಕತಾವಾದದ ಕೊಚ್ಚೆಯಿಂದ ಹೊರಬಂದು ದುಡಿಯುವ ವರ್ಗದ ರಾಜಕೀಯ, ಆರ್ಥಿಕ ಸಾಮಾಜಿಕ, ಸಾಂಸ್ಕೃತಿಕ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳಿಗೆ ಹೋರಾಡಲು ಬೇಕಾದ ಪರಿಸ್ಥಿತಿಯನ್ನು ಈ ಶಾಂತಿ ಒಪ್ಪಂದ ನಿರ್ಮಿಸುವುದು ಎಂದು ಅದು ಆಶಿಸಿದೆ.

ಈ ಅವಕಾಶಗಳನ್ನು ದುಡಿಯುವ ವರ್ಗ, ಟ್ರೇಡ್ ಯೂನಿಯನ್‌ಗಳು ಮತ್ತು ಪಕ್ಷ ಪೂರ್ಣವಾಗಿ ಬಳಸಿಕೊಂಡು ಪ್ರಗತಿಪರ ಚಳುವಳಿ ಬೆಳೆಸಿ ಸಮಾಜವಾದಿ ಗುರಿಯತ್ತ ಮುನ್ನಡೆಬೇಕೆಂದು ಪಕ್ಷ ಕರೆ ನೀಡಿದೆ. ಶಾಂತಿ ಒಪ್ಪಂದದ ಜಾರಿಗೆ, ಆ ಒಪ್ಪಂದವನ್ನು ಮುರಿಯುವ ಶಕ್ತಿಗಳ ವಿರುದ್ಧ ಹೋರಾಡಲು ಪಕ್ಷ ತೀರ್ಮಾನಿಸಿದೆ.

# ಜಪ್ತಿ ಮಾಡಲಾದ ಸೊತ್ತುಗಳಿಗಾಗಿ ಚಳುವಳಿ ಹೂಡಲು ರೈತ ಸಮುದಾಯದ ನಿರ್ಧಾರ

ಹಾನಗಲ್ : ಸತತ ಅತಿವೃಷ್ಟಿ ಅನಾವೃಷ್ಟಿಗಳಿಂದ ತೀವ್ರ ಬೆಳೆಹಾನಿ ಅನುಭವಿಸಿದ ರೈತರು ಸಾಲ ಮರುಪಾವತಿ ಮಾಡಲಾಗದೆ, ಮನೆ ಜಪ್ತಿ, ಭೂಮಿ ಹರಾಜು ಕ್ರಮಗಳಿಂದ ಅವಮಾನಕ್ಕೆ ಗುರಿಯಾಗುವುದನ್ನು ಎದುರಿಸಲಾಗದೇ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾಗ್ಯೂ ಹಾನಗಲ್ ತಾಲೂಕು ಭೂ ಅಭಿವೃದ್ಧಿ ಬ್ಯಾಂಕಿನವರು ರೈತರ ನೀರಾವರಿ ಪಂಪ್ ಸೆಟ್ಟುಗಳನ್ನು ಮೋಟಾರುಗಳನ್ನು ಸ್ಟಾರ್ಟರುಗಳನ್ನು, ಟ್ರಾಕ್ಟರುಗಳನ್ನು ಜಪ್ತಿ ಮಾಡುತ್ತಿರುವುದನ್ನು ಮತ್ತು ಭೂಮಿ ಹರಾಜು ನೋಟೀಸು ನೀಡುತ್ತಿರುವುದನ್ನು ಜೂನ್ 29ರಂದು ಕಾಡಶೆಟ್ಟಿಹಳ್ಳಿ ಗ್ರಾಮದಲ್ಲಿ ಜರುಗಿದ ತಾಲೂಕ ರೈತರ ಸಮಾವೇಶವು ಉಗ್ರವಾಗಿ ಖಂಡಿಸಿದೆ. ಈ ಬಗ್ಗೆ ಪ್ರಮುಖ ನಿರ್ಣಯವೊಂದನ್ನು ಅಂಗೀಕರಿಸಿರುವ ಸಮಾವೇಶವು ಹೊಲಗಳಲ್ಲಿ ಬೆಳೆದು ನಿಂತ ಫಸಲಿಗೆ ನೀರು ಅವಶ್ಯವಿರುವ ಹಂತದಲ್ಲಿ ಪಂಪಸೆಟ್ಟುಗಳನ್ನು, ಮೋಟಾರುಗಳನ್ನು ಬಲವಂತವಾಗಿ ಜಪ್ತಿ ಮಾಡಿಕೊಂಡು ಹೋಗಿರುವುದರಿಂದ ತಾಲೂಕಿನ ಅನೇಕ ರೈತರಿಗಾದ ಅಪಾರ ಹಾನಿಯ ಬಗ್ಗೆ ತೀವ್ರ ಕಳವಳ ವ್ಯಕ್ತ ಪಡಿಸಿದೆ. ಇನ್ನೂ ಮುಂದೆ ಯಾವುದೇ ಜಪ್ತಿ ಕ್ರಮಗಳಿಗೆ ಆಸ್ಪದ ನೀಡದಿರಲು ರೈತರು ನಿರ್ಧರಿಸಿದ್ದು ಜಪ್ತು ಮಾಡಿ ಒಯ್ಯಲಾದ ರೈತರ ಸೊತ್ತುಗಳನ್ನು ಹಿಂತಿರುಗಿಸುವಂತೆ ಬ್ಯಾಂಕಿನವರನ್ನು ಒತ್ತಾಯಿಸಲು ಬ್ಯಾಂಕಿನ ಎದುರು ಸಾಮೂಹಿಕ ಸತ್ಯಾಗ್ರಹ ನಡೆಸಲು ಸಮಾವೇಶ ನಿರ್ಧರಿಸಿದೆ.

ಹಾವೇರಿ ಜಿಲ್ಲೆಯ ಸವಣೂರು ತಾಲೂಕಿನ ಕಳಸೂರು, ಹಿರೇಕೆರೂರ್ ತಾಲೂಕಿನ ಮೇದೂರ್ ಮತ್ತು ಹಾನಗಲ್ ತಾಲೂಕಿನ ಬೆಂಗಾಪುರ ಗ್ರಾಮಗಳಲ್ಲಿ ಆತ್ಮಹತ್ಯೆ ಮಾಡಿಕೊಂಡ ಮೂವರು ರೈತರ ಕುಟುಂಬಗಳಿಗೆ ಇಲ್ಲಿಯವರೆಗೆ ಪರಿಹಾರ ನೀಡದಿರುವ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತ ಪಡಿಸಿರುವ ಸಮಾವೇಶವು ಬೆಳೆಹಾನಿಗೊಳಗಾದ ರೈತರ ಸಾಲವನ್ನು ಮನ್ನಾ ಮಾಡಬೇಕೆಂದು, ಅವರಿಗೆ ಹೊಸದಾಗಿ ಸಾಲ ಸೌಲಭ್ಯವನ್ನು ಒದಗಿಸಬೇಕೆಂದೂ, ಸಮಗ್ರ ಬೆಳೆ ವಿಮಾ ಯೋಜನೆಯನ್ನು ಜಾರಿಗೆ ತರಬೇಕೆಂದೂ, ಬೆಳೆ ಹಾನಿ ಅಂದಾಜು ಮಾಡಲು ಬ್ರಿಟಿಷರ ಕಾಲದ ಅಣೆವಾರಿ ಪದ್ಧತಿಯನ್ನು ಕೈಬಿಟ್ಟು ಪ್ರತ್ಯಕ್ಷ ಸ್ಥಳ ಪರಿಶೀಲನೆ ನಡೆಸಿ ಬೆಳೆ ಹಾನಿ ಲೆಕ್ಕ ಹಾಕುವ ವೈಜ್ಞಾನಿಕ ಕ್ರಮವನ್ನು ಅನುಸರಿಸುವಂತಾಗಬೇಕೆಂದು ಪ್ರತ್ಯೇಕ ನಿರ್ಣಯದಲ್ಲಿ ಸರ್ಕಾರವನ್ನು ಒತ್ತಾಯಿಸಲಾಗಿದೆ.

ಹಾನಗಲ್ ತಾಲೂಕಿನ ಗ್ರಾಮೀಣ ರಸ್ತೆಗಳ ದುರಸ್ತಿ ಕೆಲಸವನ್ನು ತುರ್ತಾಗಿ ಆರಂಭಿಸಬೇಕೆಂದು ಒತ್ತಾಯಿಸಿರುವ ಸಮಾವೇಶವು ಗ್ರಾಮೀಣ ವಿದ್ಯಾರ್ಥಿಗಳಿಗೆ ಶಾಲೆ ಕಾಲೇಜುಗಳಿಗೆ ಹಾಜರಾಗಲು ಅನುಕೂಲವಾಗುವಂತೆ ರಾಜ್ಯ ರಸ್ತೆ ಸಾರಿಗೆ ಬಸ್ಸುಗಳ ಸೌಕರ್ಯ ಒದಗಿಸಬೇಕೆಂದು ಸಮಾವೇಶವು ಆಗ್ರಹಿಸಿದೆ.

ಸಮಾವೇಶಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ರಾಜ್ಯ ರೈತ ಕಾರ್ಮಿಕರ ಮುಖಂಡ ನಿತ್ಯಾನಂದಸ್ವಾಮಿ ಅವರು ಮಾತನಾಡುತ್ತ ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದ ನಮ್ಮನ್ನು ಆಳಿದ ಸರ್ಕಾರಗಳು ಬಂಡವಾಳಿಗರ ಬೆಳವಣಿಗೆಗೆ ಅನುಕೂಲ ಮಾಡುತ್ತ ರೈತರನ್ನು ಕಡೆಗಣಿಸಿದ್ದರಿಂದ ಇಂದು ರೈತರು ದಿವಾಳಿಯಾಗುತ್ತಿದ್ದಾರೆ ಎಂದು ಆರೋಪಿಸಿದರು.

ರೈತರು ಸಂಘಟಿತರಾಗಿ ಹೋರಾಡುವ ಬದಲು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದರ ಬಗ್ಗೆ ದುಃಖ ವ್ಯಕ್ತಿಪಡಿಸಿದ ಅವರು ನೂರಕ್ಕೆ ಎಪ್ಪತ್ತರಷ್ಟಿರುವ ಭಾರತದ ರೈತರು ಕಾರ್ಮಿಕ ಸಂಘಗಳ ಮಾದರಿಯಲ್ಲಿ ಸುಸಂಘಟಿತರಾಗಿ ಹೋರಾಟ ನಡೆಸಿದರೆ ಶೋಷಣೆಯಿಂದ ಮುಕ್ತರಾಗಲು ಸಾಧ್ಯವಿದೆ ಎಂದು ಹೇಳಿದರು.

ಚನ್ನವೀರಪ್ಪ ಹುಣಸಿಕಟ್ಟಿ ಅವರು ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು. ರೈತ ಧುರೀಣರಾದ ವಿಶ್ವನಾಥ ತುಪ್ಪದ, ಹಕ್ಕಲಗೌಡ ಪಾಟೀಲ ಮತ್ತು ಮಲ್ಲಿಕಾರ್ಜುನಪ್ಪ ಹೋತನಹಳ್ಳಿ ರೈತರನ್ನು ಉದ್ದೇಶಿಸಿ ಮಾತನಾಡಿದರು. ಆರಂಭದಲ್ಲಿ ಸಿ.ಎಂ. ಪಾಟೀಲ್ ಸ್ವಾಗತಿಸಿದರು. ಕೊನೆಯಲ್ಲಿ ಶಿವರುದ್ರಪ್ಪ ದೊಡ್ಡಮನಿ ಅವರು ವಂದಿಸಿದರು.

**ಸಂಚಾಲಕ ಸಮಿತಿ ಆಯ್ಕೆ :-**

ಹಾನಗಲ್ ತಾಲೂಕಿನಲ್ಲಿ ರೈತರನ್ನು ಸಂಘಟಿಸಲು ಕರ್ನಾಟಕ ಪ್ರಾಂತ ರೈತ ಸಂಘದ ಗ್ರಾಮ ಘಟಕಗಳನ್ನು ರಚಿಸಲು ಸಮಾವೇಶವು ತೀರ್ಮಾನಿಸಿದ್ದು ಸಿ.ಎಂ. ಪಾಟೀಲ್ ಸಂಚಾಲಕರಾಗಿರುವ ವಿಶ್ವನಾಥ್ ತುಪ್ಪದ, ಮಲ್ಲಿಕಾರ್ಜುನಪ್ಪ ಹೋತನಹಳ್ಳಿ ಬಸವಣ್ಣಯ್ಯ ಹಿರೇಮಠ, ಮೌಲಾಸಾಬ ಹರವಿ, ಸಹ ಸಂಚಾಲಕರಾಗಿರುವ ತಾಲೂಕು ಮಟ್ಟದ ಸಂಘಟನಾ ಸಮಿತಿಯನ್ನು ಸಮಾವೇಶವು ಸರ್ವಾನುಮತದಿಂದ ಅಂಗೀಕರಿಸಿತು.

# ಕೇಬಲ್ ದರ ಇಳಿಕೆ

ಚಿಂತಾಮಣಿ ಡಿಶ್ ಕೇಬಲ್ ಮಾಲೀಕರು ಜುಲೈ 1ರಿಂದ ಮಾಸಿಕ ಶುಲ್ಕ 70-00 ರೂಗಳಿಗೆ ಏರಿಸಿದ್ದ ತೀರ್ಮಾನವನ್ನು ಕೈಬಿಟ್ಟು 60-00 ರೂಗಳಿಗೆ ಇಳಿಸಿರುವುದು ನಗರದ ನಾಗರೀಕರ ಪ್ರತಿರೋಧದ ಮನೋಭಾವ ಮತ್ತು ಇದರ ಹಿನ್ನೆಲೆಯಲ್ಲಿ ಸಿ.ಪಿ.ಐ.(ಎಂ) ನಗರ ಶಾಖೆ ನೀಡಿದ ಪತ್ರಿಕಾ ಹೇಳಿಕೆಯ ಪರಿಣಾಮದ ಪ್ರತಿಫಲವೆಂದು ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಸ್ಥಳೀಯ ಸಮಿತಿಯು ಅಭಿಪ್ರಾಯ ಪಟ್ಟಿದೆ. ಹಾಗೂ ಇದೇ ಸಂದರ್ಭದಲ್ಲಿ ಹಿಂದಿನಂತೆ ಮಾಲೀಕರು ಮಾಸಿಕ ಶುಲ್ಕವನ್ನು 50-00 ರೂ.ಗಳಿಗೆ ಇಳಿಸುವಂತೆ ಒತ್ತಾಯಿಸಬೇಕೆಂದು ನಾಗರೀಕಬಂಧುಗಳಲ್ಲಿ ವಿನಂತಿಸಿದೆ.

ಗ್ರಾಹಕರಿಗೆ ಉತ್ತಮ ಗುಣಮಟ್ಟದ ಸೇವೆಯನ್ನು ನೀಡುವುದು, ಮೂಲ ಕಾರ್ಯಕ್ರಮಗಳಿಗೆ ತೊಂದರೆಯಾಗದ ರೀತಿಯಲ್ಲಿ ಸ್ಥಳೀಯ ಜಾಹೀರಾತುಗಳ ಪ್ರಸಾರ ಇತಾ [illegible]ಶಗಳ ಬಗ್ಗೆ ಮಾಲೀಕರು ಗಮ[illegible]ಸಬೇಕೆಂದು ಸ್ಥಳೀಯ ಸಮಿತಿ ಆಗ್ರಹಿಸಿದೆ.

## ಗುತ್ತೇದಾರ್ ವಜಾ ಆಗ್ರಹಿಸಿ ಗುಲ್ಬರ್ಗಾ ಬಂದ್

ಹತ್ತಾರು ಕೊಲೆ ಕೇಸುಗಳಲ್ಲಿ ಪಾದಿತರಾಗಿರುವ ರಾಜ್ಯ ಮಂತ್ರಿ ಹಾಗೂ ಗುಲ್ಬರ್ಗಾ ಜಿಲ್ಲಾ ಉಸ್ತುವಾರಿ ಮಂತ್ರಿ ಮಾಲಿಕಯ್ಯ ಗುತ್ತೇದಾರ್‌ರವರನ್ನು ತಕ್ಷಣಾ ವಜಾ ಮಾಡಬೇಕೆಂದು ಆಗ್ರಹಿಸಿ ಜಿಲ್ಲಾ ರಾಜಕೀಯ ಶಾಂತಿ ಸಮಿತಿಯ ಕರೆಯ ಮೇರೆಗೆ ಸಂಪೂರ್ಣ ಗುಲ್ಬರ್ಗಾ ಬಂದ್ ಯಶಸ್ವಿಯಾಗಿ ನಡೆಯಿತು. ಶಾಂತಿ ಸಮಿತಿಯ ಮುಖಂಡರು ಡೆಪ್ಯೂಟಿ ಕಮಿಶನರ್ ಮೂಲಕ ಮುಖ್ಯ ಮಂತ್ರಿಗಳಿಗೆ ಅವರನ್ನು ಮಂತ್ರಿಮಂಡಳದಿಂದ ವಜಾ ಮಾಡುವಂತೆ ಆಗ್ರಹಿಸಿ ಒಂದು ಮನವಿ ಪತ್ರವನ್ನು ಸಲ್ಲಿಸಿದರು. ಈ ವಿಷಯದ ಮೇಲೆ ಸಿ.ಬಿ.ಐ. ತನಿಖೆ ನಡೆಸಬೇಕು ಎಂದೂ ಸಮಿತಿ ಒತ್ತಾಯಿಸಿತು. ಸಿ.ಪಿ.ಐ.(ಎಂ), ಕರ್ನಾಟಕ ದಲಿತ ಸಂಘರ್ಷ ಸಮಿತಿ, ಕಾಂಗ್ರೆಸ್, ಬಿ.ಜೆ.ಪಿ. ಸಮತಾ ಪಾರ್ಟಿ, ಬಿ.ಎಸ್.ಪಿ. ಘಟಕಗಳು ಈ ಬಂದ್‌ಗೆ ಬೆಂಬಲ ಸೂಚಿಸಿದ್ದವು.

# ಸೇನಾಧಿಕಾರಿಗಳು ಪರಮಾಣು ಅಸ್ತ್ರಗಳನ್ನು ಬಯಸುತ್ತಾರೆಯೇ?

ಹೌದು, ದೊಡ್ಡ ಪತ್ರಿಕೆಗಳ ವರದಿಗಳೆನ್ನೆಲ್ಲಾ ನಂಬುವುದಾದರೆ. ಸಶಸ್ತ್ರ ಪಡೆಗಳಲ್ಲಿರುವವರಿಗೆ ಸದಾ ಯುದ್ಧದ ತವಕ ಎಂಬುದು ಸಾಮಾನ್ಯವಾದ ಭಾವನೆ. ಆದರೆ ಇದು ನಿಜವಲ್ಲ ಎನ್ನುತ್ತಾರೆ ರಕ್ಷಣಾ ವಿಷಯಗಳ ವಿಶೇಷ ಪರಿಣತ ಹಾಗೂ ಹಿರಿಯ ಪತ್ರಕರ್ತ ಎನ್.ಕುಂಜು. ಇಂತಹ ಭಾವನೆ ಬರಲು ಕಾರಣ ದೊಡ್ಡ ಪತ್ರಿಕೆಗಳು ರಕ್ಷಣಾ ವಿಷಯಗಳಲ್ಲಿ ಅಭಿಪ್ರಾಯ ಪಡೆಯಲು ಸರಕಾರೀ ನೆರವು ಪಡೆದ ವಿಶೇಷಜ್ಞರ ಬಳಿಗೇ ಹೋಗುತ್ತಾರೆ. ಇವರು ಸಮತೋಲದ ವಸ್ತುನಿಷ್ಠ ಅಭಿಪ್ರಾಯಕ್ಕಿಂತ ಹೆಚ್ಚಾಗಿ ಅಧಿಕಾರದಲ್ಲಿರುವವರನ್ನು ಸಂತುಷ್ಟಗೊಳಿಸಬಲ್ಲ 'ವಿಶ್ಲೇಷಣೆ'ಗಳೇ ನೀಡುವುದು.

ವಾಸ್ತವವಾಗಿ ಸಶಸ್ತ್ರ ಪಡೆಗಳಲ್ಲಿರುವವರು ಯುದ್ಧ ಬಯಸುವುದಿಲ್ಲ, ಜೀವಭಯದಿಂದಾಗಿ ಅಲ್ಲ, ಮುಗ್ಧ ಜನಗಳ ಮೇಲೆ ಅದರ ಪರಿಣಾಮಗಳನ್ನು ಕಂಡು. ರಕ್ಷಣಾ ಧೋರಣೆ ಕುರಿತಂತೆ ಹೆಚ್ಚು ಆಕ್ರಾಮಕವಾಗಿರುವುದು ರಾಜಕಾರಣಿಗಳು ಮತ್ತು ಅಧಿಕಾರಿಗಳೇ ಎನ್ನುತ್ತಾರೆ ಶ್ರೀಕುಂಜು. ಏಕೆಂದರೆ ಆಕ್ರಾಮಕ ಮಾತುಗಳನ್ನಾಡಿದರೆ ಅಗ್ಗದ ಜನಪ್ರಿಯತೆ ಸಿಗುತ್ತದೆ, ಆಕ್ರಮಣಶೀಲತೆಯನ್ನು ಜನ ದೇಶಪ್ರೇಮವೆಂದು ತಪ್ಪಾಗಿ ಅರ್ಥೈಸುತ್ತಾರೆ ಎಂದು ಅವರ ನಿರೀಕ್ಷೆ. ಅಮೇರಿಕಾದ ಅಧ್ಯಕ್ಷರಾಗಿದ್ದ ಅದಕ್ಕೆ ಮೊದಲು ಸೇನಾಧಿಕಾರಿಯೂ ಆಗಿದ್ದ ಜನರಲ್ ಐಸೆನ್‌ಹೋವರ್‌ರವರ ಈ ಮಾತುಗಳನ್ನು ಅವರು ನೆನಪಿಸುತ್ತಾರೆ - *"ಸಂಪೂರ್ಣ ಭದ್ರತೆಗಾಗಿ ಅತೀವ ಹಂಬಲವನ್ನು ಈಡೇರಿಸುವುದು ಆಗದ ಮಾತು. ಆದರೆ ಆ ಭ್ರಮಾತ್ಮಕ ಗುರಿಯನ್ನು ಕೇವಲ ಶಸ್ತ್ರಾಸ್ತ್ರಗಳ ಮೂಲಕ ತಲುಪುವ ಪ್ರಯತ್ನದಲ್ಲಿ ದೇಶ ನೈತಿಕವಾಗಿ ಹಾಗೂ ಆರ್ಥಿಕವಾಗಿ ಸುಲಭವಾಗಿ ತನ್ನನ್ನು ತಾನೇ ದಿವಾಳಿ ಮಾಡಿಕೊಳ್ಳಬಹುದು".*

ಇತ್ತೀಚೆಗೆ ವಿಭಿನ್ನ ದೇಶಗಳ ಅರವತ್ತು ಸೇನಾಪತಿಗಳು, ಜನರಲ್‌ಗಳು, ಅಡ್ಮಿರಲ್‌ಗಳು, ಏರ್ ಮಾರ್ಷಲ್‌ಗಳು - ಮಾಡಿರುವ ಒಂದು ಮನವಿಯನ್ನು ನೋಡಿ - *"ನಮ್ಮ ದೇಶಗಳ ಹಾಗೂ ನಮ್ಮ ಜನಗಳ ರಾಷ್ಟ್ರೀಯ ಭದ್ರತೆಗೆ ನಮ್ಮ ಜೀವನ ವನ್ನರ್ಪಿಸಿದ ಸೈನಿಕ ಕಸಬುದಾರರಾದ ನಾವು ಪರಮಾಣು ಶಕ್ತಿ ದೇಶಗಳ ಶಸ್ತ್ರಾಗಾರಗಳ, ಪರಮಾಣು ಶಸ್ತ್ರಾಸ್ತ್ರಗಳ ಅಸ್ತಿತ್ವ ಮುಂದುವರಿಯುತ್ತಿರುವುದನ್ನು ಕಂಡು ಹಾಗೂ ಇತರರು ಇವನ್ನು ಪಡೆಯುವ ಬೆದರಿಕೆ ಸದಾ ಇರುವುದನ್ನು ಕಂಡು ಆತಂಕಿತರಾಗಿದ್ದೇವೆ. ಇದು ವಿಶ್ವ ಶಾಂತಿ ಮತ್ತು ಭದ್ರತೆಗೆ, ಯಾರನ್ನು ರಕ್ಷಿಸಲು ನಾವು ನಮ್ಮನ್ನು ಸಮರ್ಪಿಸಿಕೊಂಡಿದ್ದೇವೆಯೋ ಆ ಜನತೆಯ ಸುರಕ್ಷಿತತೆ ಮತ್ತು ಉಳಿವಿಗೆ ಒಂದು ಗಂಡಾಂತರ"*

ಪೋಖ್ರಾನ್ ಪರೀಕ್ಷಣೆಗಳ ನಂತರ ಭಾರತದ ಕೆಲವು ಯೋಚನಾ ಶಕ್ತಿಯಿರುವ ಸೇನಾಧಿಕಾರಿಗಳು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

*"ಜನಗಳಿಗೆ ತಿನ್ನಲು ಸಾಕಷ್ಟು ಸಿಗದಾದಾಗ ರಾಜಕಾರಣಿಗಳ ಕೊರಳ ಸುತ್ತ ಹಾಕಿದ ಹೂಮಾಲೆಗಳು ಬೇಗನೇ ಉರುಳುಗಳಾಗಿ ಬಿಡುತ್ತವೆ"* ಎಂದು 'ಹಿಂದೂಸ್ತಾನ್ ಟೈಮ್ಸ್'ಗೆ ನೀಡಿದ ಸಂದರ್ಶನವೊಂದರಲ್ಲಿ ಮಿಲಿಟರಿ ಕಾರ್ಯಾಚರಣೆಗಳ ಮಹಾ ನಿರ್ದೇಶಕರಾಗಿ ನಿವೃತ್ತರಾದ ಲೆಫ್ಟಿನೆಂಟ್ ಜನರಲ್ ವಿ.ಆರ್. ರಾಘವನ್ ಹೇಳಿದ್ದಾರೆ.

ಈಗ ಶಸ್ತ್ರಾಸ್ತ್ರ ಪೈಪೋಟಿ ಆರಂಭವಾಗುತ್ತದೆ, ನಾವು ಸಾಂಪ್ರದಾಯಿಕ ಶಸ್ತ್ರಾಸ್ತ್ರಗಳಿಗೂ ಹೆಚ್ಚೆಚ್ಚು ಖರ್ಚು ಮಾಡಬೇಕಾಗುತ್ತದೆ. ಕಾಶ್ಮೀರ ಮತ್ತು ಚೀಣಾ ದೇಶದ ಗಡಿ ಸಮಸ್ಯೆಯು ತೀವ್ರತೆ ಕಮ್ಮಿಯಾಗುವುದಿಲ್ಲ, ಹೆಚ್ಚುತ್ತದೆ ಎನ್ನುತ್ತಾರೆ ಅವರು.

ಇನ್ನಿಬ್ಬರು ಹಿರಿಯ ನಿವೃತ್ತ ಸೇನಾಧಿಕಾರಿಗಳು - ಲೆಫ್ಟಿನೆಂಟ್ ಜನರಲ್ ಗುರುಬೀರ್ ಮಾನ್‌ಸಿಂಗ್ ಹಾಗೂ ಏರ್ ಮಾರ್ಷಲ್ ಜೆ. ಝಹೀರ್ 'ಟೈಮ್ಸ್ ಆಫ್ ಇಂಡಿಯಾ' ಗೆ ಬರೆದ ಪತ್ರದಲ್ಲಿ ಹೀಗೆ ಹೇಳಿದ್ದಾರೆ -

*"ನಾವು ಪರಮಾಣು ಶಸ್ತ್ರ ವಿರೋಧಿಗಳೊಂದಿಗೆ ನಮ್ಮ ಸೌಹಾರ್ದ ವ್ಯಕ್ತ ಮಾಡುತ್ತೇವೆ. ಅವರ ಧೈರ್ಯ, ಸಮಗ್ರತೆಯನ್ನು ಗಮನಿಸಿ ಅವರ ಯೋಚನೆ ಹಾಗೂ ಅಭಿವ್ಯಕ್ತಿಯ ಸ್ವಾತಂತ್ರ್ಯದ ಹಕ್ಕನ್ನು ಬೆಂಬಲಿಸುತ್ತೇವೆ. ಬಾಂಬು-ಪರ ಮತಾಂಧರ ಬೆದರಿಕೆಯ ಹಿಂಸಾಚಾರದ ತಂತ್ರಗಳನ್ನು ಬಲವಾಗಿ ಖಂಡಿಸುತ್ತೇವೆ".*

ಈಗಾಗಲೇ 'ಐಕ್ಯರಂಗ'ದಲ್ಲಿ ವರದಿಯಾಗಿರುವಂತೆ ನವದೆಹಲಿಯಲ್ಲಿ ನಡೆದ ಪರಮಾಣು ಶಸ್ತ್ರಾಸ್ತ್ರಗಳ ವಿರುದ್ಧದ ಸಮಾವೇಶದಲ್ಲಿ ಮಾತನಾಡುತ್ತಾ ನಿವೃತ್ತ ಭಾರತೀಯ ನಾವಿಕ ಪಡೆಯ ಮುಖ್ಯಸ್ಥ ಅಡ್ಮಿರಲ್ ಎಲ್. ರಾಮದಾಸ್ ಬಿ.ಜೆ.ಪಿ. ಸರಕಾರದ ಪರಮಾಣು ದುಸ್ಸಾಹಸವನ್ನು ಟೀಕಿಸಿದ್ದಾರೆ ಹಾಗೂ ಪರಮಾಣು ಅಸ್ತ್ರ ಒಂದು ಯುದ್ಧದ ಅಸ್ತ್ರವಾಗಿ ನಿಷ್ಪ್ರಯೋಜಕ ಎಂದಿದ್ದಾರೆ. ○

# ದಲಿತ ಬದುಕಿನ ನಿಜಲೋಕ

ಪುಸ್ತಕ ಪರಿಚಯ

ಡಾ. ಪಿ. ಭಂಡಾರಿ

**ದಂಗೆ (ಕಾದಂಬರಿ)**
**ಗೀತಾ ನಾಗಭೂಷಣ:**
**ನವಕರ್ನಾಟಕ-1997,**
**ಬೆಲೆ ರೂ. 65**

'ದಂಗೆ' ಗೀತಾ ನಾಗಭೂಷಣ ಅವರ ಕಾದಂಬರಿ. ಗೀತಾ ಅವರು ಪಳಗಿದ ಕಾದಂಬರಿ ಬರಹಗಾರರು. ಆದ್ದರಿಂದ ತಮ್ಮ ಯಾವುದೇ ಕಾದಂಬರಿಯಲ್ಲೂ ಓದುಗರ ಆತ್ಮೀಯತೆಯನ್ನು ಅವರು ಸಾಧಿಸುತ್ತಲೇ ಬಂದಿದ್ದಾರೆ. ಆದರೆ 'ದಂಗೆ' ಕಾದಂಬರಿ ಇದಕ್ಕೂ ಹೆಚ್ಚಿನ ಕೆಲವು ವಿಶಿಷ್ಟತೆಯನ್ನು ಸಾಧಿಸಿದೆ. 1. ಕಾದಂಬರಿಯ ನಾಯಕಿ ದುರ್ಗಿ ಎಂಬ ದಲಿತ ಮಹಿಳೆ. ಕಡು ಬಡತನದ ಮಧ್ಯೆ ಬದುಕುವ ಅವಳು ಅನಾಥೆ ಕೂಡ ಹೌದು. ಆದರೂ ಅವಳ ವ್ಯಕ್ತಿತ್ವ ಗಾಳಿಯಲ್ಲಿ ತೇಲಿಹೋಗುವಂತಹದಲ್ಲ. ಅದಕ್ಕೆ ತನ್ನದೇ ಆದ ವಿಶಿಷ್ಟತೆ ಇದೆ.

ತನ್ನದೇ ಅಕ್ಕನ ಗಂಡನಿಂದ ಆಕ್ರಮಣಕ್ಕೆ ಒಳಗಾದರೂ ಸೋತುಹೋಗದ ಅವಳು ಕೆಲಸ ಬಿಟ್ಟ ಗಂಡನನ್ನು ದುಡಿದೇ ಸಾಕುತ್ತಾಳೆ. ಆದರೆ ಅವನೂ ಮನೆ ಬಿಟ್ಟಾಗ, ಊರ ತನ್ನದೇ ಜನಾಂಗದ 'ಕಚ್ಚೆಹರಕರ' ಕೈಗೆ ಸಿಕ್ಕಬಾರದೆಂದು ಊರು ತೊರೆದು ಪರ ಊರು ಸೇರುತ್ತಾಳೆ. ಅಲ್ಲಿಯೂ ಅವಳದು ಪ್ರಾಮಾಣಿಕ ದುಡಿಮೆ. ಅಲ್ಲಿ ಅವಳು ಗೋವಿಂದಪ್ಪ ಎನ್ನುವ ಬ್ರಾಹ್ಮಣ ಸಾವುಕಾರನ ಪ್ರೀತಿಗೆ ಒಳಗಾಗಿ ಬದುಕುತ್ತಾಳೆ. ಅವಳು ಊರ ಜನರ ಕಣ್ಣಲ್ಲಿ ಸಾಹುಕಾರನ 'ಸೂಳೆ' ಆದರೂ ಹೆಂಡತಿಗೆ ಸಮವಾಗಿ ಬಾಳುತ್ತಾಳೆ. ಅವಳಿಗೆ ಓರ್ವ ಮಗಳಿರುತ್ತಾಳೆ. ಅವಳೂ ಮತ್ತು ಗೋವಿಂದಪ್ಪನ ಮಗನೂ ಒಟ್ಟಿಗೆ ಶಾಲೆ-ಕಾಲೇಜು ಕಲಿಯುತ್ತಾರೆ. ನಂತರ ಅವರು ಪ್ರೀತಿಗೆ ಸಿಲುಕಿ ಮದುವೆ ನಿರ್ಧಾರಕ್ಕೆ ಬರುತ್ತಾರೆ. ಇದನ್ನು ತಿಳಿದ ಗೋವಿಂದಪ್ಪ ದುರ್ಗಿಯ ಮಗಳನ್ನೇ ಕೊಲ್ಲಿಸಲು ಸಂಚು ಮಾಡುತ್ತಾನೆ. ಇದು ದುರ್ಗಿಗೆ ತಿಳಿದು ತಳಮಳಗೊಳ್ಳುತ್ತಾಳೆ. ಟ್ರೇನಿನಲ್ಲಿ ಪ್ರವಾಸ ಮಾಡುವಾಗ ಅವನನ್ನು ಕೆಳಗೆ ನೂಕಿ ಬಿಡುತ್ತಾಳೆ. ಹೀಗೆ ಅವರ ಮಕ್ಕಳ ಮದುವೆ ಸುರಕ್ಷಿತವಾಗುತ್ತದೆಂಬ ಸೂಚನೆ ಸಿಕ್ಕುತ್ತದೆ.

ದುರ್ಗಿಯ ಪಾತ್ರ ಒಂದು ಸುಸಂಬದ್ಧ ಬೆಳವಣಿಗೆಯಾಗಿದೆ. ಅಸಂಭವನೀಯತೆಯಿಲ್ಲ. ಹಾಗೂ ದಲಿತ ಪಾತ್ರಗಳಲ್ಲಿ ಒಂದು ಶಕ್ತಿ ಸ್ಥಾಪನೆ ಮಾಡುವಲ್ಲಿ ಯಶಸ್ವಿ.

ಕಾದಂಬರಿಯಲ್ಲಿ ಬರುವ ಜೀವಲೋಕ ದಲಿತಬದುಕಿನ ನಿಜಲೋಕವನ್ನು ತೆರೆದಿದೆ. ಅಲ್ಲಿಯ ಪಾತ್ರಗಳ ಆಸೆ, ಕನಸು, ದುರ್ಬಲತೆ, ಬಡತನ, ರೀತಿ ರಿವಾಜು, ಇವೆಲ್ಲ ಅದೇ ಭಾಷಾ ವಲಯದಲ್ಲೇ ಮೂಡಿಬಂದಿರುವುದರಿಂದ ಒಂದು 'ಜೀವಂತ ಜಗತ್ತು' ಬೆಳೆದು ನಿಲ್ಲುತ್ತದೆ. ಇಲ್ಲಿ ಯಾವುದೂ ಅತಿಶಯೋಕ್ತಿಯಲ್ಲ. ಯಾವುದೂ ಕಪ್ಪುಬಿಳುಪು ಪಾತ್ರವಿಲ್ಲ. ಯಾವುದೇ ಬೇಕಂತಲೇ ಸೃಷ್ಟಿಸಿದ್ದೆಂಬಂಥ ಪಾತ್ರವಿಲ್ಲ. ಅವರೆಲ್ಲ ತಮ್ಮ ತಮ್ಮ ಮಿತಿ ಮತ್ತೆ ವಾತಾವರಣದಲ್ಲಿ ತಾವಾಗಿ ಬದುಕುವ ಪಾತ್ರ. ಇಡೀ ಕಾದಂಬರಿಯ ಹೆಚ್ಚಳ ಇರುವುದೇ ಈ ವಾತಾವರಣ ಸೃಷ್ಟಿಗಾಗಿ. 2. ಕಾದಂಬರಿಯಲ್ಲಿ ಉದ್ದೇಶಪೂರ್ವಕ ಬಂಡಾಯ ಇಲ್ಲದಿದ್ದರೂ ಪಾತ್ರಗಳ ಆಳದಲ್ಲಿ ಸಾವಕಾಶ ಅದರ ಚಲನವಲನ ರೂಪಗೊಂಡಿದೆ. ದುರ್ಗಿಯೇ ಒಂದು ಅಂಥ ಪಾತ್ರ. ದಲಿತ ಮಹಿಳೆ ದುರ್ಗಿಯೂ ಬ್ರಾಹ್ಮಣ ಗೋವಿಂದಪ್ಪನಿಗೂ ಸಂಬಂಧ ಬೆಳೆದು ದಂಪತಿಗಳಂತಾಗುವುದು ಒಂದಾದರೇ, ಅವಳ ಮಗಳು ಸುಮತಿ ಮತ್ತು ಗೋವಿಂದಯ್ಯನ ಮಗ ಸೀನು ಇವರ ವಿವಾಹ ನಿಶ್ಚಯ ಸ್ವಯಂ ನಿರ್ಣಯದಲ್ಲಿ ಪರಿಣಾಮಗೊಳ್ಳುವುದು ಇನ್ನೊಂದು. ಗೋವಿಂದಪ್ಪ, ದುರ್ಗಿಯನ್ನು ಇಟ್ಕೊಂಡಿದ್ದನ್ನು ನೋಡಿದ (ಆತನಿಗೆ ದುರ್ಗಿಯ ಮೇಲೆ ಮನಸ್ಸಿತ್ತು) ಹೇಳುವ ಮಾತು ಹೀಗೆ:

ಯಾಕೆ ಸುಲಸ್ತನೋ? ನಮ್ ಕುಂಡ್ಯಾಗೆ ದಮ್ಮಿಲ್ಲಂತ ಹೇಳು. ನಮ್ಮಂದಿ ಹೆಣ್ಣಗೋಳಿಗೆ ಅವು ಇಟಗೊಂಡು ಸುಖ ಉಣ್ತಾರ ಮಕ್ಕಳು. ಅದೇ ಆ ಮಂದಿ ಹೆಂಗಸರಿಗಿ ನಾವು ಇಟ್‌ಗೊಂಡು ಸುಖ ಪಡಲಕ್ಕ ಬಿಡ್ತಾರೇನು ಹೇಳು? ರೋಚನ ರಂಚಿ ಆಕಿ, ಕುಕ್ಕಣ್ಣೆ ಆಕಿಗ ಇಟಗೊಂಡಾನ ಅಂತೆಲ್ಲಾ ಅಂತಾರವರು ನಮ್ಮ ಹೆಂಗಸರಿಗಿ ....."

ಅವರ ಸಾಮಾಜಿಕ ಪರಿಸ್ಥಿತಿಯಲ್ಲಿ ಅದು ಪ್ರಕಟವಾಗಲು ಸಾಧ್ಯವಾಗದಿದ್ದರೂ ಒಳಗೊಳಗೇ ಕುದಿಗೊಳ್ಳತ್ತದೆ. ಸಂದರ್ಭ ಸಿಕ್ಕಾಗ ಅದು ಸ್ಫೋಟಗೊಳ್ಳಲೂ ಸಾಧ್ಯವಿದೆ ಎಂಬಂತಿದೆ ಸಮಾಜದ ಸ್ಥಿತಿ. ಸೀಮ ಸೀನನ ಮದುವೆಗೆ ಗೋವಿಂದಪ್ಪ ಅಡ್ಡಿಯಾಗುತ್ತಾನೆಂದಾಗ ಬೆಟ್ಟಪ್ಪ 'ನೀ ಹಿಂಗೆಲ್ಲಾ ಅಂಜಬೇಡವ್ವ. ಯಾವ ಕಾಲಕ್ಕೆ ಏನ್ ನಡೀಬೇಕು ಅದು ನಡೀತದ. ಪರಸಂಗ ಬಂದರ ನಮಗೆ ಕೇರಿ ಮಂದ್ಯೆಲ್ಲಾ ಒಂದಾಗ ನಿಂದಿರ್ತೀವಿ" ಎಂದು ಅನ್ನುತ್ತಾನೆ.

ಇನ್ನು ಉಳಿದದ್ದು ಗೀತಾ ಅವರ ಎಂದಿನ ಶೈಲಿ ಇದ್ದೇ ಇದೆ. ಉದಾಹರಣೆಗೆ ಕೊನೆಯಲ್ಲಿ ದುರ್ಗಿ ಗೋವಿಂದಪ್ಪನನ್ನು ಟ್ರೇನಿನಿಂದ ಹೊರ ದೂಡಬೇಕಾಗುವ ಪ್ರಸಂಗವಂತೂ ತುಂಬಾ ಸಿನಿಮಿಕ್ ಆಗಿದೆ. ಹಾಗೆಯೇ ಕೆಲವು ಘಟನೆಗಳ ಜೋಡಣೆ ಕೂಡ.

'ದಂಗೆ' ಒಂದು ಸಾಮೂಹಿಕ ದಂಗೆಯಾಗಿರದೆ ಒಂದು ವೈಯಕ್ತಿಕ ಪ್ರಕ್ರಿಯೆ ಆಗಿದೆ. ಆದರೂ ಪ್ರತಿಗಾಮಿ ಆಗಿರದಿರುವುದು ನಿಚ್ಚಳವಾಗಿದೆ.

# ಚುರುಕುಗೊಳ್ಳುವುದೆಂದು?

ಪುಟ 1 ರಿಂದ

ಉಂಟಾದ ಗೊಂದಲಕ್ಕೆ ತೆರೆಯು ಎಳೆಯಲ್ಪಡುವುದು, ಆಡಳಿತೆಯು ಚುರುಕುಗೊಳ್ಳುವುದು ಎಂದು ಆಸೆ ಇಟ್ಟುಕೊಂಡಿದ್ದ ರಾಜ್ಯ ಜನತೆಗೆ ಈಗ ನಿರಾಶೆಯಾಗಿದೆ.

ಕಾರಣ - ಮಂತ್ರಿ ಮಂಡಳದ ಪುನರ್ರಚನೆ ಈಗ ಸದ್ಯಕ್ಕೆ ಇಲ್ಲ.

ಅದೇ ವೇಳೆ, ಎಲ್ಲ ಮಂಡಳಿಗಳಿಗೆ ಅಧ್ಯಕ್ಷರಿಂದ ರಾಜಿನಾಮೆ ಪಡಕೊಂಡು (ಹೊಸ ಅಧ್ಯಕ್ಷರನ್ನು ನೇಮಕ ಮಾಡುವ ಉದ್ದೇಶದಿಂದ)ದ್ದು ಇದೀಗ ನಿರರ್ಥಕವಾಗಿದೆ. ಮಂಡಳಿಗಳು ಮೊದಲೇ ಕ್ರಿಯಾವಿಹೀನತೆಗೆ ಹೆಸರುವಾಸಿಯಾಗಿದ್ದರೆ, ಇದೀಗ ಅಧಿಕಾರಯುತವಾಗಿ 'ನಿಷ್ಪ್ರಯೋಜಕ'ವಾಗಿ ಕುಳಿತಿರುವಂತಾಗಿದೆ.

ಒಟ್ಟಿನಲ್ಲಿ ಜನತಾದಳ ಪಕ್ಷವು ಇಂದಿನ ರಾಜ್ಯ ಮತ್ತು ದೇಶದ ರಾಜಕೀಯ ಗಂಭೀರತೆಯನ್ನು ಕಂಡುಕೊಂಡು, 'ಕ್ರಿಯಾತ್ಮಕ'ವಾಗುವುದರ ಬದಲು "ತಮ್ಮ ಪರಸ್ಪರ ಅಧಿಕಾರಕ್ಕಾಗಿ ಕಿತ್ತಾಟ ಮಾಡುವ ಜಾಯಮಾನ"ವನ್ನು ಬಿಟ್ಟುಬಿಡಲು ವಿಫಲರಾಗಿದ್ದಾರೆ. ಆದ ಕಾರಣ, ಇನ್ನಷ್ಟು ಹೆಚ್ಚೆಚ್ಚು ಜನತೆಯ ಜುಗುಪ್ಸೆಗೆ ಕಾರಣೀಭೂತರಾಗಿದ್ದಾರೆ.

ಇದೇ ವೇಳೆಗೆ ಗುಲ್ಬರ್ಗಾದ ನಾಗರಿಕರಲ್ಲಿ ಅತ್ಯಧಿಕ ಮಂದಿ ಮಾಲಿಕಯ್ಯ ಗುತ್ತೇದಾರರನ್ನು ಮಂತ್ರಿ ಮಂಡಳದಿಂದ - ಅವರ ಮೇಲೆ ಕೊಲೆಗಳ ಆಪಾದನೆ ದಟ್ಟವಾದುದರಿಂದ - ಹೊರಗಿಡಬೇಕೆಂದು ಚಳುವಳಿ ಮಾಡಿದರೂ, ಜೆ.ಎಚ್. ಪಟೇಲರು ಈ ಬಗ್ಗೆ ಮೌನ ತಾಳಿರುವುದು ಆಡಳಿತೆಯ ಮತ್ತು ನೈತಿಕತೆಯ ದೃಷ್ಟಿಯಿಂದ ತೀರಾ ಖೇದಕರವಾಗಿದೆ. ಇಂದಿನ ಸುದ್ದಿ ಪ್ರಕಾರ ಆಳಂದದ ಜನತಾದಳದ ಎಂ.ಎಲ್.ಎ.ಯ ಮೇಲೆ ಶೋಲಾಪುರದ ಪೋಲೀಸರು 'ಜಾಮೀನು ರಹಿತ ವಾರೆಂಟ್' ಹೊರಡಿಸಿದ್ದಾರೆ. ಇಷ್ಟಾದರೂ ಎಚ್ಚೆತ್ತು ಸೂಕ್ತ ಕ್ರಮವನ್ನು ಜೆ.ಎಚ್. ಪಟೇಲರು ಈ ವಿಷಯದಲ್ಲಿ ಕೈಗೊಳ್ಳುವರು ಎಂದು ನಿರೀಕ್ಷಿಸೋಣವೇ?

# ಸ್ವಯಂಕೃತಾಪರಾಧಗಳಿಂದಲೇ ಅಸ್ಥಿರತೆ

ಪುಟ 1 ರಿಂದ

ಭಾರತ ಒಂದು ಪರಮಾಣು ಶಸ್ತ್ರಸಂಪನ್ನ ದೇಶ ಎಂದು ಅಮೇರಿಕಾ ಯಾವ ರೀತಿಯಲ್ಲೂ ಒಪ್ಪಲೂ ಸಿದ್ಧವಿಲ್ಲ. ಬಿ.ಜೆ.ಪಿ. ಸರಕಾರದಿಂದ ಅದು ಸಂಪೂರ್ಣ ಶರಣಾಗತಿಯನ್ನೇ ನಿರಿಕ್ಷಿಸುತ್ತದೆ. ಹೀಗೆ ಅಮೇರಿಕಾವನ್ನು ಸಂತುಷ್ಟಗೊಳಿಸುವ ನಿಲುವಿನಲ್ಲಿ ಅಡಕವಾಗಿರುವ ಅಪಾಯವನ್ನು ಅರಿಯಬೇಕು ಎಂದು ಪ್ರಕಾಶ್ ಕಾರಟ್ ಹೇಳಿದ್ದಾರೆ. ಬಿ.ಜೆ.ಪಿ. ಬಾಂಬಿನ ಅಜೆಂಡಾ ದೇಶವನ್ನು ಇಂತಹ ಸ್ಥಿತಿಗೆ ತಂದಿಟ್ಟಿದೆ.

## ಎಂತಹಾ ಶೋಚನೀಯ ಸ್ಥಿತಿ

ಸ್ವತಃ ಬಿ.ಜೆ.ಪಿ. ಆಂತರಿಕವಾಗಿ ಕೂಡಾ ಶೋಚನೀಯ ಸ್ಥಿತಿ ತಂದುಕೊಂಡಿದೆ. ಅದರ ಮಿತ್ರ ಪಕ್ಷಗಳೊಡನೆ ನೀತಿ ಬಾಹಿರ ಕಿತ್ತಾಟ ಈಗ ಬಿ.ಜೆ.ಪಿ.ಯನ್ನೂ ತಟ್ಟಿರುವಂತೆ ಕಾಣುತ್ತದೆ. ಬಿಜೆಪಿಯ ರಾಷ್ಟ್ರೀಯ ಉಪಾಧ್ಯಕ್ಷ ಹಾಗೂ ದಿಲ್ಲಿಯ ಒಬ್ಬ ಸಂಸತ್ ಸದಸ್ಯರಾದ ಕೆ.ಎಲ್. ಶರ್ಮರವರು ರಾಜಧಾನಿಯ ನಾಗರಿಕರ ವಿದ್ಯುತ್, ನೀರಿನ ಸಮಸ್ಯೆಗಳನ್ನು ಪರಿಹರಿಸುವಲ್ಲಿ ದಿಲ್ಲಿಯ ಸರಕಾರದ ವಿಫಲತೆಯ ವಿರುದ್ಧ ಕೈಗೊಂಡ ಭಾಗಶಃ 'ಉಪವಾಸ'ದ ಶೋಚನೀಯ ದೃಶ್ಯವನ್ನು ದೇಶ ಕಾಣಬೇಕಾಯಿತು. ಕೇಂದ್ರದಲ್ಲೂ, ದಿಲ್ಲಿಯಲ್ಲೂ ಬಿ.ಜೆ.ಪಿ. ಸರಕಾರಗಳಿರುವಾಗ ಬಿ.ಜೆ.ಪಿ. ವಕ್ತಾರರಿಂದಲೇ ಇಂತಹ 'ಪ್ರತಿಭಟನಾ ಮುಷ್ಕರ' ಈ ಸರಕಾರದ, ಆಳುವ ಪಕ್ಷದ ಶೋಚನೀಯ ಸ್ಥಿತಿಯ ಉದಾಹರಣೆ ಎಂದು ಪ್ರಕಾಶ್ ಕಾರಟ್ ಹೇಳಿದ್ದಾರೆ.

# 'ಹಿರೋಶಿಮಾದ ನೋವು' ವಾಜಪೇಯಿಗೆ ಪೀಡೆ!

ವಾಜಪೇಯಿಯವರು ಪ್ರಧಾನ ಮಂತ್ರಿಯಾಗಿ ಪರಮಾಣು ಬಾಂಬುಗಳ ಪರೀಕ್ಷಣೆಗೆ ಆದೇಶ ನೀಡುತ್ತಾ, ಅದರ ಯಶಸ್ಸಿಗೆ ವಿಜ್ಞಾನಿಗಳಿಗೆ ಅಭಿನಂದನೆ ಸಲ್ಲಿಸುತ್ತಿದ್ದಾಗ, ಅಲ್ಲೇ ದಿಲ್ಲಿಯಲ್ಲಿ ಅವರೇ ಬರೆದ 'ಹಿರೋಶಿಮಾ ಕೀ ಪೀಡಾ' (ಹಿರೋಶಿಮಾದ ನೋವು) ಗೀತ ಮಾಲಿಕೆಯ ನೃತ್ಯ ರೂಪಕದ ಪ್ರದರ್ಶನ ನಡೆಯುತ್ತಿತ್ತಂತೆ. ಈ ನಾಟಕದ ನಿರ್ದೇಶಕಿ ಅರ್ಚನಾ ಭೋಸ್ಲಾ ಎನ್.ಎಸ್.ಡಿ. ಪದವೀಧರೆ ಹಾಗೂ ಬಿ.ಜೆ.ಪಿ. ಸದಸ್ಯೆಯೂ ಹೌದು. ಈ ನಾಟಕದಲ್ಲಿ ವಾಜಪೇಯಿಯವರ ಕವನದ ಸಾಲುಗಳ ಭಾವ ಹೀಗಿದೆ-


'ಹಿರೋಶಿಮಾ ನಾಗಾಸಾಕಿಯಲ್ಲಿ ಎರಡು ಲಕ್ಷಕ್ಕೂ ಅಧಿಕ ಮುಗ್ಧರ ಪ್ರಾಣ ಹೀರಿ ಇತರ ಲಕ್ಷಾಂತರ ಜನರನ್ನು ವಿಕಲಾಂಗ ಮಾಡಿದ ಹೇ ವೈಜ್ಞಾನಿಕರೇ, ನಿಮಗೆ ಒಂದು ಕ್ಷಣವಾದರೂ ಪಶ್ಚಾತಾಪದ ಅನುಭೂತಿ ಆಗಿದೆಯೇ? ಆಗಿದ್ದರೆ ಕಾಲ ನಿಮ್ಮನ್ನು ಕಟಕಟೆಯಲ್ಲಿ ನಿಲ್ಲಿಸುವುದಿಲ್ಲ; ಆಗದಿದ್ದರೆ, ಇತಿಹಾಸ ನಿಮ್ಮನ್ನು ಎಂದೂ ಕ್ಷಮಿಸುವುದಿಲ್ಲ"

ನಾಟಕದ ನಿರ್ದೇಶಕಿಗೆ ಈ ಪ್ರದರ್ಶನದ ಬಗ್ಗೆ ಗೊತ್ತಿರಲಿಲ್ಲವಂತೆ. ಇದರಿಂದ ಬಿ.ಜೆ.ಪಿ.ಯ ಹಲವು ಮುಖಂಡರ ಕಣ್ಣು ಕೆಂಪಾಯಿತಂತೆ. ಗೀತ ನಾಟಕ ಹಠಾತ್ ನಿಂತಿದೆ.

(ಕೃಪೆ : ಸುಧಾ)

## ವಾರದ ವ್ಯಂಗ್ಯ ಚಿತ್ರ

'ಟೈಮ್ಸ್ ಆಫ್ ಇಂಡಿಯಾ'ದಲ್ಲಿ ಆರ್.ಕೆ.ಲಕ್ಷ್ಮಣ್




Reg. No. 17015/64 KRNM/BGS-405 MAG(2) PRBDECR 319-79/79 AIKYARANGA WEEKLY

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ. ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು 27 ಫೋನ್ ನಂ. 2236462.
ವ್ಯವಸ್ಥಾಪಕ ಕಛೇರಿ: ನಂ. 24, 5ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು 9 ಮುದ್ರಣ: ಕಂಠೀರವ ಆಫ್‌ಸೆಟ್, ನಂ. 6, 7ನೇ ಮುಖ್ಯರಸ್ತೆ, ಎಸ್.ಆರ್. ನಗರ, ಬೆಂ. 27